ರಂಜನೆ ಬೋಧನೆ ಪ್ರತಿಭಟನೆ

ಲಂಕೇಶ್

ಜೂನ್ 3, 2009 ರೂ. 12/-



ಚಿರು ದುರ್ಗತಿ



ಬೈ ಈಳಂ



ತುಮಕೂರು:
ನೂರ್‌ಸೀಮಾಳ
ರೇಪ್ & ಮರ್ಡರ್



ಭಿನ್ನಮತೀಯ
ಹೋರಿ




ಶೋಬಾಗೆ ಗೇಟ್‌ಪಾಸ್
ಭಾರತಿ ಶೆಟ್ಟಿ
ಪಟ್ಟದರಸಿ!

KCOCA ತಿದ್ದುಪಡಿಗಳು

ಇದೋ! ಶುರುವಾಯ್ತು

BJP ಭಯೋತ್ಪಾದನೆ

ರಾಜ್ಯ ಬಿಜೆಪಿ ಸರ್ಕಾರ ತನ್ನ ವ್ಯಾಪ್ತಿಗೆ ಒಳಪಟ್ಟು ಒಂದು ಭಯೋತ್ಪಾದನಾ ವಿರೋಧಿ ಕಾಯಿದೆಯನ್ನು ಜಾರಿಗೆ ತರಲು ಮುಂದಾಗಿದೆ. ಇದಕ್ಕಾಗಿ ಕಳೆದ ಹತ್ತು ವರ್ಷಗಳಿಂದ ರಾಜ್ಯಪಾಲರ ಸಹಿ ಪಡೆಯದೆ ನೆನೆಗುದಿಗೆ ಬಿದ್ದಿದ್ದ KCOCA- ಕರ್ನಾಟಕ ಸಂಘಟಿತ ಅಪರಾಧಗಳ ತಡೆ ಕಾಯಿದೆ (ಕೋಕಾ)- ಗೆ ಹಲವಾರು ತಿದ್ದುಪಡಿ ತಂದು ಅದನ್ನೇ ಭಯೋತ್ಪಾದನಾ ವಿರೋಧಿ ರಾಜ್ಯ ಕಾಯಿದೆಯಾಗಿ ಬಳಸಿಕೊಳ್ಳಲು ತೀರ್ಮಾನಿಸಿದೆ.



ಕಳೆದ ನವಂಬರ್ 21ರಂದು ಮುಂಬೈ ಮೇಲೆ ಟೆರರಿಸ್ಟರ ದಾಳಿ ನಡೆಯಿತಲ್ಲವೇ? ಅದನ್ನು ತಡೆಗಟ್ಟಲಾಗದ ಕೇಂದ್ರದ ಮತ್ತು ಮಹಾರಾಷ್ಟ್ರದ ಕಾಂಗ್ರೆಸ್ ಸರ್ಕಾರಗಳ ಬಗ್ಗೆ ಪ್ರತಿಪಕ್ಷವಾದ ಬಿಜೆಪಿ ವಾಗ್ಯುದ್ಧವನ್ನೇ ನಡೆಸಿತ್ತು. ಅಷ್ಟು ಮಾತ್ರವಲ್ಲ ಕಳೆದ ಫೆಬ್ರವರಿಯಲ್ಲಿ ನಡೆದ ರಾಜಸ್ಥಾನ ಮತ್ತು ದೆಹಲಿ ವಿಧಾನ ಸಭಾ ಚುನಾವಣೆಗಳಲ್ಲೂ ಮತ್ತು ಮೊನ್ನಿನ ಲೋಕಸಭಾ ಚುನಾವಣೆಗಳಲ್ಲೂ ಅದನ್ನೇ ಪ್ರಮುಖ ಇಷ್ಯೂವನ್ನಾಗಿಯೂ ಮಾಡಿತ್ತು. ಬಿಜೆಪಿ ಅಧಿಕಾರದಲ್ಲಿದ್ದಾಗ ಜಾರಿಗೆ ತಂದಿದ್ದ POTA ಕಾಯಿದೆಯನ್ನು ಕಾಂಗ್ರೆಸ್ ಸರ್ಕಾರ ರದ್ದು ಮಾಡಿದ್ದೇ ಭಯೋತ್ಪಾದಕ ದಾಳಿ ಹೆಚ್ಚಲು ಕಾರಣ ಎಂದು ಪ್ರಚಾರ ಮಾಡಿತ್ತು. ಆದರೆ ಬಿಜೆಪಿಯ ಈ ತಂತ್ರ ಚುನಾವಣೆಗಳಲ್ಲಿ ಏನೂ ಫಲ ನೀಡದೆ ಉಕ್ಕಿನ ಮನುಷ್ಯ ಅಡ್ವಾನಿಯ ಪಾರ್ಟಿ ಮಂಜಿನಂತೆ ಕರಗಿಹೋಗಿರುವುದು ಈಗ ಇತಿಹಾಸ!





ಆದರೆ ಕರ್ನಾಟಕದಲ್ಲಿ ಬಿಜೆಪಿಯು ದೇಶ ರಕ್ಷಣೆಯ ವಿಷಯದಲ್ಲಿ ತಾನು ಕಾಂಗ್ರೆಸ್‌ಗಿಂತ ಹೆಚ್ಚು ಬದ್ಧ ಎಂದು ತೋರಿಸಿಕೊಳ್ಳಲು ಯತ್ನಿಸುತ್ತಿದೆ. ವಾಸ್ತವವಾಗಿ ಕೇಂದ್ರ ಸರ್ಕಾರ POTA ದ ರೀತಿಯೇ ಕಾನೂನುಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯಿದೆಯನ್ನು – Unlawful Activities Prevention Act (ULPA)- ಜಾರಿಗೆ ತಂದಿದೆ. ಅಲ್ಲದೆ ಮುಂಬೈ ದಾಳಿಯಾದ ನಂತರ POTA ದಲ್ಲಿದ್ದ ಎಲ್ಲಾ ಪ್ರಜಾತಂತ್ರ ವಿರೋಧಿ ಅಂಶಗಳನ್ನು ಅದರಲ್ಲಿ ಸೇರಿಸಿಕೊಂಡಿದೆ. ಹೀಗಿದ್ದರೂ ತಾನು ಕೇಂದ್ರಕ್ಕಿಂತ ದೇಶಭಕ್ತನೆಂದು ತೋರಿಸಿಕೊಳ್ಳುವ ಸಲುವಾಗಿ ರಾಜ್ಯ ಬಿಜೆಪಿ ಸರ್ಕಾರ ತನ್ನ ವ್ಯಾಪ್ತಿಗೆ ಒಳಪಟ್ಟು ಒಂದು ಭಯೋತ್ಪಾದನಾ ವಿರೋಧಿ ಕಾಯಿದೆಯನ್ನು ಜಾರಿಗೆ ತರಲು ಮುಂದಾಗಿದೆ. ಇದಕ್ಕಾಗಿ ಕಳೆದ ಹತ್ತು ವರ್ಷಗಳಿಂದ ರಾಜ್ಯಪಾಲರ ಸಹಿ ಪಡೆಯದೆ ನೆನೆಗುದಿಗೆ ಬಿದ್ದಿದ್ದ KCOCA- ಕರ್ನಾಟಕ ಸಂಘಟಿತ ಅಪರಾಧಗಳ ತಡೆ ಕಾಯಿದೆ (ಕೋಕಾ)- ಗೆ ಹಲವಾರು ತಿದ್ದುಪಡಿ ತಂದು ಅದನ್ನೇ ಭಯೋತ್ಪಾದನಾ ವಿರೋಧಿ ರಾಜ್ಯ ಕಾಯಿದೆಯಾಗಿ ಬಳಸಿಕೊಳ್ಳಲು ತೀರ್ಮಾನಿಸಿದೆ.

ಈ ಹಿನ್ನೆಲೆಯಲ್ಲಿ ಕಳೆದ ಫೆಬ್ರವರಿಯಲ್ಲಿ ಬಿಜೆಪಿ ಸರ್ಕಾರ KCOCA ಕಾಯಿದೆಗೆ ಹಲವಾರು ತಿದ್ದುಪಡಿಗಳನ್ನು ಮಾಡಿತು. ಅವುಗಳಿಗೆ ಮುಂಬರುವ ಅಧಿವೇಶನದಲ್ಲಿ ವಿಧಾನಸಭೆಯ ಒಪ್ಪಿಗೆಯನ್ನು ಪಡೆದುಕೊಳ್ಳಬೇಕಿತ್ತು. ಆದರೆ ಲೋಕಸಭಾ ಚುನಾವಣೆ ಘೋಷಣೆಯಾದ ನಂತರ ಸದ್ಯಕ್ಕೆ ವಿಧಾನ ಮಂಡಲ ಅಧಿವೇಶನ ಕರೆಯಲು ಸಾಧ್ಯವಿಲ್ಲ ಎಂಬ ನೆಪವನ್ನು ಬಳಸಿಕೊಂಡಿರುವ ಬಿಜೆಪಿ ಸರ್ಕಾರ ತುರ್ತು ಸಂಪುಟ ಸಭೆ ಸೇರಿ ಮೇ ಎರಡು KCOCA ಕಾಯಿದೆಯನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೆ ತರಲು ತೀರ್ಮಾನಿಸಿದೆ.

ಹೀಗೆ ಬಿಜೆಪಿ ಸರ್ಕಾರ ವಿಧಾನಸಭೆಯ ಅನುಮೋದನೆಯೇ ಇಲ್ಲದೆ KCOCA ಕಾಯಿದೆಗೆ ತುಂಬಾ ಗಂಭೀರ ಪರಿಣಾಮ ಬೀರಬಲ್ಲ ತಿದ್ದುಪಡಿಗಳನ್ನು ಮಾಡಿದೆ. ಅದರಲ್ಲಿ ಅತ್ಯಂತ ಪ್ರಮುಖವಾದದ್ದು "ಭಯೋತ್ಪಾದನಾ" ಚಟುವಟಿಕೆಗಳನ್ನೂ ಈ "ಸಂಘಟಿತ ಅಪರಾಧ"ದ ಚೌಕಟ್ಟಿನೊಳಗೆ ತಂದಿರುವುದು. 1996ರ ನಂತರ ವಿಶ್ವಬ್ಯಾಂಕಿನ ಸಲಹೆಯ ಮೇರೆಗೆ ಹಲವಾರು ದೇಶಗಳು "ಸಂಘಟಿತ ಅಪರಾಧ" ನಿಯಂತ್ರಣ ಕಾಯಿದೆಯನ್ನು ಜಾರಿಗೆ ತರಲು ಪ್ರಾರಂಭಿಸಿದವು. ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಈ ಬಗೆಯ ಸಂಘಟಿತ ಅಪರಾಧ ನಿಯಂತ್ರಣ ಕಾಯಿದೆಯನ್ನು ಜಾರಿಗೆ ತಂದ ರಾಜ್ಯ ಮಹಾರಾಷ್ಟ್ರ. MCOCA ಕಾಯಿದೆ ಎಂದು ಕರೆಯಲಾದ ಆ ಕಾಯಿದೆಯೇ ಕರ್ನಾಟಕದ KCOCA ಹಾಗೂ ಇನ್ನು ಹಲವು ರಾಜ್ಯಗಳ ಸಂಘಟಿತ ಅಪರಾಧ ನಿಯಂತ್ರಣ ಕಾಯಿದೆಗಳ ತಾಯಿ. ಇದು ಮೂಲಭೂತವಾಗಿ ಕಳ್ಳಸಾಗಣೆ ಅಥವಾ ದೇಶದ ಆರ್ಥಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದ್ದ ಸಂಘಟಿತ ಗ್ಯಾಂಗುಗಳ ಅಪರಾಧವನ್ನು ನಿಯಂತ್ರಿಸುವ ಉದ್ದೇಶ ಹೊಂದಿತ್ತು. ಈ ಕಾಯಿದೆಗಳಡಿ ಈವರೆಗೆ ಬಂಧಿತರಾದ ವ್ಯಕ್ತಿಗಳು ಛಾಪಾ ಕಾಗದ ಹಗರಣದ ತೆಲಗಿಯಂಥವರೇ. KCOCA ಕಾಯಿದೆಯ ಮೂಲ ಸ್ವರೂಪದಲ್ಲಿ – Promoting Insurgency- "ದಂಗೆಗೆ ಬೆಂಬಲ ನೀಡುವವರನ್ನೂ" ಈ ಕಾಯಿದೆಯ ವ್ಯಾಪ್ತಿಗೆ ತಂದಿದ್ದರೂ ಈವರೆಗೆ ಅದು ರಾಜಕೀಯ ಹೋರಾಟಗಾರರನ್ನು ಅಥವಾ ಭಯೋತ್ಪಾದನೆ ಎಂದು ಕರೆಸಿಕೊಳ್ಳಲ್ಪಡುವ ಚಟುವಟಿಕೆಗಳನ್ನು ತನ್ನ ವ್ಯಾಪ್ತಿಯ ಅಪರಾಧಗಳಲ್ಲಿ ಸೇರಿಸಿಕೊಂಡಿರಲಿಲ್ಲ.

ಆದರೆ ಕರ್ನಾಟಕದ ಬಿಜೆಪಿ ಸರ್ಕಾರ ಈ ಕಾಯಿದೆಗೆ ತಂದಿರುವ ತಿದ್ದುಪಡಿಗಳಲ್ಲಿ ಅತ್ಯಂತ ಪ್ರಮುಖವಾದದ್ದು "ಭಯೋತ್ಪಾದನಾ ಚಟುವಟಿಕೆಗಳನ್ನು" ಸಹ ಈ ಸಂಘಟಿತ ಅಪರಾಧದ ವ್ಯಾಪ್ತಿಯಲ್ಲಿ ತಂದಿರುವುದು. ಕಾನೂನು ಸುವ್ಯವಸ್ಥೆ ಮೂಲಭೂತವಾಗಿ ರಾಜ್ಯಗಳಿಗೆ ಸಂಬಂಧಪಟ್ಟ ವಿಷಯವೇ ಆದರೂ ಭಯೋತ್ಪಾದನೆ, ದೇಶದ ಭದ್ರತೆ ಇತ್ಯಾದಿಗಳಿಗೆ ಸಂಬಂಧಪಟ್ಟಂತಹ ಕಾನೂನುಗಳನ್ನು ಕೇಂದ್ರ ಸರ್ಕಾರವೇ ರೂಪಿಸುತ್ತದೆ. ಉದಾಹರಣೆಗೆ ಪೋಟಾ, ಅದರ ಹಿಂದಿನ ಟಾಡಾ, ಅದಕ್ಕೂ ಹಿಂದಿನ ಮೀಸಾ ಇನ್ನಿತ್ಯಾದಿ ಕಾಯಿದೆಗಳು. ಆದರೆ ಕರ್ನಾಟಕ ಸರ್ಕಾರ ಕೋಕಾ ಕಾಯಿದೆಗೆ ತಂದಿರುವ ತಿದ್ದುಪಡಿಯಲ್ಲಿ ಭಯೋತ್ಪಾದನಾ ಚಟುವಟಿಕೆಗಳನ್ನೂ ಸೇರಿಸಿ ತನ್ನ ವ್ಯಾಪ್ತಿಯನ್ನು ಮೀರಿದೆ.

ನಮ್ಮ ದೇಶದ ಪ್ರಭುತ್ವ ರಚನೆಯ ಹಿಂದಿನ ಸಿದ್ಧಾಂತವೇ ವ್ಯಕ್ತಿಗತ ಸ್ವಾತಂತ್ರ್ಯವನ್ನು ಖಾತರಿಪಡಿಸುವ ಉದಾರವಾದಿ ಸ್ವರೂಪದ್ದು. ಹೀಗಾಗಿ ಪೊಲೀಸರಿಗೆ ವಿಶೇಷ ಅಧಿಕಾರವನ್ನು ನೀಡುವ ಯಾವುದೇ ಕಾನೂನನ್ನು ಜಾರಿ ಮಾಡುವ ಮೊದಲು ವಿನಾಕಾರಣ ವ್ಯಕ್ತಿಗಳ ಸ್ವಾತಂತ್ರ್ಯಹರಣ ಆಗುವಂಥ ಅಂಶಗಳು ಇಲ್ಲದಂತೆ ಮಾಡುವ ಸೂಕ್ತ ಸಮತೋಲನವನ್ನು ಕಾಯಿದೆಯಲ್ಲಿ ಅಳವಡಿಸಬೇಕು. ಆದ್ದರಿಂದಲೇ ಇಂತಹ ಕಾನೂನುಗಳನ್ನು ಸಾಮಾನ್ಯವಾಗಿ ಸುಗ್ರೀವಾಜ್ಞೆಯ ಮೂಲಕ ಜಾರಿಗೆ ತರುವುದಿಲ್ಲ. ಆದರೆ ಬಿಜೆಪಿ ಆ ಎಲ್ಲಾ ಉದಾರವಾದಿ ಸಂಪ್ರದಾಯಗಳನ್ನು ಗಾಳಿಗೆ ತೂರಿದೆ. ಹೀಗಾಗಿ ಪೊಲೀಸರ ಅಧಿಕಾರ ದುರ್ಬಳಕೆಯ ಮೇಲೆ ಯಾವುದೇ ಅಂಕುಶವಿಲ್ಲದ ಕಾನೂನೊಂದು ಸುಗ್ರೀವಾಜ್ಞೆಯ ಮೂಲಕ ಜಾರಿಗೆ ಬರುತ್ತಿದೆ.

ಬಿಜೆಪಿ ಸರ್ಕಾರ ತರಬಯಸಿರುವ ತಿದ್ದುಪಡಿಗೆ ಅತ್ಯಂತ ಭಯಾನಕವಾದದ್ದು ಭಯೋತ್ಪಾದನಾ ಚಟುವಟಿಕೆಗಳೆಂದರೆ ಏನು ಎಂಬುದರ ಬಗ್ಗೆ ನೀಡಿರುವ ವಿಶ್ಲೇಷಣೆ. ಈ ಪ್ರಸ್ತಾಪಿತ ತಿದ್ದುಪಡಿಯ ಪ್ರಕಾರ ಭಯೋತ್ಪಾದನಾ ಚಟುವಟಿಕೆಯೆಂದರೆ:

"any terrorist act committed with the intent to disturb law and order or public order, or threaten the unity, integrity and security of the State or to strike terror in the minds of the people or any section of the people by doing any act or by using bombs, dynamite or other explosive substance or inflammable material or firearms or other lethal weapons or poison or noxious gases or other chemicals or any other substance hazardous in nature in such a manner as to cause or likely to cause death or injury to any person or loss of damage or destruction to property."

"ಕಾನೂನು ಮತ್ತು ಸುವ್ಯವಸ್ಥೆಯನ್ನು ಭಂಗಗೊಳಿಸುವ ಉದ್ದೇಶ ಹೊಂದಿರುವ ಅಥವಾ ಪ್ರಭುತ್ವದ ಐಕ್ಯತೆ, ಭದ್ರತೆ ಮತ್ತು ಸಮಗ್ರತೆಗೆ ಭಂಗ ತರುವ ಅಥವಾ ಯಾವುದೇ ಚಟುವಟಿಕೆಗಳ ಮೂಲಕ ಅಥವಾ ಬಾಂಬು,

►►►18

No Comments

ಬಡವರಿಗೆ ಕಡಿಮೆ ದರದಲ್ಲಿ ಹಂಚುವ ಬುದ್ಧಿ ಮಾತ್ರ ಬರಲ್ಲ!

"ಈ ಬಾರಿ ಆಹಾರ ಸಂಗ್ರಹ ಹೆಚ್ಚಿರುವುದರಿಂದ ನಮಗಿರುವ ದಾರಿ ಎರಡೇ. ಒಂದೋ ರಫ್ತು ಮಾಡುವುದು ಅಥವಾ ಬಯಲಲ್ಲಿಟ್ಟು ಕೊಳೆಸುವುದು."

- ಗೋಪಾಲ್ ಪಿಳ್ಳೈ, ವಾಣಿಜ್ಯ ಕಾರ್ಯದರ್ಶಿ

ವಿದೇಶಿ ಕೋಚ್ ಬೇಕೆಂದವರೂ ನೀವೇ!



"ಐಪಿಎಲ್‌ನಲ್ಲಿ ಆಡುತ್ತಿರುವ ವಿದೇಶಿ ಆಟಗಾರರು ಭಾರತೀಯ ಆಟಗಾರರನ್ನು ಜನಾಂಗೀಯವಾಗಿ ನಿಂದಿಸುತ್ತಿದ್ದಾರೆ. ನಾವು ಹೇಳಿದಂತೆ ನೀವು ಕೇಳಬೇಕು ಎನ್ನುವ ಧೋರಣೆಯಿಂದ ನೋಡುತ್ತಿದ್ದಾರೆ."

- ಅಜಯ್ ಜಡೇಜಾ

24x7 ಅಲ್ಲ 24 x 0!

"ದೃಶ್ಯ ಮಾಧ್ಯಮಗಳು ಚುನಾವಣಾ ಸಂದರ್ಭದಲ್ಲಿ ಗಣ್ಯರೊಂದಿಗೆ ಎಡಬಿಡದ ಸಂದರ್ಶನ, ಸತತ ಸಂಭಾಷಣೆ ನಡೆಸಿದರು. ಆದರೆ ಯಾವೊಂದು ಸಂದರ್ಶನವೂ ತೋರಿಕೆಯ ಮಾತುಗಳ ಹಿಂದಿರುವ ವಾಸ್ತವವನ್ನು ಬಯಲಿಗೆ ತರಲಿಲ್ಲ. ಮಾತುಗಳ ಗಾರುಡಿಯ ಹೊರತಾಗಿ ಹೊಸದಾದ ಒಂದು ವಿಶ್ಲೇಷಣೆಯೂ ಕಂಡುಬರಲಿಲ್ಲ."

- ಸಂತೋಷ್ ದೇಸಾಯಿ. ಮಾಧ್ಯಮ ವಿಶ್ಲೇಷಕ

ಕುಣಿಲಾರದ.....ನೆಲ ಡೊಂಕು ಎಂದರಂತೆ!

"ಮತಯಂತ್ರಗಳು ವಿಶ್ವಾಸಾರ್ಹವಲ್ಲ, ಹಳೆಯ ಮತಪತ್ರಗಳೇ ಒಳ್ಳೆಯದು. ನಮ್ಮ ಸೋಲಿಗೆ ಅದೂ ಒಂದು ಕಾರಣವಿರಬಹುದು. ನಾವು ಮತಪತ್ರಗಳ ಪದ್ಧತಿಗೆ ಮರಳುವುದೇ ಒಳ್ಳೆಯದು. ಅಮೆರಿಕ ಕೂಡಾ ಅದೇ ಮಾಡಿದೆ."

- ಸುರೇಶ್ ಪೂಜಾರಿ, ಒರಿಸ್ಸಾದ ಬಿಜೆಪಿ ಅಧ್ಯಕ್ಷ.

ಚಿಂತಕರ ಚಾವಡಿ

ಗಣತಂತ್ರವಲ್ಲ, ಗ್ಲಾಮರ್ ತಂತ್ರ!

ಈ ಬಾರಿಯ ಚುನಾವಣೆಯನ್ನು ಬಹುಪಾಲು ಮಾಧ್ಯಮಗಳು ಇಷ್ಯೂಗಳಿಲ್ಲದ ಚುನಾವಣೆಯೆಂದೇ ಕರೆದವು. ಅದಕ್ಕೆ ಪತ್ರಕರ್ತ ಪಿ.ಸಾಯಿನಾಥ್‌ರವರು ಪ್ರತಿಕ್ರಿಯಿಸುತ್ತಾ ಹೀಗಾಗಲು ಮಾಧ್ಯಮಗಳೇ ಕಾರಣವೆಂದೂ ಟೀಕಿಸಿದ್ದರು. ಈಗ ಚುನಾವಣೆ ಮುಗಿದ ಮೇಲೆ ಅದೇ ಮಾಧ್ಯಮಗಳೆ ಹೇಗೆ ಈ ಚುನಾವಣೆ ಅರ್ಥರಹಿತ ವಿಷಯಗಳನ್ನು ಇಶ್ಯೂ ಮಾಡಿದವೆಂದು ಬರೆಯುತ್ತಿವೆ. ಈ ಬಾರಿಯ ಔಟ್‌ಲುಕ್ ಪತ್ರಿಕೆ ಸಹ ಯಾವ ವಿಷಯಗಳು ಪ್ರಚಾರ ಪಡೆದವು ಮತ್ತು ಯಾವ ವಿಷಯಗಳು ಪ್ರಚಾರ ಪಡೆಯಲಿಲ್ಲ ಎಂದು ಹೀಗೆ ಪಟ್ಟಿಮಾಡಿದೆ:

ಪ್ರಚಾರ ಪಡೆದ ವಿಷಯಗಳು

ನವೀನ್ ಪಟ್ನಾಯಕ್ ಬಿಜೆಪಿ ಮೈತ್ರಿಕೂಟದಿಂದ ಕಳಚಿಕೊಂಡಿದ್ದು.

ವರುಣ್ ಗಾಂಧಿಯ ಮುಸ್ಲಿಮರ ಕೈಕಡಿಯುವ ಭಾಷಣ.

ಚಿದಂಬರಂ ಮೇಲೆ ಶೂ ಎಸೆದದ್ದು.

ರಾಹುಲ್ ಗಾಂಧಿ ಪತ್ರಿಕಾ ಗೋಷ್ಠಿ

ಮನ್‌ಮೋಹನ್ ಸಿಂಗ್-ಅಡ್ವಾನಿ ಪರಸ್ಪರರ ಮೇಲೆ ಕೆಸರೆರಚಿಕೊಂಡಿದ್ದು.

ಶ್ರೀಲಂಕಾ ತಮಿಳರಿಗಾಗಿ ಕರುಣಾನಿಧಿ ಮಾಡಿದ ಉಪವಾಸದ ನಾಟಕ.

ಅಜಂ ಖಾನ್-ಜಯಪ್ರದಾ ವಿವಾದ

ಪ್ರಚಾರ ಪಡೆಯದ ವಿಷಯಗಳು

ವಿದ್ಯುತ್, ನೀರು, ರಸ್ತೆಯಂಥ ಸಾಮಾನ್ಯ ಮನುಷ್ಯನ ಅಗತ್ಯದ ವಿಷಯಗಳು.

ನಿರುದ್ಯೋಗ, ಉದ್ಯೋಗ ನಷ್ಟ, ಇತ್ಯಾದಿ.

ಆರ್ಥಿಕ ಹಿಂಜರಿತದಿಂದ ಒಂದೊಂದಾಗಿ ಕಾರ್ಖಾನೆಗಳು ಮುಚ್ಚಿಹೋಗುತ್ತಿರುವುದು.

ರೈತರ ಸಾಲ, ಆತ್ಮಹತ್ಯೆಗಳು.


ಕೃಷಿ ಕಾರ್ಮಿಕರ ವಲಸೆ.

ಅಗತ್ಯ ಸರಕುಗಳ ಬೆಲೆ ಏರಿಕೆ.

ಕಟ್ಟಡ ಕಾರ್ಮಿಕರು ಹಳ್ಳಿಗೆ ಮರುವಲಸೆ ಹೋಗುತ್ತಿರುವುದು ಇತ್ಯಾದಿ, ಇತ್ಯಾದಿ.

ಈ ಪ್ರಚಾರವನ್ನು ಮಾಧ್ಯಮಗಳಾದರೂ ಚುನಾವಣೆಗೆ ಮುಂಚೆ ಮಾಡಬೇಕಿತ್ತಲ್ಲವೇ? ಕನಿಷ್ಠ ಈ ಲೇಖನವನ್ನಾದರೂ ಚುನಾವಣೆ ಸಮಯದಲ್ಲಿ ಪ್ರಕಟಿಸಬೇಕಿತ್ತಲ್ಲವೇ?

ಅತ್ತ ಇತ್ತ ನೋಡಿದಾಗ



ಕಂಡಹಾಗೆ

ಗೌರಿ ಲಂಕೇಶ್

ಮಾನವತಾವಾದಿ ಬಿನಾಯಕ್ ಸೇನ್‌ರವರ ಅಕ್ರಮ ಬಂಧನ ಕುರಿತಂತೆ ಬರಹಗಾರ ಆಸೀಮ್ ಶ್ರೀವಾಸ್ತವ ಅವರು ಇತ್ತೀಚೆಗೆ ಬರೆದಿರುವ ಲೇಖನದಲ್ಲಿ ಹಲವು ಸ್ವಾರಸ್ಯಕರವಾದ ಸಂಗತಿಗಳಿವೆ. ಅವನ್ನು ಇಲ್ಲಿ ನೀಡಬೇಕೆನಿಸುತ್ತಿದೆ.

ಮೊದಲನೆಯದು ಇಬ್ಬರು ಖ್ಯಾತ ಅಮೆರಿಕನ್ನರ ನಡುವೆ ಸಂಭವಿಸಿದ್ದು.



ಮೆಕ್ಸಿಕೋ ದೇಶದ ಮೇಲೆ ಅಮೆರಿಕ ದಾಳಿ ನಡೆಸಿದಾಗ ಖ್ಯಾತ ನಿಸರ್ಗವಾದಿ ಹೆನ್ರಿ ಥೋರೊ ಅದನ್ನು ಪ್ರತಿಭಟಿಸಿದರಲ್ಲದೆ, ತಮ್ಮ ಸರ್ಕಾರದ ನಿಲುವಿನ ವಿರುದ್ಧ ತಮ್ಮ ವಿರೋಧವನ್ನು ವ್ಯಕ್ತಪಡಿಸಲು ತೆರಿಗೆಗಳನ್ನು ಕಟ್ಟಲು ನಿರಾಕರಿಸಿದ್ದರು. ಆಗ ಅಮೆರಿಕನ್ ಸರ್ಕಾರ ಥೋರೊ ಅವರನ್ನು ಬಂಧಿಸಿ ಜೈಲಿಗಟ್ಟಿತು.

ಆ ಥೋರೊ ಅವರ ಸ್ನೇಹಿತ ಮತ್ತು ಹಿತೈಷಿಯಾಗಿದ್ದ ಹಾರ್ವರ್ಡ್ ವಿಶ್ವವಿದ್ಯಾಲಯದ ಖ್ಯಾತ ಬರಹಗಾರ ರಾಲ್ಫ್ ವಾಲ್ಡೊ ಎಮರ್ಸನ್ ಥೋರೊರನ್ನು ನೋಡಲು ಜೈಲಿಗೆ ಬಂದರು. ಜೈಲಿನ ಸರಳುಗಳ ಹಿಂದಿದ್ದ ಥೋರೊ ಅವರನ್ನು ಕಂಡು ಎಮರ್ಸನ್ ಅವರು "ನೀನು ಇದರೊಳಗೆ ಏನು ಮಾಡುತ್ತಿದ್ದೀಯಾ?" ಎಂದು ಕೇಳಿದರು. ಆಗ ಥೋರೊ "ನೀನು ಹೊರಗಡೆ ಏನು ಮಾಡುತ್ತಿದ್ದೀಯಾ?" ಎಂದು ಮರುಪ್ರಶ್ನೆ ಹಾಕುವ ಮೂಲಕ ಉತ್ತರಿಸಿದರು. ಅದನ್ನು ಕೇಳಿ ಎಮರ್ಸನ್‌ರವರ ಮುಖ ನಾಚಿಕೆಯಿಂದ ಕೆಂಪೇರಿತ್ತು. ಯಾಕೆಂದರೆ, ತನ್ನಂಥವರನ್ನೇ ಸರ್ಕಾರ ಬಂಧಿಸಿರುವಾಗ ಎಮರ್ಸನ್ ಥರದ ಜನ ಹೊರಗಡೆ ಏನು ಮಾಡುತ್ತಿದ್ದಾರೆ ಎಂಬುದೇ ಥೋರೊ ಅವರ ಪ್ರಶ್ನೆಯಾಗಿತ್ತು.

ಎರಡನೆ ಸಂಗತಿ ಎರಡು ರೀತಿಯ ಜನರ ಪಟ್ಟಿಗಳಿಗೆ ಸಂಬಂಧಪಟ್ಟಿದ್ದು.

ಮೊದಲನೆ ಪಟ್ಟಿಯಲ್ಲಿ ಸಾಕ್ರೆಟೀಸ್, ನೆಲ್ಸನ್ ಮಂಡೇಲ, ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರೂ, ಜಯಪ್ರಕಾಶ್ ನಾರಾಯಣ್, ಫೈಜ್ ಅಹಮದ್ ಫೈಜ್, ಬಿನಾಯಕ್ ಸೇನ್, ಇರೋಮ್ ಶರ್ಮಿಳಾ, ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್, ಹೆನ್ರಿ ಥೋರೊ ಮತ್ತು ಫ್ಯೋದೋರ್ ದಸ್ತೋವಸ್ಕಿ ತರಹದ ಜನ ಇದ್ದಾರೆ. ಇವರೆಲ್ಲರ ನಡುವೆ ಒಂದು ಸಾಮ್ಯತೆ ಇದೆ. ಆ ಸಾಮ್ಯತೆ ಏನು?

ಎರಡನೆ ಪಟ್ಟಿಯಲ್ಲಿ ಒಸಾಮಾ ಬಿನ್ ಲಾಡೆನ್, ಜಗದೀಶ್ ಟೈಟ್ಲರ್, ಸಜ್ಜನ ಕುಮಾರ್, ನರೇಂದ್ರ ಮೋದಿ, ಜ್ಯೋತಿ ಬಸು, ಬಾಳ್ ಠಾಕ್ರೆ, ಜಾರ್ಜ್ ಬುಷ್, ಟೋನಿ ಬ್ಲೇರ್, ಡೊನಾಲ್ಡ್ ರಮ್ಸ್‌ಫೆಲ್ಡ್, ಡಿಕ್ ಚೆನಿ, ಹಿಟ್ಲರ್ ಮತ್ತು ಜೋಸೆಫ್ ಸ್ಟಾಲಿನ್ ಥರದವರಿದ್ದಾರೆ. ಇವರೆಲ್ಲರ ನಡುವೆಯೂ ಒಂದು ರೀತಿಯ ಸಾಮ್ಯತೆ ಇದೆ. ಈ ಸಾಮ್ಯತೆ ಏನು?

ಮೊದಲನೆ ಪಟ್ಟಿಯಲ್ಲಿರುವವರೆಲ್ಲರೂ ಸರ್ಕಾರ ನಡೆಸಿದ್ದ ಅನ್ಯಾಯಗಳನ್ನು ಪ್ರತಿಭಟಿಸಿದ್ದಕ್ಕೆ ಜೈಲಿಗೆ ತಳ್ಳಲ್ಪಟ್ಟವರು. ಎರಡನೆ ಪಟ್ಟಿಯಲ್ಲಿರುವವರು ಸಾಮೂಹಿಕ ಮಾರಣಹೋಮಕ್ಕೆ ಕಾರಣೀಭೂತರಾಗಿದ್ದರೂ, ಎಂದೂ ಶಿಕ್ಷೆಗೆ ಗುರಿಯಾಗದೆ ಸಮಾಜದಲ್ಲಿ ಮೆರೆದವರು.

ಶ್ರೀವಾಸ್ತವ ಅವರ ಲೇಖನದಲ್ಲಿನ ಮೂರನೆ ಸಂಗತಿ ದಾಮೋದರ್ ರಥ್ ಎಂಬಾತನನ್ನು ಕುರಿತದ್ದು. ಒರಿಸ್ಸಾದ ಭಿನ್ನಮತೀಯರಾದ ರಥ್ ಅವರು ಕೆಲ ವರ್ಷಗಳ ಹಿಂದೆ ಒಂದು ಜೈಲಿನ ಬಾಗಿಲಲ್ಲಿ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಅವರ ಬೇಡಿಕೆ ಏನಾಗಿತ್ತೆಂದರೆ ಒರಿಸ್ಸಾ ಸರ್ಕಾರ ತನ್ನ ಪೆದ್ದುತನದಿಂದಾಗಿ ಹಲವಾರು ಅಮಾಯಕ ಜನರನ್ನು ಅಕ್ರಮವಾಗಿ ಜೈಲಿನಲ್ಲಿಟ್ಟಿದ್ದರಿಂದ ತನ್ನನ್ನೂ ಜೈಲಿನಲ್ಲಿ ಬಂಧಿಸಬೇಕೆಂಬುದೇ ಆಗಿತ್ತು.

ರಥ್‌ರವರು ಹೀಗೆ ತಮ್ಮ ಉಪವಾಸ ಸತ್ಯಾಗ್ರಹವನ್ನು ಹತ್ತು ದಿನಗಳ ಕಾಲ ಮುಂದುವರೆಸಿದಾಗ ಕೊನೆಗೂ ಜೈಲಧಿಕಾರಿಯೊಬ್ಬ ಬಂದು "ನೀನು ಯಾಕೆ ಇಷ್ಟು ಕಷ್ಟ ಅನುಭವಿಸುತ್ತಿದ್ದೀಯಾ?" ಎಂದು ಕೇಳಿದ. ಆಗ ರಥ್ "ಜೈಲಿನ ಹೊರಗಡೆಗಿಂತ ಜೈಲಿನೊಳಗೇ ಉತ್ತಮ ಜನರಿದ್ದಾರೆ, ಆದಕ್ಕೆ" ಎಂದು ಉತ್ತರಿಸಿದರು. ಮರುಕ್ಷಣವೇ ರಥ್‌ರವರ ಮಿತ್ರರನ್ನು ಬಂಧಮುಕ್ತರನ್ನಾಗಿಸಲಾಯಿತು.

ಶ್ರೀವಾಸ್ತವ ಅವರ ಲೇಖನದ ಸಾರಾಂಶ:

ಇವತ್ತು ಭಯೋತ್ಪಾದನೆಯನ್ನು ನಿಗ್ರಹಿಸುವ ನೆಪದಲ್ಲಿ ಸರ್ಕಾರಗಳು ಮಾನವ ಹಕ್ಕುಗಳ ಉಲ್ಲಂಘನೆಗಳಲ್ಲಿ ತೊಡಗಿದೆ. ಆದರೆ ನಾವು ನಮ್ಮ ಹಕ್ಕುಗಳನ್ನು ಉಳಿಸಿಕೊಳ್ಳಬೇಕಿದ್ದರೆ ಸರ್ಕಾರವೇ ಭಯೋತ್ಪಾದಕನಂತೆ ವರ್ತಿಸುವುದನ್ನು ನಾವೆಲ್ಲರೂ ಜೊತೆಗೂಡಿ ತಡೆಯಬೇಕಿದೆ.

* * * *

ಮೊನ್ನಿನ ಚುನಾವಣೆಯಲ್ಲಿ ಎಡ ಮತ್ತು ಬಲಪಂಥೀಯ ಪಕ್ಷಗಳಿಗೆ ತೀವ್ರ ಮುಖಭಂಗವಾಗಿದೆ. ಹಿಂದೂತ್ವವಾದಿ ಬಿಜೆಪಿಯ ನಾಯಕರಂತೂ ತಮ್ಮ ಸೋಲಿಗಾಗಿ ಪರಸ್ಪರರನ್ನು ದೂಷಿಸುತ್ತಾ ಕಿತ್ತಾಡಿಕೊಳ್ಳಲು ಪ್ರಾರಂಭಿಸಿದ್ದಾರೆ. ಹಾಗೆಯೇ ಎಡ ಪಕ್ಷಗಳಲ್ಲೂ ಕೆಸರೆರಚಾಟ ನಡೆಯುತ್ತಿದೆ. ಒಂದೆಡೆ ಚೆಡ್ಡಿಗಳ ನಾಯಕ ಅಢ್ವಾನಿ ಲೋಹ ಪುರುಷನಲ್ಲ ಬದಲಾಗಿ ತಗಡಿನ ಮನುಷ್ಯ ಎಂದು ಸಾಬೀತಾಗಿ ಆತ ಯಕಶ್ಚಿತ್ ತಲೆ ಮರೆಸಿಕೊಂಡಿದ್ದಾರೆ. ಇನ್ನೊಂದೆಡೆ ಪ್ರಕಾಶ್ ಕಾರಟ್ ಅವರ 'ಅವಸರವಾದಿ' ಮತ್ತು 'ಅವಕಾಶವಾದಿ' ರಾಜಕೀಯವೇ ಎಡಪಕ್ಷಗಳು ಹೀನಾಯ ಸೋಲು ಕಂಡಿರುವುದಕ್ಕೆ ಕಾರಣ ಎಂದು ಅವರ ಪಕ್ಷದವರೇ ಕಾರಟ್‌ರ ತಲೆದಂಡಕ್ಕೆ ಆಗ್ರಹಿಸುತ್ತಿದ್ದಾರೆ.

ಅದೇನೇ ಇರಲಿ, ಚುನಾವಣೆಗಳ ಫಲಿತಾಂಶ ಹೊರಬರುವ ಮುನ್ನವೇ ಪಶ್ಚಿಮ ಬಂಗಾಳದ ಕಲಾವಿದ ಶುಭ ಪ್ರಸನ್ನ ಎಂಬುವವರು ಆ ರಾಜ್ಯದಲ್ಲಿ ಕಂಡೂಕಾಣದಂತೆ ಸಿಪಿಎಂ ವಿರುದ್ಧ ಬೀಸುತ್ತಿದ್ದ ಅಲೆಯನ್ನು ಗ್ರಹಿಸಿ ಒಂದು ಲೇಖನ ಬರೆದು ಅದರಲ್ಲಿ ಸಿಪಿಎಂ ಸೋಲುತ್ತದೆ ಎಂದು ಭವಿಷ್ಯ ನುಡಿದಿದ್ದರು. ನಾವು ಕರ್ನಾಟಕದಲ್ಲಿ ಕೂತು ಎಡಪಕ್ಷಗಳ ಸೋಲನ್ನು ವಿಶ್ಲೇಷಿಸುವ ಬದಲಾಗಿ, ಅಲ್ಲಿನವರೇ ಆದ ಶುಭಪ್ರಸನ್ನರು ಎಡಪಕ್ಷದ ಸೋಲಿಗೆ ಕಾರಣಗಳನ್ನು ಫಲಿತಾಂಶದ ಮುನ್ನವೇ ಊಹಿಸಿರುವುದನ್ನೇ ಇಲ್ಲಿ ನೀಡುವುದು ಅರ್ಥಪೂರ್ಣವಾಗಿರುತ್ತದೆ ಎನಿಸುತ್ತದೆ.

ಶುಭಪ್ರಸನ್ನರ ಲೇಖನದ ಸಂಕ್ಷಿಪ್ತ ಸಾರಾಂಶ ಹೀಗಿದೆ:

ಕೊಲ್ಕತ್ತಾದ ಗೋಡೆಗಳ ಮೇಲೆ ಕಾಣಿಸಿಕೊಂಡಿರುವ 'ಪರಿವರ್ತನೆ ಬೇಕು' ಎಂಬ ಘೋಷಣೆ ಬಂಗಾಳಿ ಜನರ ಆಶೆಗಳನ್ನು ಪ್ರತಿಬಿಂಬಿಸುತ್ತಿದೆ. ರಾಜ್ಯದೆಲ್ಲೆಡೆ ತುರ್ತಾಗಿ ಮತ್ತು ಸಾಂಕ್ರಾಮಿಕವಾಗಿ ಹರಡುತ್ತಿರುವ ಈ ಘೋಷಣೆ ರೈತಾಪಿ, ವ್ಯಾಪಾರಿ, ಬರಹಗಾರರು, ಬುದ್ಧಿಜೀವಿಗಳು -ಹೀಗೆ ಸಮಾಜದ ಎಲ್ಲಾ ವರ್ಗಗಳ ಜನರನ್ನು ಆಕರ್ಷಿಸಿದೆ. ಏಕೆಂದರೆ ಈ ಘೋಷಣೆಯ ಹಿಂದೆ ತೀವ್ರತರವಾದ ನಿರಾಶೆ ಮತ್ತು ಅಪಾರ ಜ್ಞಾನೋದಯ ಅಡಗಿದೆ.

ಹಿಂದೊಮ್ಮೆ ಬಂಗಾಳದಲ್ಲಿ ಸಮಾಜವಾದ ಮತ್ತು ಸಮಾನತಾವಾದಿ ಜಗತ್ತನ್ನು ಸೃಷ್ಟಿಸುವ ಕನಸ್ಸನ್ನು ಹುಟ್ಟಿ ಹಾಕಲಾಗಿತ್ತು; ಆ ಕನಸನ್ನು ಸಿಪಿಎಂ ನನಸಾಗಿಸುತ್ತದೆ ಎಂದು ನಾವೆಲ್ಲರೂ ನಂಬಿದ್ದೆವು. ಆ ನಂಬಿಕೆಯೇ ನಮ್ಮೆಲ್ಲರನ್ನು ಕುರುಡರನ್ನಾಗಿಸಿತ್ತು. ಆದರೆ ಕಳೆದ 32 ವರ್ಷಗಳಿಂದ ಅಧಿಕಾರದಲ್ಲಿರುವ ಆ ಪಕ್ಷ ಈ ಅವಧಿಯಲ್ಲಿ ತನ್ನ ಫ್ಯಾಸಿಸ್ಟ್ ಗುಣವನ್ನು ಮಾತ್ರ ಪ್ರದರ್ಶಿಸಿತು. ಮರಿಚ್‌ಝಾಪಿಯಲ್ಲಿನ ಮಾರಣ ಹೋಮ, ಆನಂದ ಮಾರ್ಗಿಗಳ ಮೆರವಣಿಗೆಯ ಮೇಲೆ ದಾಳಿ, ಚುನಾವಣೆಗಳಲ್ಲಿ ದಾಂಧಲೆ, ಮತಗಟ್ಟೆಗಳ ವಶಪಡಿಸುವಿಕೆ, ಇಂತಹ ಹಲವಾರು ಪ್ರಕರಣಗಳು ನಡೆದವು. ಆದರೆ ಸಮಾನ ಸಮಾಜವನ್ನು ಸೃಷ್ಟಿಸುವ ಯತ್ನದಲ್ಲಿ ಇದೆಲ್ಲ ಕೇವಲ ಅಪವಾದಗಳು ಎಂದೇ ನಾವೆಲ್ಲ ನಂಬಿದ್ದೆವು. ಅವರ ಸುಳ್ಳು ಮತ್ತು ಚಾಣಾಕ್ಷ ಪ್ರಚಾರ ತಂತ್ರಗಳು ಹಾಗೆ ನಮ್ಮನ್ನು ನಂಬಿಸಿದ್ದವು ಕೂಡ.

ಆದರೆ ಅವೆಲ್ಲ ಅಪವಾದಗಳಾಗಿರಲಿಲ್ಲ, ಬದಲಾಗಿ ಅತಿಯಾದ ಅಧಿಕಾರದಿಂದ ಆದ ನ್ಯೂನತೆಗಳು ಎಂಬುದು ನಮಗೀಗ ಅರ್ಥವಾಗಿದೆ. ಅಷ್ಟೇ ಅಲ್ಲ, ಸಿಪಿಎಂ ಪಕ್ಷಕ್ಕೆ ಯಾವ ಸಿದ್ಧಾಂತವೂ ಇಲ್ಲ ಮತ್ತು ಅಧಿಕಾರಕ್ಕಾಗಿ ಅದು ಏನನ್ನು ಮಾಡಲೂ ಸಿದ್ಧ ಎಂಬುದೂ ನಮ್ಮ ಅರಿವಿಗೆ ಬಂದಿದೆ. ಜೊತೆಗೆ ತನ್ನನ್ನು ವಿರೋಧಿಸುವವರನ್ನು ನಿರ್ದಾಕ್ಷಿಣ್ಯವಾಗಿ ಸೊಲ್ಲೆತ್ತದಂತೆ ಮಾಡುತ್ತದೆ ಎಂಬುದೂ ಜನರಿಗೆ ಗೊತ್ತಾಗಿದೆ. ಯಾಕೆಂದರೆ ಸಿಪಿಎಂ ಪ್ರಕಾರ ಒಂದೋ ನೀವು ಅವರೊಂದಿಗೆ ಇರಬೇಕು, ಇಲ್ಲಾ ಅವರ ವೈರಿಗಳಾಗಿ ಅವರ ಕೆಂಗಣ್ಣಿಗೆ ಗುರಿಯಾಗಬೇಕು.

ಯಾಕೆ ಪರಿವರ್ತನೆ? ಎಂತಹ ಪರಿವರ್ತನೆ? ಇಂತಹ ಪ್ರಶ್ನೆಗಳನ್ನು ನಗರವಾಸಿ ಮೇಲ್ವರ್ಗದ ಜನ ಇವತ್ತು ಕೇಳುತ್ತಿರಬಹುದು. ಆದರೆ ಈ ಪ್ರಶ್ನೆಗಳನ್ನು ದೌರ್ಜನ್ಯಕ್ಕೆ ಗುರಿಯಾಗಿರುವ ಬಡವರು ಕೇಳುವ ಧೈರ್ಯ ತೋರುತ್ತಿಲ್ಲ, ಯಾಕೆಂದರೆ ಸರ್ಕಾರ ಎಂತಹ ಭಯಾನಕ ಮತ್ತು ಸುಳ್ಳುಗಳ ವಾತಾವರಣವನ್ನು ಸೃಷ್ಟಿಸಿದೆ ಎಂದರೆ ಅದರ ಪರಿಣಾಮಗಳನ್ನು ರೈತಾಪಿಗಳು, ಗ್ರಾಮಸ್ಥರು ಮತ್ತು ಕೂಲಿ ಕಾರ್ಮಿಕರು ಸಾಕಷ್ಟು ಅನುಭವಿಸಿದ್ದಾರೆ. ಇವತ್ತು ಸಿಪಿಎಂ ಬಲಿಷ್ಠವಾಗಿರುವ ಪ್ರದೇಶಗಳಲ್ಲಿ ಬಡ ಜನತೆಗೆ ಬದುಕುವುದೇ ಕಷ್ಟವಾಗಿದ್ದು, ಅವರು ಮದುವೆ ಮಾಡುವುದರಿಂದ ಹಿಡಿದು ಕೂಲಿ ಕೆಲಸ ಪಡೆಯುವತನಕ ಯಾವುದೂ ಪಕ್ಷದ ಅನುಮತಿ ಇಲ್ಲದೆ ನಡೆಯುವಂತಿಲ್ಲ. ಎಲ್ಲವೂ ಪಕ್ಷ ಆದೇಶಿಸಿದಂತೆಯೇ ನಡೆಯಬೇಕು.



ಆದರೆ ಇದ್ಯಾವುದೂ ಬುದ್ಧಿಜೀವಿಗಳ ಮತ್ತು ಮಧ್ಯಮ ವರ್ಗದವರ ಅನುಭವಕ್ಕೆ ಬಂದಿರಲಿಲ್ಲ, ಯಾವಾಗ ಸಿಂಗೂರ್ ಮತ್ತು ನಂದಿಗ್ರಾಮ ಪ್ರಕರಣಗಳು ನಮ್ಮ ಅಂತಸ್ಸಾಕ್ಷಿಯನ್ನು ಚುಚ್ಚಿದವೋ ಆಗ ನಾವು ಬೀದಿಗಿಳಿದು ಪ್ರತಿಭಟಿಸಿದೆವು. ಆಗ ನಮ್ಮ ವಿರುದ್ಧವೂ ತಿರುಗಿಬಿದ್ದ ಸರ್ಕಾರ ನಮ್ಮ ಬಗ್ಗೆ ಅವಹೇಳನಕಾರಿ ಪ್ರಚಾರ ನಡೆಸಿತು. ನಮ್ಮ ಚಿತ್ರ ಮತ್ತು ರಂಗಮಂದಿರಗಳನ್ನು ಬಂದ್ ಮಾಡಿತು. ಸಮಾಜದಲ್ಲಿನ ನಮ್ಮ ಸ್ಥಾನಮಾನ ಮಾತ್ರ ಅವರ ಸೇಡಿನ ಬುಲೆಟ್ಟುಗಳಿಂದ ನಮ್ಮನ್ನು ರಕ್ಷಿಸಿದ್ದವು.

ಇದೇ ಪಕ್ಷದ ಆಡಳಿತಾವಧಿಯಲ್ಲಿ ಬಂಗಾಳದ **56,000** ಕಾರ್ಖಾನೆಗಳು ಸ್ಥಗಿತಗೊಂಡಿವೆ. ಆದರೆ ಸರ್ಕಾರದ ನೀತಿಗಳನ್ನು ವಿರೋಧಿಸುವವರನ್ನು ಅಭಿವೃದ್ಧಿ ವಿರೋಧಿಗಳು ಎಂದು ಸರ್ಕಾರ ದೂಷಿಸುತ್ತದೆ. ಅಷ್ಟೇ ಅಲ್ಲ, ಇವತ್ತು ಬಂದೂಕಿನ ನಳಿಕೆಯನ್ನು ರೈತರಿಗೆ ತೋರಿಸಿ ಅವರ ಸಂಪದ್ಭರಿತ ಮತ್ತು ಫಲವತ್ತಾದ ಭೂಮಿಯನ್ನು ವಶಪಡಿಸಿಕೊಳ್ಳುವ ಮೂಲಕ ತನ್ನ ಪಕ್ಷದ ಖಜಾನೆಯನ್ನು ತುಂಬಿಸಿಕೊಳ್ಳುತ್ತಿದೆ.

ಈ ಅಸತ್ಯ ಮತ್ತು ಭಯೋತ್ಪಾದನೆಯ ಆಳ್ವಿಕೆಯಿಂದ ನಮಗೆ ಬದಲಾವಣೆ ಬೇಕಿದೆ. ರೇಷನ್ ಕಾರ್ಡ್ ಹಗರಣದಿಂದ ಹಿಡಿದು ಹಲವಾರು ಕಡೆ ಸರ್ಕಾರ ನಡೆಸಿರುವ ದಬ್ಬಾಳಿಕೆಗಳು ಇವತ್ತು ಸರ್ಕಾರದ ವಿರುದ್ಧ ಸ್ಫೋಟಗೊಳ್ಳಲಿದೆ. ಸರ್ಕಾರದ ಮೃಗೀಯ ಹಿಂಸೆಯ ವಿರುದ್ಧ ಜನ ದಂಗೆ ಏಳುತ್ತಿದ್ದಾರೆ. ಇಲ್ಲಿಯ ತನಕ ಸುಮ್ಮನಿದ್ದ ಜನರೂ ಈಗ ತಮ್ಮ ಕಲೆ, ಸಂಗೀತ, ಸಿನಿಮಾಗಳ ಮೂಲಕ ದನಿ ಎತ್ತಿ ಸರ್ಕಾರವನ್ನು ಖಂಡಿಸುತ್ತಿದ್ದಾರೆ. ದೌರ್ಜನ್ಯ ವಿರುದ್ಧದ ಯುದ್ಧದಲ್ಲಿ ಎಲ್ಲರೂ ಪರಿಸ್ಥಿತಿಗೆ ತಕ್ಕಂತೆ ನಿಲುವುಗಳನ್ನು ತೆಗೆದುಕೊಳ್ಳಬೇಕಿದೆ.

'ಪರಿವರ್ತನೆ ಬೇಕು' ಎಂಬ ಘೋಷಣೆ ಇಡೀ ಬಂಗಾಳವನ್ನು ವ್ಯಾಪಿಸಿದೆ. "ಬಂಧುಗಳೇ, ತಲೆ ಎತ್ತಿ ನಿಲ್ಲಿ, ನಿಮ್ಮ ಹಿಂಜರಿಕೆಯನ್ನು, ದ್ವಂದ್ವ ಮತ್ತು ಭಯಗಳನ್ನು ಬದಿಗೊತ್ತಿ, ಈ ರಾಕ್ಷಸನ ಮಸಲತ್ತನ್ನು ಧ್ವಂಸ ಮಾಡಿ" ಎಂಬ ಹಾಡು ಇವತ್ತು ಕೂಲಿಗಳನ್ನು ಮತ್ತು ಕಲಾವಿದರನ್ನು, ರೈತರನ್ನು ಮತ್ತು ಬುಡಕಟ್ಟು ಜನಾಂಗದವರನ್ನು, ಬರಹಗಾರರನ್ನು ಮತ್ತು ಚಿಕ್ಕ ವ್ಯಾಪಾರಸ್ಥರನ್ನು ಒಂದುಗೂಡಿಸುತ್ತಿದೆ. ಯಾವಾಗ ಜನ ತಮ್ಮ ಪೂರ್ವ ಸಂಘಟನೆ ಮತ್ತು ಸಿದ್ಧಾಂತಗಳನ್ನು ತೊರೆದು ಅಸತ್ಯ ಮತ್ತು ಭಯೋತ್ಪಾದನೆ ವಿರುದ್ಧದ ಪ್ರತಿಭಟನೆಯಲ್ಲಿ ಭಾಗಿಯಾಗುತ್ತಾರೋ ಆಗ 32 ವರ್ಷಗಳ ಕಾಲ ಆಳಿರುವ ಸಿಪಿಎಂ ಪಕ್ಷದ ಸರ್ಕಾರವನ್ನು ಉರುಳಿಸುವುದು ನಿಶ್ಚಿತ.

ಶುಭಪ್ರಸನ್ನ ರ ಭವಿಷ್ಯ ನುಡಿ ಈ ಲೋಕಸಭೆಯಲ್ಲಿ ಅರ್ಧ ನನಸಾಗಿದೆ. ಬಂಗಾಳದಲ್ಲಿ ಮುಂದಿನ ವರ್ಷ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಸಂಪೂರ್ಣವಾಗಿ ಸತ್ಯವಾಗಬಹುದೇನೋ.....

ಅದಕ್ಕೆ ಅಲ್ಲವೇ ಮುಖ್ಯಮಂತ್ರಿ ಬುದ್ಧದೇವ್ ಅವರ ರಾಜೀನಾಮೆ, ಪ್ರಕಾಶ್ ಕಾರಟ್‌ರ ತಲೆದಂಡದಂತಹ ಮಾತುಗಳು ಇವತ್ತು ಸಿಪಿಎಂ ,ಪಕ್ಷದ ವಲಯದಿಂದ ಕೇಳಿಬರುತ್ತಿರುವುದು? ■

ಎರಡು ಹುಲಿಗಳ ಕತೆ

ಮೈಸೂರು ಹುಲಿ ಮತ್ತು ತಮಿಳು ಹುಲಿ

ಇದು ಎರಡು ಹುಲಿಗಳ ಕತೆ. ಒಂದು ಮೈಸೂರು ಹುಲಿ ಟಿಪ್ಪು ಸುಲ್ತಾನ್. ಮತ್ತೊಂದು ತಮಿಳು ಹುಲಿ ವೇಲುಪಿಳ್ಳೈ ಪ್ರಭಾಕರನ್. ಎರಡೂ ಹುಲಿಗಳನ್ನು ಮೇ ತಿಂಗಳಲ್ಲಿಯೇ ಬೇಟೆಯಾಡಲಾಯಿತು. ಮೈಸೂರು ಹುಲಿಯನ್ನು 1799ರ ಮೇ 04 ರಂದು ಶ್ರೀರಂಗಪಟ್ಟಣ ಕೋಟೆಯಲ್ಲಿ ಬೇಟೆಯಾಡಲಾಯಿತು. ಅದಾದ ಸರಿಯಾಗಿ ಇನ್ನೂರ ಹತ್ತು ವರ್ಷಗಳ ನಂತರ ಮೊನ್ನೆ 2009ರ ಮೇ 18 ರಂದು ಶ್ರೀಲಂಕಾದ ಮಲ್ಲೈತೀವು ದುರ್ಗಮ ಅರಣ್ಯ ಕೋಟೆಯಲ್ಲಿ ತಮಿಳು ಹುಲಿಯನ್ನು ಬೇಟೆಯಾಡಲಾಯಿತು. ಕಾಲ-ದೇಶಗಳು ಭಿನ್ನವಾದರೂ ಎರಡೂ ಹುಲಿಗಳ ನಡುವೆ ಸಾಕಷ್ಟು ಸಾಮ್ಯತೆಗಳಿವೆ.


ಮೈಸೂರು ಹುಲಿ ಟಿಪ್ಪೂ


ಮೊಟ್ಟ ಮೊದಲನೆಯದಾಗಿ ಇಬ್ಬರೂ ಅಪ್ರತಿಮ ನಾಡಪ್ರೇಮಿಗಳು. ಬ್ರಿಟಿಷರು ನಮ್ಮ ತಾಯ್ನಾಡನ್ನು ಆಕ್ರಮಿಸಿಕೊಂಡು ನಮ್ಮ ಮೇಲೆ ದೌರ್ಜನ್ಯ ನಡೆಸುತ್ತಿದ್ದಾಗ, ನಮ್ಮ ನೆಲ-ಜಲ ಸಂಪತ್ತುಗಳನ್ನು ಲೂಟಿ ಹೊಡೆಯುತ್ತಿದ್ದಾಗ, ನಮ್ಮ ಮೇಲೆ ಸರ್ವಾಧಿಕಾರವನ್ನು ಹೇರಿ ನಮ್ಮ ಹಕ್ಕು ಸ್ವಾತಂತ್ರ್ಯಗಳನ್ನು ಕಿತ್ತುಕೊಂಡು ದಾಸ್ಯಕ್ಕೆ ದೂಡಿದಾಗ ಬ್ರಿಟಿಷರನ್ನು ಇಡೀ ಭರತ ಖಂಡದಿಂದಲೇ ಒದ್ದೋಡಿಸಬೇಕೆಂದು ಹೋರಾಡಿದವನು ಟಿಪ್ಪೂ ಸುಲ್ತಾನ್. ತಾಯ್ನಾಡನ್ನು ಬ್ರಿಟಿಷರ ಗುಲಾಮಗಿರಿಗೆ ಒಪ್ಪಿಸದೇ ಕೊನೆಯುಸಿರಿರುವ ತನಕವೂ ಏಕಾಂಗಿಯಾಗಿ ಎದೆಗುಂದದೆ ಹೋರಾಡಿದ ಅಪ್ರತಿಮ ನಾಡಪ್ರೇಮಿ ಟಿಪ್ಪೂ ಸುಲ್ತಾನ್.


ಬ್ರಿಟಿಷರಿಗೆ ಒತ್ತೆಯಾಳಾಗುತ್ತಿರುವ ಟಿಪ್ಪೂ ಪುತ್ರರು


ಮೈಸೂರು ಹುಲಿಯ ಅಂತಿಮ ಯುದ್ಧ

ಪ್ರಭಾಕರನ್ ಕೂಡ ಹಾಗೆಯೆ. ಶ್ರೀಲಂಕಾದ ಸಿಂಹಳೀಯ ದುರಭಿಮಾನಿ ದಾಳಿಕೋರರು ಲಂಕಾದ ಉತ್ತರ ಮತ್ತು ಪೂರ್ವ ಭಾಗದಲ್ಲಿರುವ ತಮಿಳರ ವಿರುದ್ಧ ಹೇಳತೀರದ ದೌರ್ಜನ್ಯಗಳನ್ನು ನಡೆಸುತ್ತಿದ್ದಾಗ, ತಮಿಳು ನೆಲದ ಸಂಪತ್ತನ್ನು ಲೂಟಿ ಹೊಡೆಯುತ್ತಿದ್ದಾಗ, ತಮಿಳರನ್ನು ತಮ್ಮ ಗುಲಾಮರಂತೆ ನಡೆಸಿಕೊಳ್ಳುತ್ತಿದ್ದಾಗ ಅದರ ವಿರುದ್ಧ ಸ್ವಾಭಿಮಾನಿ ತಮಿಳರನ್ನು ಸಂಘಟಿಸಿ ಹೋರಾಡಿದವನು ಪ್ರಭಾಕರನ್. ಈ ಜೀವನ್ಮರಣದ ಹೋರಾಟದ ಮೂಲಕವೇ ಲಂಕಾ ದ್ವೀಪದೊಳಗೇ ತಮಿಳರು ಆತ್ಮಗೌರವದಿಂದ ಬದುಕುವ ಸ್ವತಂತ್ರ ತಮಿಳು ಈಳಂ ಕಟ್ಟಿದವನು. ಈಳಂ ಅನ್ನು ಮತ್ತೆ ವಶಪಡಿಸಿಕೊಳ್ಳುವುದಕ್ಕಾಗಿ ಲಂಕಾ ಸೇನೆ ಅಮಾನವೀಯ ದಾಳಿಗಳನ್ನು ನಡೆಸಿದಾಗ ಕಟ್ಟಿಕೊಂಡ ಸ್ವತಂತ್ರ ನಾಡನ್ನು ಮತ್ತೆ ಸಿಂಹಳೀಯರ ದಾಸ್ಯಕ್ಕೆ ಹೋಗದಂತೆ ಕೊನೆಯುಸಿರಿರುವ ತನಕವೂ ಹೋರಾಡಿದ ಅಪ್ರತಿಮ ನಾಡಪ್ರೇಮಿ ಪ್ರಭಾಕರನ್.

ಎರಡನೆಯದಾಗಿ, ಟಿಪ್ಪೂ ಮತ್ತು ಪ್ರಭಾಕರನ್‌ಗೆ ತಮ್ಮ ಸ್ವಂತ ಕುಟುಂಬದ ಭವಿಷ್ಯಕ್ಕಿಂತ ತಾಯ್ನಾಡಿನ ಭವಿಷ್ಯವೇ ಪ್ರಮುಖವಾಗಿತ್ತು. 1789-92 ರ ನಡುವೆ ನಡೆದ ಮೂರನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಬ್ರಿಟಿಷರು ಟಿಪ್ಪೂನನ್ನು ಸೋಲಿಸಿದರು. ಯುದ್ಧದ ನಷ್ಟವನ್ನು ತುಂಬುವುದಕ್ಕೆ 330 ಲಕ್ಷ ರೂಪಾಯಿಗಳನ್ನು ಟಿಪ್ಪೂ ಬ್ರಿಟಿಷರಿಗೆ ಕೊಡಬೇಕೆಂದು ಅವರು ತಾಕೀತು ಮಾಡಿದರು. ಟಿಪ್ಪೂ ಹತ್ತಿರ ಅಷ್ಟೊಂದು ದುಡ್ಡಿರಲಿಲ್ಲ. ಹಾಗಾಗಿ, ಟಿಪ್ಪೂ ದುಡ್ಡು ಕೊಡುವ ತನಕ ತನ್ನಿಬ್ಬರು ಮಕ್ಕಳನ್ನೇ ಬ್ರಿಟಿಷರಲ್ಲಿ ಒತ್ತೆಯಿಟ್ಟ. ಪ್ರಾಯಶಃ ತಾಯ್ನಾಡಿಗಾಗಿ ಪ್ರೀತಿ, ಮಮತೆಯಿಂದ ಸಾಕಿದ ಮಕ್ಕಳನ್ನೇ ಒತ್ತೆಯಿಟ್ಟ ರಾಜ ಚರಿತ್ರೆಯಲ್ಲೆಲ್ಲೂ ನಿಮಗೆ ಸಿಗುವುದಿಲ್ಲ. ಪ್ರಭಾಕರನ್ ಕೂಡ ಹಾಗೆಯೇ. ತಾನೇನೂ ಸ್ವತಂತ್ರ ತಮಿಳು ಈಳಂಗಾಗಿ ಬಂದೂಕೆತ್ತಿ ಹೋರಾಡುತ್ತಿದ್ದ. ರಣರಂಗವೇ ಅವನ ಮನೆಯಾಗಿತ್ತು. ಯುದ್ಧದ ಕಷ್ಟನಷ್ಟಗಳೇ ಅವನ ಬದುಕಾಗಿಹೋಗಿದ್ದವು. ತನ್ನ ಮಕ್ಕಳಿಗಾದರೂ ಇಂಥ ಕಷ್ಟನಷ್ಟ ಬಾರದಿರಲಿ ಎಂದು ಯಾವುದೇ ಒಬ್ಬ ತಂದೆ ಸಹಜವಾಗಿ ಬಯಸುತ್ತಾನೆ. ಆದರೆ, ಪ್ರಭಾಕರನ್ ಹಾಗೆ ಮಾಡಲಿಲ್ಲ. ದಶಕಗಳ ಕಾಲ ತನ್ನ ಬಲಗೈಯಾಗಿದ್ದ ಚಾರ್ಲ್ಸ್ ಲುಕಾಸಾ ಆಂಟನಿ ಎಂಬ ತಮಿಳು ಹುಲಿ ಲಂಕಾ ಸೇನೆಯ ದಾಳಿಯಲ್ಲಿ ಸತ್ತಾಗ ಅವನ ಹೆಸರನ್ನೇ ತನ್ನ ಹಿರಿಯ ಮಗನಿಗೆ ಇಟ್ಟ. ಮಾತ್ರವಲ್ಲ, ಸ್ವತಂತ್ರ ತಮಿಳು ಈಳಂಗಾಗಿನ ಈ ಜೀವನ್ಮರಣದ ಹೋರಾಟದಲ್ಲಿ ಆತನನ್ನೂ ಜೊತೆಯಲ್ಲೇ ಕರೆದುಕೊಂಡು ಹೋದ. ಏರೋನಾಟಿಕ್ಸ್ ಎಂಜಿನಿಯರಿಂಗ್‌ನಲ್ಲಿ ವಿದ್ಯಾಭ್ಯಾಸ ಮಾಡಿಸಿ ತಮಿಳು ಹುಲಿಗಳಿಗಾಗಿ ವಾಯುಪಡೆಯನ್ನು ಇದೇ ಚಾರ್ಲ್ಸ್ ಆಂಟನಿ ರೂಪಿಸಿದ. ಕೊನೆಗೆ, ಸ್ವತಂತ್ರ ತಮಿಳು ಈಳಂಗಾಗಿ ಹೋರಾಡುತ್ತಲೇ ರಣರಂಗದಲ್ಲೇ ವೀರಮರಣವನ್ನಪ್ಪಿದ. ಅದಾದ ಮರುದಿನವೇ ಅಪ್ಪ ವೇಲುಪಿಳ್ಳೈ ಪ್ರಭಾಕರನ್ ಕೂಡ ರಣರಂಗದಲ್ಲೇ ಹುಲಿಯಂತೆ ಸತ್ತ.


ತಮಿಳು ಹುಲಿ ಪ್ರಭಾಕರನ್


ಲಂಕಾ ಸೇನೆಗೆ ಬಲಿಯಾದ ಪ್ರಭಾಕರನ್ ಪುತ್ರ


ತಮಿಳು ಹುಲಿಯ ಅಂತಿಮ ಯುದ್ಧ

ಮೂರನೆಯದಾಗಿ, ಟಿಪ್ಪೂ ಮತ್ತು ಪ್ರಭಾಕರನ್ ಇಬ್ಬರೂ ಕೆಚ್ಚೆದೆಯ ಹೋರಾಟಗಾರರು. 1799ರ ನಾಲ್ಕನೇ ಮೈಸೂರು ಯುದ್ಧದ ಹೊತ್ತಿಗೆ ಮೈಸೂರು ಒಡೆಯರು, ಮರಾಠರು, ಹೈದರಾಬಾದಿನ ನಿಜಾಮ - ಹೀಗೆ ಭಾರತದ ಎಲ್ಲ ರಾಜರೂ ತಮ್ಮ ತಾಯ್ನಾಡನ್ನೇ ಬ್ರಿಟಿಷರ ಪಾದಗಳಿಗರ್ಪಿಸಿ ಅವರ ಗುಲಾಮರಾಗಿ ಅವರೊಂದಿಗೆ ಕೈಜೋಡಿಸಿದ್ದರು. ಟಿಪ್ಪೂನನ್ನು ನಿರ್ನಾಮ ಮಾಡುವುದಕ್ಕಾಗಿ ಅವರೆಲ್ಲರೂ ತಮ್ಮ ತಮ್ಮ ಸೈನ್ಯಗಳನ್ನು ಸೇರಿಸಿ ದೊಡ್ಡ ಸೈನ್ಯವನ್ನು ರೂಪಿಸಿದ್ದರು. ರಾಜನಾಗಿ ಟಿಪ್ಪೂ ಏಕಾಂಗಿಯಾಗಿದ್ದ. ಅವನೊಂದಿಗಿದ್ದವರು ಅವನಷ್ಟೇ ಸ್ವಾತಂತ್ರ್ಯಾಭಿಲಾಷಿಗಳಾಗಿದ್ದ, ಸ್ವಾಭಿಮಾನಿಗಳಾಗಿದ್ದ ಮತ್ತು ಕೊನೆಯುಸಿರಿರುವ ತನಕವೂ ಬ್ರಿಟಿಷರ ವಿರುದ್ಧ ಹೋರಾಡುವ ಕೆಚ್ಚು ಹೊಂದಿದ್ದ ಹಿಡಿಯಷ್ಟು ಸೈನಿಕರು. ಮರಾಠ-ನಿಜಾಮ-ಬ್ರಿಟಿಷರ ಬೃಹತ್ ಜಂಟೀ ಸೇನೆ ಮೈಸೂರು ಸಾಮ್ರಾಜ್ಯದ ಒಂದೊಂದೇ ಕೋಟೆ ಕೊತ್ತಲಗಳನ್ನು ವಶಪಡಿಸಿಕೊಳ್ಳುತ್ತಾ ಅಂತಿಮವಾಗಿ ರಾಜಧಾನಿ ಶ್ರೀರಂಗಪಟ್ಟಣದ ಕೋಟೆಯನ್ನು ಸುತ್ತುವರೆದಿತ್ತು. 50,000ಕ್ಕಿಂತ ಹೆಚ್ಚು ಸೈನಿಕರನ್ನು ಒಳಗೊಂಡಿದ್ದ ಬೃಹತ್ ಬ್ರಿಟಿಷ್ ಸೇನೆಯೆದುರು ಹೋರಾಡಿ ಗೆಲ್ಲುವುದು ಅಸಾಧ್ಯ ಎಂದು ಟಿಪ್ಪೂ ಆಗಲೇ ಮನವರಿಕೆಯಾಗಿತ್ತು. ಬ್ರಿಟಿಷ್ ಸೇನೆಯ ನೇತೃತ್ವ ವಹಿಸಿದ್ದ ಜನರಲ್ ಹ್ಯಾರೀಸ್ "ನೀನು ಬ್ರಿಟಿಷರಿಗೆ ಶರಣಾಗಿರುವೆ ಎಂದಷ್ಟೇ ಪ್ರಕಟಿಸು. ನಿಜವಾಗಿಯೂ ಶರಣಾಗುವುದು ಬೇಡ. ನಿನ್ನ ಸಾಮ್ರಾಜ್ಯಕ್ಕೆ ನೀನೇ ಚಕ್ರವರ್ತಿಯಾಗಿ ಮುಂದುವರೆ. ವಿಶ್ವದೆದುರು, ಇಡೀ ಭರತಖಂಡದ ಇನ್ನಿತರ ರಾಜರೆದುರು ನೀನೂ ನಮ್ಮಡಿಯಲ್ಲಿದ್ದೀಯಾ ಎಂಬುದನ್ನಷ್ಟೇ ನಾವು ತೋರಿಸಬೇಕಿದೆ" ಎಂದು ಪರಿಪರಿಯಾಗಿ ಹೇಳಿದರೂ ಟಿಪ್ಪೂ ಕೇಳಲಿಲ್ಲ. ಶತ್ರುಗಳೊಂದಿಗೆ ರಾಜಿಯಾಗುವುದಕ್ಕೆ ಅವನ ಸ್ವಾಭಿಮಾನಿ ಮನಸ್ಸು ಒಪ್ಪಲಿಲ್ಲ. ತಾನು ಬದುಕಿರುವಾಗಲೇ ತಾಯ್ನಾಡನ್ನು ಬ್ರಿಟಿಷರ ಗುಲಾಮಗಿರಿಗೆ ಒಪ್ಪಿಸುವುದಕ್ಕೆ ಅವನು ಸುತಾರಾಂ ಸಿದ್ಧನಿರಲಿಲ್ಲ. ತಾನು ಸೋಲುವುದು ಗ್ಯಾರಂಟಿ ಎಂದು ಗೊತ್ತಿದ್ದರೂ, ತಾನು ಸಾಯುವುದು ಗ್ಯಾರಂಟಿ ಎಂದು ಗೊತ್ತಿದ್ದರೂ ಹಿಡಿಯಷ್ಟಿರುವ ಸ್ವಾತಂತ್ರ್ಯಾಕಾಂಕ್ಷಿ ಸೈನಿಕರನ್ನು ಕಟ್ಟಿಕೊಂಡು ಬ್ರಿಟಿಷರ ಬೃಹತ್ ಸೇನೆಯೆದುರು ಯುದ್ಧಕ್ಕಿಳಿದ. ಒಬ್ಬ ಸಾಮಾನ್ಯ ಸೈನಿಕನಂತೆ ಹೋರಾಡುತ್ತ ರಣರಂಗದಲ್ಲೇ ವೀರಮರಣವನ್ನಪ್ಪಿದ. ಇಡೀ ಜಗತ್ತಿನ ಚರಿತ್ರೆಯಲ್ಲಿ ಬ್ರಿಟಿಷರ ವಿರುದ್ಧ ಒಬ್ಬ ಸಾಮಾನ್ಯ ಸೈನಿಕನಂತೆ ಹೋರಾಡಿ ರಣರಂಗದಲ್ಲೇ ವೀರಮರಣವನ್ನಪ್ಪಿದ ಏಕೈಕ ರಾಜ ಟಿಪ್ಪೂ!

ಪ್ರಭಾಕರನ್ ಕೂಡ ಹಾಗೆಯೆ. 2009ರ ಮಾರ್ಚ್-ಏಪ್ರಿಲ್ ಹೊತ್ತಿಗೆ ಅವನೂ ಏಕಾಂಗಿಯಾಗಿದ್ದ. ಹತ್ತಾರು ವರ್ಷಗಳ ಕಾಲ ಅವನ ಬೆನ್ನಿಗಿದ್ದ ನಾರ್ವೆ, ಇಂಗ್ಲೆಂಡ್‌ಗಳಂಥ ವಿಶ್ವದ ಹಲವಾರು ದೇಶಗಳು ಅವನಿಂದ ದೂರವಾಗಿದ್ದವು. ಅವನೊಂದಿಗಿದ್ದವರು ದಶಕಗಳ ಕಾಲ ವಿರೋಚಿತವಾಗಿ ಹೋರಾಡಿ ತಮಿಳು ಈಳಂ ಕಟ್ಟಿದ ಬೆರಳೆಣಿಕೆಯಷ್ಟು ಸ್ವಾಭಿಮಾನಿ ತಮಿಳು ಹುಲಿಗಳು ಮಾತ್ರ. ಅತ್ತ ಲಂಕಾ ಸೇನೆ ಭಾರತ, ಅಮೆರಿಕ, ಚೀನಾ, ಇಂಗ್ಲೆಂಡ್‌ಗಳನ್ನೂ ಒಳಗೊಂಡಂತೆ ವಿಶ್ವದ ಹತ್ತಾರು ಬಲಿಷ್ಠ ದೇಶಗಳ ಬೆಂಬಲದೊಂದಿಗೆ ಒಗ್ಗಟ್ಟಿನಿಂದ ಈಳಂ ಮೇಲೆ ದಾಳಿಯಿಟ್ಟಿತು. ಜಾಫ್ನಾ, ಎಲಿಫೆಂಟ್ ಪಾಸ್, ಕಿಲಿನೊಚ್ಚಿ ಮುಂತಾದ ಎಲ್‌ಟಿಟಿಇಯ ಒಂದೊಂದೇ ಭದ್ರಕೋಟೆಗಳು ಲಂಕಾ ಸೇನೆಯ ಪಾಲಾದವು. ಅಂತಿಮವಾಗಿ ಪ್ರಭಾಕರನ್ ಅಡಗಿದ್ದ ಕೇವಲ ಐದು ಚದುರ ಕಿ.ಮೀ.ಗಿಂತ ಕಡಿಮೆ ವ್ಯಾಪ್ತಿಯ ಉತ್ತರದ ಮಲ್ಲೈತೀವು ಅರಣ್ಯ ಪ್ರದೇಶವನ್ನು ಸುತ್ತುವರೆದವು. ಆಷ್ಟು ಹೊತ್ತಿಗಾಗಲೇ,



▶▶ ಕುಮಾರ್ ಬುರಡಿಕಟ್ಟಿ

ಪ್ರಜಾತಂತ್ರದ ಇನ್ನೊಂದು ಮುಖ

ಪ್ರಜೆಗಳು ಪ್ರತಿನಿಧಿಗಳ ಮೂಲಕ ತಮ್ಮನ್ನು ತಾವೇ ಆಳುವುದು ಪ್ರಜಾತಂತ್ರದ ಮೂಲ ಆಶಯ. ರಾಜಕೀಯದಲ್ಲಿ ಜನರು ಹೆಚ್ಚುಹೆಚ್ಚಾಗಿ ತೊಡಗುವುದರಿಂದ ಪ್ರಜಾತಂತ್ರ ಮತ್ತಷ್ಟು ವಿಸ್ತರಿಸುತ್ತದೆ. ಆದರೆ ನಮ್ಮ ರಾಜಕೀಯ ವ್ಯವಸ್ಥೆ ಎಷ್ಟೊಂದು ಭ್ರಷ್ಟವಾಗಿದೆ ಎಂದರೆ, ಎಷ್ಟೊಂದು ಕೊಚ್ಚೆ ರಾಡಿಯಾಗಿದೆ ಎಂದರೆ ಜನ ಅದರ ಮೇಲಿನ ವಿಶ್ವಾಸವನ್ನೇ ಕಳೆದುಕೊಂಡಿದ್ದಾರೆ. ಅದಕ್ಕೆ ಈ ಲೋಕಸಭಾ ಚುನಾವಣೆ ಕೂಡ ಒಂದು ಸ್ಪಷ್ಟ ನಿದರ್ಶನ.


ದೇಶದಲ್ಲಿ ಒಟ್ಟು ಸುಮಾರು ಒಂದು ನೂರು ಕೋಟಿಗಿಂತ ಹೆಚ್ಚು ಜನಸಂಖ್ಯೆಯಿದೆ. ಅದರಲ್ಲಿ ಮಕ್ಕಳನ್ನು ಹೊರತುಪಡಿಸಿದರೆ ಮತದಾರರು ಸುಮಾರು 75 ಕೋಟಿಯಷ್ಟಿದ್ದಾರೆ. ಈ ಬಾರಿ ಅವರಲ್ಲಿ ಮತ ಚಲಾಯಿಸಿದವರು ಕೇವಲ ಶೇ.59ರಷ್ಟು ಮಾತ್ರ. ಅಂದರೆ, ಸುಮಾರು 44 ಕೋಟಿ ಜನ ಮಾತ್ರ. ಇವರಲ್ಲಿ ಕಾಂಗ್ರೆಸ್ಸಿಗೆ ಓಟು ಹಾಕಿದವರು ಶೇ.30ರಷ್ಟು ಜನ. ಅಂದರೆ, ಸುಮಾರು 13 ಕೋಟಿ. ಅವರಲ್ಲಿ ದುಡ್ಡಿನಾಸೆಗೆ, ಹೆಂಡದಾಸೆಗೆ, ಮತ್ತಿತರ ಆಮಿಷಗಳಿಗೆ ಬಲಿಯಾಗಿ ಓಟು ಹಾಕಿದವರೆಷ್ಟು ಎಂಬುದನ್ನು ಒತ್ತಟ್ಟಿಗಿಟ್ಟು ಎಲ್ಲರೂ ಕಾಂಗ್ರೆಸ್ ಪಕ್ಷದ ನೀತಿ, ಸಿದ್ಧಾಂತ ಮೆಚ್ಚಿಕೊಂಡು, ಮನಃಪೂರ್ವಕವಾಗಿ ಒಪ್ಪಿಕೊಂಡು ಓಟು ಹಾಕಿದ್ದಾರೆಂದೇ ಭಾವಿಸೋಣ. ಆದರೂ ಕೇವಲ 13 ಕೋಟಿ ಜನ ಆಯ್ಕೆ ಮಾಡಿದ ಸರ್ಕಾರ ನೂರು ಕೋಟಿ ಜನರನ್ನು ಆಳುತ್ತಿದೆ ಎಂದಾಯಿತು.



ಇದನ್ನೇ ಇನ್ನೊಂದು ಕಡೆಯಿಂದ ನೋಡಿ. ಒಟ್ಟು 75 ಕೋಟಿ ಮತದಾರರಲ್ಲಿ ಕಾಂಗ್ರೆಸ್‌ಅನ್ನು ಶೇ.83ರಷ್ಟು ಜನ ತಿರಸ್ಕರಿಸಿದ್ದಾರೆಂದಾಯಿತು. ಶೇ.83ರಷ್ಟು ಮತದಾರರು ತಿರಸ್ಕರಿಸಿದ ಪಕ್ಷವೊಂದು ಅಧಿಕಾರಕ್ಕೇರಿ ಆಡಳಿತ ನಡೆಸುತ್ತದೆ ಎಂಬುದು ನಮ್ಮ ಪ್ರಜಾತಂತ್ರ ವ್ಯವಸ್ಥೆಗೆ ಹಿಡಿದ ಕನ್ನಡಿ.

ಇದರರ್ಥ ಜನ ಬಿಜೆಪಿ ಪರವಾಗಿದ್ದಾರೆಂದೇನೂ ಅಲ್ಲ. ಒಟ್ಟು ಚಲಾವಣೆಗೊಂಡ ಮತಗಳಲ್ಲಿ ಈ ಬಾರಿ ಬಿಜೆಪಿಗೆ ಸಿಕ್ಕಿದ್ದು ಶೇ.20ರಷ್ಟು ಮಾತ್ರ. ಅಂದರೆ, 44 ಕೋಟಿ ಮತಗಳಲ್ಲಿ ಸುಮಾರು 8 ಕೋಟಿಯಷ್ಟು ಅವರಿಗೆ ಸಿಕ್ಕಿವೆ. ಇದು ಒಟ್ಟು ಮತದಾರರ ಪೈಕಿ ಶೇ. 10ರಷ್ಟಾಗುತ್ತದೆ. ಅಂದರೆ, ಉಳಿದ ಶೇ.90ರಷ್ಟು ಜನ ಬಿಜೆಪಿಯನ್ನೂ ತಿರಸ್ಕರಿಸಿದ್ದಾರೆಂದಾಯಿತು.

ಇದು ವಿಶ್ವ ಪ್ರಜಾತಂತ್ರದ ಮೇಲಿನ ದಾಳಿ!


ಆಂಗ್ ಸಾನ್ ಸೂ ಕೀ

ನಮ್ಮ ನೆರೆಯ ದೇಶವಾಗಿರುವ ಮ್ಯಾನ್ಮಾರ್‌ನಲ್ಲಿ (ಈ ಹಿಂದಿನ ಬರ್ಮಾ) ಅಲ್ಲಿನ ಮಿಲಿಟರಿ ಸರ್ಕಾರ ಆಂಗ್ ಸೂ ಕೀಯನ್ನು ಗೃಹಬಂಧನದಿಂದ ಜೈಲಿಗಟ್ಟಲು ಪ್ರಯತ್ನ ನಡೆಸಿದೆ. ನಮಗೆಲ್ಲಾ ಗೊತ್ತಿರುವಂತೆ ಸೂ ಕಿ ಪ್ರಜಾಪ್ರಭುತ್ವ ಸ್ಥಾಪನೆಗಾಗಿ ಹತ್ತಾರು ವರ್ಷಗಳಿಂದ ದುಡಿಯುತ್ತಿರುವವರು. 1962ರಿಂದಲೂ ಅಲ್ಲಿ ಪ್ರಜಾತಂತ್ರವನ್ನು ಹೊಸಕಿಹಾಕಿ ಮಿಲಿಟರಿಯೇ ರಾಜ್ಯಭಾರ ಮಾಡುತ್ತಿದೆ. 1990ರಲ್ಲಿ ಸಾರ್ವತ್ರಿಕ ಚುನಾವಣೆಗಳು ಘೋಷಣೆಯಾದಾಗ ಅಲ್ಲಿ ಮಿಲಿಟರಿ ಸರ್ವಾಧಿಕಾರ ಅಂತ್ಯಗೊಂಡು ಪ್ರಜೆಗಳಿಂದಲೇ ಚುನಾಯಿತವಾದ ಸರ್ಕಾರವೊಂದು ಅಸ್ತಿತ್ವಕ್ಕೆ ಬರುತ್ತದೆಂದು ಇಡೀ ವಿಶ್ವದ ಜನತೆ, ಅದರಲ್ಲೂ ವಿಶೇಷವಾಗಿ ಮ್ಯಾನ್ಮಾರ್‌ನ ಜನತೆ ಆಶಿಸಿದ್ದರು. ಮಿಲಿಟರಿಯ ಆಧಿಪತ್ಯದ ವಿರುದ್ಧ ದಶಕಗಳಿಂದ ದನಿಯೆತ್ತುತ್ತಾ ಬಂದಿದ್ದ ಸೂ ಕಿ ನೇತೃತ್ವದ ನ್ಯಾಷನಲ್ ಲೀಗ್ ಫಾರ್ ಡೆಮಾಕ್ರಸಿ ಎಂಬ ರಾಜಕೀಯ ಪಕ್ಷವನ್ನು ಅಲ್ಲಿನ ಜನ ಭಾರಿ ಬಹುಮತದಿಂದ ಆಯ್ಕೆ ಮಾಡಿಕಳಿಸಿದ್ದರು. ಇನ್ನೇನು ಸೂ ಕಿ ಮ್ಯಾನ್ಮಾರ್‌ನ ನೂತನ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಬೇಕು ಎನ್ನುವಷ್ಟರಲ್ಲಿ ಮತ್ತೆ ಮಿಲಿಟರಿ ಆಕೆಯನ್ನು ಬಂಧಿಸಿ ಗೃಹಬಂಧನಕ್ಕೆ ದೂಡಿತು. ಯಾಕೆಂದರೆ ಅಧಿಕಾರವನ್ನು ಬಿಟ್ಟುಕೊಡಲು ಮಿಲಿಟರಿ

ಹಲವು ದೇಶಗಳ ಬೆಂಬಲದೊಂದಿಗೆ, ಅತ್ಯಾಧುನಿಕ ಶಸ್ತ್ರಗಳೊಂದಿಗೆ ಸುತ್ತುವರೆದು ಮುನ್ನುಗ್ಗುತ್ತಿದ್ದ ಬೃಹತ್ ಲಂಕಾ ಸೇನೆಯ ಎದುರು ಹೋರಾಡಿ ಗೆಲ್ಲುವುದು ಅಸಾಧ್ಯ ಎಂದು ಪ್ರಭಾಕರನ್‌ಗೂ ಸ್ಪಷ್ಟವಾಗಿಹೋಗಿತ್ತು. ಶಸ್ತ್ರ ಕೆಳಗಿಡುವಂತೆ ಲಂಕಾ ಅಧ್ಯಕ್ಷ ಮಹಿಂದ ರಾಜಪಕ್ಷೆ ಅಲ್ಟಿಮೇಟಂ ಹೇಳುತ್ತಲೇ ಬಂದ. ಪ್ರಭಾಕರನ್ ಕೇಳಲಿಲ್ಲ. ಶತ್ರುಗಳೊಂದಿಗೆ ರಾಜಿಯಾಗುವುದಕ್ಕೆ ಆತನ ಸ್ವಾಭಿಮಾನಿ ಮನಸ್ಸು ಒಪ್ಪಲಿಲ್ಲ. ದಶಕಗಳ ಕಾಲ ಜೀವನ್ಮರಣ ಹೋರಾಟ ಮಾಡಿ, ಸಾವಿರಾರು ತಮಿಳು ಹುಲಿಗಳು ಪ್ರಾಣತ್ಯಾಗ ಮಾಡಿ ಕಟ್ಟಿದ ತಮಿಳು ಈಳಂ ನೆಲವನ್ನು ತಾನಿನ್ನೂ ಬದುಕಿರುವಾಗಲೇ ಸಿಂಹಳೀಯರ ಕಾಲಾಮಗಿರಿಗೆ ಒಪ್ಪಿಸುವುದಕ್ಕೆ ಅವನು ಸುತಾರಾಂ ಸಿದ್ಧನಿರಲಿಲ್ಲ. ತಾನು ಸೋಲುವುದು ಗ್ಯಾರಂಟಿ ಎಂದು ಗೊತ್ತಾದ ಮೇಲೂ, ಸೋತು ಸಾಯುವುದು ಗ್ಯಾರಂಟಿ ಎಂಬುದು ಖಚಿತವಾದ ಮೇಲೂ ಹಿಡಿಯಷ್ಟಿರುವ ಸ್ವತಂತ್ರ್ಯಾಕಾಂಕ್ಷಿ ತಮಿಳು ಸೈನಿಕರನ್ನು ಕಟ್ಟಿಕೊಂಡು ಬೃಹತ್ ಲಂಕಾ ಸೇನೆಯೆದುರು ಯುದ್ಧಕ್ಕಿಳಿದ. ಒಬ್ಬ ಸಾಮಾನ್ಯ ತಮಿಳು ಹುಲಿಯಂತೆ ಹೋರಾಡುತ್ತ ರಣರಂಗದಲ್ಲೇ ವೀರಮರಣವನ್ನಪ್ಪಿದ.


ನಾಲ್ಕನೆಯದಾಗಿ, ಟಿಪ್ಪೂ ಮತ್ತು ಪ್ರಭಾಕರನ್ ಇಬ್ಬರೂ ಒಂದು ಹಂತದಲ್ಲಿ ತಮ್ಮ ಬಲಗೈಯಂತಿದ್ದ ಸಹಪಾಠಿಗಳಿಂದಲೇ ವಂಚನೆಗೊಳಗಾದವರು. ಟಿಪ್ಪೂ ಸೇನೆಯ ದಂಡನಾಯಕನಾಗಿದ್ದ ಮೀರ್ ಸಾಧಕ್ ಒಳಗೊಳಗೇ ಬ್ರಿಟಿಷರೊಂದಿಗೆ ಕೈಜೋಡಿಸಿದ್ದ. ಟಿಪ್ಪೂ ಸೇನೆಯ ರಣತಂತ್ರಗಳನ್ನು, ಶ್ರೀರಂಗಪಟ್ಟಣ ಕೋಟೆಯ ರಹಸ್ಯ ಮಾಹಿತಿಗಳನ್ನು ಬ್ರಿಟಿಷ್ ಸೇನೆಗೆ ರಹಸ್ಯವಾಗಿ ರವಾನಿಸಿ ಬ್ರಿಟಿಷರೊಂದಿಗೆ ಸೇರಿಕೊಂಡು ಟಿಪ್ಪೂ ವಿರುದ್ಧವೇ ಯುದ್ಧ ಮಾಡಿದ. ಟಿಪ್ಪೂ ರಣರಂಗದಲ್ಲಿ ಸಾಮಾನ್ಯ ಸೈನಿಕನಂತೆ ಸತ್ತು ಬಿದ್ದಿದ್ದಾಗ ಅದು ಅವನದೇ ಮೃತ ದೇಹ ಎಂದು ಗುರುತಿಸಿದವನು ಅದೇ ಸಾಧಕ್.

ಪ್ರಭಾಕರನ್ ಪರಿಸ್ಥಿತಿ ಕೂಡ ಅದೇ ಆಯಿತು. ಒಂದು ಕಾಲದಲ್ಲಿ ಪ್ರಭಾಕರನ್‌ಗೆ ಬಾಡಿಗಾರ್ಡ್ ಆಗಿದ್ದ, ನಂತರ ಪೂರ್ವ ಈಳಂ ಪ್ರದೇಶದ ಪ್ರಮುಖ ದಂಡನಾಯಕನಾಗಿದ್ದ ಕರ್ನಲ್ ಕರುಣ ಅಲಿಯಾಸ್ ವಿನಯಗಮೂರ್ತಿ ಮುರಳೀಧರನ್ ಕೊನೆಗೆ ಪ್ರಭಾಕರನ್ ವಿರುದ್ಧವೇ ತಿರುಗಿಬಿದ್ದು ತಮಿಳರ ಶತ್ರುಗಳಾಗಿರುವ ಸಿಂಹಳೀಯರೊಂದಿಗೆ ಕೈಜೋಡಿಸಿದ. ಒಂದೇ ವ್ಯತ್ಯಾಸ ಎಂದರೆ, ಟಿಪ್ಪೂಗೆ ಕೊನೆತನಕವೂ ಸಾಧಕ್ ದ್ರೋಹದ ಬಗ್ಗೆ ಗೊತ್ತಾಗಲಿಲ್ಲ. ಪ್ರಭಾಕರನ್‌ಗೆ ಮೊದಲೆ ಗೊತ್ತಾಗಿತ್ತು. ಇತ್ತ ಪ್ರಭಾಕರನ್ ತನ್ನ ಕೊಟ್ಟ ಕೊನೆಯ ಹೋರಾಟದಲ್ಲಿ ನಿರತನಾಗಿದ್ದಾಗ ಅತ್ತ ಕರುಣ ಕೊಲಂಬೋದಲ್ಲಿ ಸಿಂಹಳೀಯ ಲಂಕಾ ಸರ್ಕಾರದಲ್ಲಿ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುತ್ತಿದ್ದ. ಕೊನೆಗೆ, ಪ್ರಭಾಕರನ್ ಮಲ್ಲೆತೀವು ಕೋಟೆಯೊಳಗೆ ಹುಲಿಯಂತೆ ಹೋರಾಡುತ್ತಾ ಸತ್ತುಬಿದ್ದಾಗ ಅದು ಅವನದೇ ಮೃತದೇಹ ಎಂಬುದನ್ನು ಗುರುತಿಸಿದ್ದು ಇದೇ ಕರುಣ. ■

...ನಾಯಕತ್ವ ತಯಾರಾಗಿರಲಿಲ್ಲ.

ಅಂದಿನಿಂದ ಇಂದಿನತನಕ ಸುಮಾರು ಹತ್ತೊಂಭತ್ತು ವರ್ಷಗಳ ಕಾಲ ಸೂ ಕಿ ಗೃಹಬಂಧನದಲ್ಲಿದ್ದಾರೆ. 2002ರಲ್ಲಿ ಒಮ್ಮೆ ಮಿಲಿಟರಿ ಆಡಳಿತ ಆಕೆಯ ಗೃಹಬಂಧನವನ್ನು ತೆರವುಗೊಳಿಸುವ ಪ್ರಯೋಗ ಮಾಡಿತು. ಸೂ ಕಿಗೆ ಅದೆಷ್ಟು ಜನಬೆಂಬಲವಿತ್ತೆಂದರೆ ಹೊರಬಂದ ತಕ್ಷಣ ಆಕೆ ಹೋದಲ್ಲೆಲ್ಲಾ ಲಕ್ಷಾಂತರ ಸಂಖ್ಯೆಯಲ್ಲಿ ಜನ ಸೇರುತ್ತಿದ್ದರು. ವಾಸ್ತವದಲ್ಲಿ ಅದು ಮಿಲಿಟರಿ ಸರ್ಕಾರದ ವಿರುದ್ಧ ಪ್ರಜಾಸತ್ತೆಗಾಗಿ ದೊಡ್ಡ ಜನಾಂದೋಲನವಾಗುವ ಕಡೆಗೆ ಹೊರಟಿತ್ತು. ಇದರಿಂದ ಬೆದರಿದ ಸೇನೆ ಒಂದು ವರ್ಷದೊಳಗೆ ಮತ್ತೆ ಸೂ ಕಿಯನ್ನು ಗೃಹಬಂಧನಕ್ಕೆ ತಳ್ಳಿತು. ಈ ತಿಂಗಳ ಕೊನೆಯ ವಾರದಲ್ಲಿ ಆಕೆಯ ಗೃಹಬಂಧನ ಕೊನೆಗೊಳ್ಳುವುದಿತ್ತು. ಅಷ್ಟರಲ್ಲೇ ಆಕೆ ಗೃಹಬಂಧನದ ನಿಯಮಗಳನ್ನು ಉಲ್ಲಂಘಿಸಿದ್ದಾಳೆಂದು ಘೋಷಿಸಿ ಹೊಸ ಕೇಸು ಜಡಿದು ಜೈಲಿಗಟ್ಟುವುದಕ್ಕೆ ಮಿಲಿಟರಿ ಮುಂದಾಗಿದೆ.

ಹೀಗೆ ಮ್ಯಾನ್ಮಾರ್‌ನಲ್ಲಿ ಹಾಡುಹಗಲೇ ಪ್ರಜಾಸತ್ತೆಯ ಕತ್ತು ಹಿಸುಕುತ್ತಿದ್ದರೂ ಅದರ ಬಗಲಲ್ಲೇ ಇರುವ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವವಾದ ಭಾರತ ತಲೆಕೆಡಿಸಿಕೊಳ್ಳದೆ ಕುಳಿತಿದೆ. ವಿಶ್ವದಾದ್ಯಂತ ಪ್ರಜಾಸತ್ತೆ ಸ್ಥಾಪನೆಯ ತನ್ನ ಅಭಿಯಾನದ ಭಾಗವಾಗಿಯೇ ಅಫ್ಘಾನಿಸ್ತಾನ ಮತ್ತು ಇರಾಕ್‌ಗಳ ಮೇಲೆ ಯುದ್ಧ ಮಾಡಿದೆನೆಂದು ಹೇಳಿಕೊಳ್ಳುತ್ತಿರುವ ಅಮೆರಿಕ ಮ್ಯಾನ್ಮಾರ್‌ನಲ್ಲಿ ಮಿಲಿಟರಿ ಪ್ರಜಾತಂತ್ರವನ್ನು ಹೊಸಕುತ್ತಿದ್ದರೂ ಬಾಯ್ಮುಚ್ಚಿಕೊಂಡಿದೆ. ■


ಕೃಷ್ಣಯ್ಯ ಶೆಟ್ಟಿ

ಮಂತ್ರಿ ಕೃಷ್ಣಯ್ಯ ಶೆಟ್ಟಿಯ ನೆರಳಲ್ಲಿ

ಕಂಬಾಲಪಲ್ಲಿಯ ದಾರಿಯಲ್ಲಿ ಮೈಲಾಂಡಹಳ್ಳಿ


ಮನೆ ಮುಂದೆಯೇ ಬೋರ್‌ವೆಲ್ ಇದ್ದರೂ ಅದರ ನೀರನ್ನವರು ಮುಟ್ಟಕೂಡದು. ಅವರಿಗೆಂದೇ ಇದ್ದ ಬೋರ್ ವೆಲ್ ಅನ್ನು ನೆಲಸಮಗೊಳಿಸಿದ್ದಾರೆ. ಆಲೂರಿನ ಯಾವುದೇ ಅಂಗಡಿಯವರು ಇವರಿಗೆ ಸಾಮಾನು-ದವಸ ಮಾರುವಂತಿಲ್ಲ. ಮಾರಿದ್ದೇ ಆದರೆ ಸಾವಿರ ರೂಪಾಯಿ ದಂಡ ವಿಧಿಸುತ್ತಾರೆ. ಅಷ್ಟೇ ಏಕೆ, ಆ ಊರಿನ ಮುಖ್ಯರಸ್ತೆಯಲ್ಲವರು ಕಾಲಿಡುವಂತಿಲ್ಲ. ಮೇಲ್ಜಾತಿಯ ಯುವಕರ ಕಣ್ಣಿಗೆ ಬೀಳಕೂಡದು. ಬಿದ್ದರೆ ಒದೆ ಗ್ಯಾರಂಟಿ. ಇನ್ನು ಒದೆ ತಿಂದು ರಕ್ತ ಸೋರಿಸಿಕೊಂಡು ಪೊಲೀಸ್ ಠಾಣೆಗೇನಾದರೂ ಹೋದರೆಂದರೆ ಪೊಲೀಸರು ದೂರು ಕೊಡಲು ಬಂದವನನ್ನೇ ಹೊರದಬ್ಬುತ್ತಾರೆ-

ಇದು ಮುಜರಾಯಿ ಮಂತ್ರಿ ಕೃಷ್ಣಯ್ಯ ಶೆಟ್ಟಿಯ ಸ್ವಂತ ಕ್ಷೇತ್ರ ಮಾಲೂರಿನ ಮೈಲಾಂಡಹಳ್ಳಿಯ ದಲಿತರ ಸದ್ಯದ ಪರಿಸ್ಥಿತಿ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಈ ಮೈಲಾಂಡಹಳ್ಳಿಯ ದಲಿತರೆಲ್ಲ ಸಾಮಾಜಿಕ ಬಹಿಷ್ಕಾರಕ್ಕೀಡಾಗಿದ್ದಾರೆ!

ಇತ್ತ ಮುಜರಾಯಿ ಮಂತ್ರಿ ಕೃಷ್ಣಯ್ಯ ಶೆಟ್ಟಿ ಗಂಗಾ ಜಲವನ್ನು ಕ್ಯಾನುಗಳಲ್ಲಿ ತರಿಸುವುದು, ಅದನ್ನೇ ಸುದ್ದಿ ಮಾಡುವುದು, ಅಯ್ಯಪ್ಪ ಸ್ವಾಮಿಗೆ ಬಸ್ಸುಗಟ್ಟಲೇ ಜನ ಕಳಿಸುವುದು. ಸರ್ಕಾರಿ ವೆಚ್ಚದಲ್ಲಿ ಕಾಶಿ-ಹರಿದ್ವಾರಗಳಿಗೆ ಯಾತ್ರೆ ಪೂರೈಸುವುದರಲ್ಲೇ ಬಿಜಿಯಾಗಿದ್ದಾರೆ. ಅವರ ಖಾಸಾ ತಮ್ಮ ರಮೇಶ್‌ತನ್ನ ಕೈಗಂಟಿದ ಬಿಜೆಪಿ ಕಾರ್ಯಕರ್ತೆ ಅನುರಾಧಾಳ ಹತ್ಯೆಯ ರಕ್ತ ಮುಚ್ಚಿಕೊಳ್ಳಲು ತಿಣುಕಾಡುತ್ತಿದ್ದರೆ, ಮೈಲಾಂಡಹಳ್ಳಿಯ ನಿರ್ಗತಿಕ ದಲಿತರೆಲ್ಲ ತಮ್ಮ ದೌರ್ಭಾಗ್ಯಕ್ಕಾಗಿ ಕಣ್ಣೀರಿಡುತ್ತಲೇ ಇದ್ದಾರೆ.


ಮುನಿಕೃಷ್ಣ


ತಿಮ್ಮರಾಜು


ಇನ್ಸ್‌ಪೆಕ್ಟರ್ ಸಂಪತ್‌ಕುಮಾರ್

ಮಾಲೂರಿನಿಂದ ಮಾಸ್ತಿ ರಸ್ತೆಯಲ್ಲಿನ ಕೇವಲ ಮೂರು ಕಿ.ಮೀ. ದೂರದ ಮೈಲಾಂಡಹಳ್ಳಿಯಲ್ಲಿ ಒಕ್ಕಲಿಗರದೇ ಬಹುಸಂಖ್ಯೆ. ತಿಗಳರು, ಕುರುಬರು, ಪಳ್ಳಿಗರು, ನಾಯಕರೆಲ್ಲ ಸೇರಿದರೆ ಒಟ್ಟು ಮುನ್ನೂರು ಮನೆಗಳ ಊರದು. ಈ ಪೈಕಿ ದಲಿತರದು ಕೇವಲ ಮೂವತ್ತೈದು ಮನೆ. ಮಂತ್ರಿ ಕೃಷ್ಣಯ್ಯ ಶೆಟ್ಟಿಯ ನಂಬಿಕಸ್ಥ ಬಂಟ ನಾರಾಯಣಸ್ವಾಮಿಯೇ ಈ ಊರಿನ ಮುಖಂಡ. ಕಾಂಗ್ರೆಸ್ಸಿನ ಕೃಷ್ಣಪ್ಪ ಜೆಡಿಎಸ್ ಪುಡಾರಿ ನಾರಾಯಣ ಮುಂತಾದ ಮರಿನಾಯಕರಿದ್ದರೂ ದಲಿತರ ಮೇಲಿನ ಅಟ್ಟಹಾಸಕ್ಕೆ ಎಲ್ಲಾ ಜಾತಿಗಳೂ, ಪಾರ್ಟಿಗಳೂ ಭೇದ ಮರೆತು ಒಗ್ಗಟ್ಟಾಗುತ್ತವೆ.

ಹತಭಾಗ್ಯ ದಲಿತರ ಪಾಲಿಗೆ ಧರ್ಮ, ರಾಜಕೀಯ ಪಕ್ಷಗಳು, ಸಂವಿಧಾನ, ಕಾನೂನು, ಪೊಲೀಸರು, ಸರ್ಕಾರ ಎಲ್ಲವೂ ಎಂದೋ ಸತ್ತಿವೆ.

ಮೈಲಾಂಡಹಳ್ಳಿಯ ದಲಿತರ ಸಂಕಟ ಶುರುವಾಗಿದ್ದು ಇಲ್ಲಿಗೆ ಮೂರು ತಿಂಗಳ ಹಿಂದಿನಿಂದ. ಕರ್ನಾಟಕ ಜನಾಂದೋಲನ ಸಂಘಟನೆಯ ಶಾಖೆಯೊಂದನ್ನು ಆರಂಭಿಸಿದ ಇಲ್ಲಿನ ದಲಿತರು ತಮ್ಮ ದಲಿತರ ಕಾಲೋನಿಯ ಪ್ರವೇಶದಲ್ಲೇ ಕಟ್ಟೆಯೊಂದನ್ನು ಕಟ್ಟಿ ಅದರ ಮೇಲೆ ಅಂಬೇಡ್ಕರ್ ಭಾವಚಿತ್ರ ಬರೆದರು. ಇಷ್ಟಕ್ಕೆ ಮೈಲಾಂಡಹಳ್ಳಿಯ ಸವರ್ಣೀಯರ ಪಿತ್ಥ ನೆತ್ತಿಗೇರಿತು. ಆ ಕಾಲದಿಂದಲೂ ತಾವು ಹಾಕಿದ ಗೆರೆ ದಾಟದ ದಲಿತರು ತಮ್ಮೆಲ್ಲರನ್ನೂ ಧಿಕ್ಕರಿಸಿ ಸಂಘಟನೆ ಮಾಡಿದ್ದು ತಮ್ಮ ಪ್ರತಿಷ್ಠೆಗೇ ಆಪತ್ತೆಂದು ಬಗೆದ ಬಿಜೆಪಿ ನಾಯಕ ನಾರಾಯಣಸ್ವಾಮಿ, ಕಾಂಗ್ರೆಸ್ ಧೂರ್ತ ಕೃಷ್ಣ, ಪಳ್ಳಿಗರ ಮಾದೇವ, ರಾಜಪ್ಪ, ಗೌಡರ ವೆಂಕಟೇಶ, ಕುರುಬರ ರಾಜಪ್ಪ, ಚೌಡಪ್ಪ ಗೌಡರ ಮಾದೇವ, ಕೃಷ್ಣಪ್ಪ ಮಂಜುನಾಥ, ಅಶ್ವತ್ಥ ಕುರುಬರ ಮುನಿರಾಜು, ಮಹೇಶ, ಶಿವಪ್ಪ, ಮುನಿಯಪ್ಪ, ಚಂದ್ರು, ಚೈರಾಜು, ಪಳ್ಳಿಗರ ಮೋಹನ ಮುಂತಾದವರೆಲ್ಲ ಸೇರಿ ಅಂಬೇಡ್ಕರ್ ಸ್ಮಾರಕವನ್ನೇ ನೆಲಸಮಗೊಳಿಸಿಬಿಟ್ಟರು.

ಅಲ್ಲಿಂದಾಚೆಗೆ ಇಡೀ ಹಳ್ಳಿಯ ಸವರ್ಣೀಯರೆಲ್ಲ ಎಂಥಾ ಕ್ರೌರ್ಯಕ್ಕೆ ನಿಂತರೆಂದರೆ, ಕಾಲೋನಿಗೆ ಬರುತ್ತಿದ್ದ ಕುಡಿಯುವ ನೀರನ್ನೇ ಒಡೆದುಬಿಟ್ಟರು. ಇಡೀ ದಲಿತರ ಕಾಲೋನಿಗೆಂದಿದ್ದ ಒಂದೇ ಒಂದು ಬೋರ್‌ವೆಲ್ ಅನ್ನು ತನ್ನ ಗೂಂಡಾಪಡೆಯೊಂದಿಗೆ ಬಂದು ನೆಲಸಮಗೊಳಿಸಿದ ಕೃಷ್ಣಪ್ಪ ಎಂಬಾತ ಬೋರ್‌ವೆಲ್ ಕೆಡವಿದ್ದ ಜಾಗವನ್ನೇ ತನ್ನ ತೋಟಕ್ಕೆ ರಸ್ತೆಯನ್ನಾಗಿ ಮಾಡಿಕೊಂಡಿದ್ದ.


ಮೈಲಾಂಡಹಳ್ಳಿಯ ದಲಿತರ ಕಾಲೋನಿ

ಇದು ಇಷ್ಟಕ್ಕೇ ನಿಂತಿದ್ದರೆ ದಲಿತರು ಕನಿಷ್ಠ ಉಸಿರಾಡಿಕೊಂಡಾದರೂ ಇದ್ದು ಬದುಕುತ್ತಿದ್ದರು. ಆದರೆ ಮೇಲ್ಜಾತಿ ಪುಂಡರು ಬಿಡಬೇಕಲ್ಲ; ಸಿಕ್ಕಸಿಕ್ಕಲ್ಲಿ ದಲಿತ ಯುವಕರನ್ನು ಹಿಡಿದು ಬಡಿಯಲಾರಂಭಿಸಿದರು. ದಲಿತ ಯುವಕರು ತಮ್ಮ ಬೈಕಲ್ಲಿ ಹೋಗುತ್ತಿದ್ದರೆ ಬೇಕಂತಲೇ ಮೈತಗುಲಿಸಿ ಕ್ಯಾತೆ ತೆಗೆಯುವುದು, ಸಾಗುತ್ತಿದ್ದ ಬೈಕಿಗೆ ಮುರುಕಲು ಸೈಕಲ್ ಎಸೆದು ಜಗಳ ಮಾಡುವುದು, ಹೀನಾಯವಾಗಿ ಹೊಡೆಯುವುದನ್ನು ಶುರು ಹಚ್ಚಿಕೊಂಡರು. ಜೆಡಿಎಸ್ ಧೂರ್ತ ರಾಮೇಗೌಡನ ಇಟ್ಟಿಗೆ ಫ್ಯಾಕ್ಟರಿಯ ಕೆಲಸಗಾರನೊಬ್ಬ ಲೋಕೇಶ್ ಎಂಬ ದಲಿತ ಯುವಕನನ್ನು ಮಾತಿಗೆಳೆದು ಹೊಡೆದ. ಏಪ್ರಿಲ್ 11 ರಂದು ಮುನಿಯಪ್ಪನ ಮಗ ತಿಮ್ಮರಾಜು ಎಂಬಾತ ಬೈಕಲ್ಲಿ ಹೋಗುತ್ತಿದ್ದರೆ ಬೈಕಿನ ಮಿರ್‍ರ್ ಟಚ್ ಆಯಿತೆಂದು ವೆಂಕಟೇಶ್, ಮುನಿಕೃಷ್ಣ ಮುಂತಾದ ಪುಂಡರೆಲ್ಲ ಸೇರಿ ಆತನನ್ನು ನೆಲಕ್ಕೆ ಹಾಕಿ ತುಳಿದರು. ಮುನಿಕೃಷ್ಣ ಎಂಬ ಮತ್ತೊಬ್ಬ ದಲಿತ ಯುವಕನ ಬೈಕಿಗೆ ಇಟ್ಟಿಗೆ ಕೆಲಸಕ್ಕೆ ಬಂದಿದ್ದ ಒರಿಸ್ಸಾದ ಬಾಲಕಿಯೊಬ್ಬಳನ್ನು ಅಡ್ಡತಳ್ಳಿ, ರಕ್ತ ಸುರಿಸುತ್ತಾ ಬಿದ್ದು ಒದ್ದಾಡುತ್ತಿದ್ದ ಆತನನ್ನೇ ಹಿಡಿದು ಬಡಿಯುತ್ತದೆ ಸವರ್ಣೀಯ ಪುಂಡರ ಗ್ಯಾಂಗ್.


ನೆಲಸಮಗೊಂಡ ಅಂಬೇಡ್ಕರ್ ಸ್ಮಾರಕ

ಈ ಬಗ್ಗೆ ದೂರು ಕೊಡಲೆಂದು ಮಾಲೂರು ಪೊಲೀಸ್ ಠಾಣೆಗೆ ಬಂದರೆ ಪೊಲೀಸರು ಮುನಿಕೃಷ್ಣನನ್ನೇ ಬೆದರಿಸಿ ಓಡಿಸಿದ್ದಾರೆ. ಇನ್ನು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದರೆ ಆಸ್ಪತ್ರೆಗೇ ನುಗ್ಗಿದ ನಲವತ್ತು ಮಂದಿ ಮೇಲ್ಜಾತಿ ಪುಂಡರು ದೂರು ಕೊಡದಂತೆ ಮುನಿಕೃಷ್ಣನನ್ನೇ ಬೆದರಿಸುತ್ತಾರೆ. ಆತನ ಜೊತೆಗಿದ್ದ ದಲಿತ ಹುಡುಗರ ಮೇಲೆ ಆಸ್ಪತ್ರೆಯಲ್ಲೇ ಕೈ ಮಾಡಿದ್ದಾರೆ. ಇಷ್ಟೆಲ್ಲ ನಡೆದರೂ ಮಾಲೂರು ಇನ್ಸ್‌ಪೆಕ್ಟರ್ ಸಂಪತ್‌ಕುಮಾರ್ ಮುನಿಕೃಷ್ಣನ ದೂರು ದಾಖಲಿಸಿಕೊಳ್ಳುವುದಿರಲಿ, ಕನಿಷ್ಠ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವುದಕ್ಕೂ ಮುನಿಕೃಷ್ಣನ ರಕ್ಷಣೆಗೆ ಪೊಲೀಸರನ್ನು ನೇಮಿಸುವುದಿಲ್ಲ.

ಶ್ರೀನಿವಾಸ್ ಎಂಬ ಮತ್ತೊಬ್ಬ ದಲಿತ ಯುವಕನನ್ನು ಪಂಚಾಯ್ತಿ ಮಾಡ್ತೀವಿ ಬಾ ಎಂದು ಕರೆಸಿಕೊಂಡು ಥಳಿಸಿದ್ದಾರೆ. ದಲಿತರಿಗೆ ಅಂಗಡಿಗಳವರಿರಲಿ ನ್ಯಾಯಬೆಲೆ ಅಂಗಡಿಯವನೂ ರೇಷನ್ ಕೊಡುವಂತಿಲ್ಲ. ಯಾವತ್ತು ದಲಿತರಿಗೆ ಅಂಗಡಿಗಳವರು ಸಾಮಾನು ಮಾರುತ್ತಿಲ್ಲ ಎಂಬುದು ಖಾತರಿಯಾಯಿತೋ ಅದೇ ಊರಿನ ಮತ್ತೊಬ್ಬ ದಲಿತ ಯುವಕ ನಾಗರಾಜ್ ಎಂಬಾತ ಮೈಲಾಂಡಹಳ್ಳಿಯ ಬಸ್‌ಸ್ಟಾಂಡ್ ಪಕ್ಕದಲ್ಲೇ ಪೆಟ್ಟಿಗೆ ಅಂಗಡಿಯಿಟ್ಟ. ಅಷ್ಟಕ್ಕೇ ಕೆರಳಿದ ಮೇಲ್ಜಾತಿ ಪುಂಡರು 'ನಿನ್ನ ಪೆಟ್ಟಿ ಅಂಗಡಿ ಎತ್ತಿ ಕೆರೆಗೆ ಬಿಸಾಕ್ತೀವಿ' ಎಂದು ಹೆದರಿಸಿ ಅಂಗಡಿ ಎತ್ತಿಸಿಬಿಟ್ಟರು. ಆತನ ಅಂಗಡಿಯಲ್ಲಿದ್ದ ಸಾಮಾನೆಲ್ಲ ರಸ್ತೆಗೆಸೆದರು.

ಇದು ಮೈಲಾಂಡಹಳ್ಳಿಯ ದಲಿತರ ದುರ್ಗತಿಗೆ ಕೆಲ ಉದಾಹರಣೆಗಳಷ್ಟೆ. ಮಾಲೂರು ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಸಂಪತ್‌ಕುಮಾರ್ ಹೇಳಿಕೇಳಿ ಮಂತ್ರಿ ಕೃಷ್ಣಯ್ಯ ಶೆಟ್ಟಿಯ ನಿಯತ್ತಿನ ಬಂಟ. ಕೃಷ್ಣಯ್ಯ ಶೆಟ್ಟಿಯ ಖಾಸಾ ತಮ್ಮ ರಮೇಶ್ ತನ್ನ ಜೊತೆ ಅನೈತಿಕ ಸಂಬಂಧವಿಟ್ಟುಕೊಂಡಿದ್ದ ಬಿಜೆಪಿ ಕಾರ್ಯಕರ್ತೆ ಅನುರಾಧಳನ್ನು ಬರ್ಬರವಾಗಿ ಕೊಲ್ಲಿಸಿದ ಬಗ್ಗೆ ಇಡೀ ಮಾಲೂರೇ ಮಾತಾಡಿಕೊಂಡರೂ ಕೊಲೆಯನ್ನು ಯಾರೋ ಅಬ್ಬೇಪಾರಿಗಳ ತಲೆಗೆ ಕಟ್ಟಿ ಕಾಪಾಡಿದ ಪುಣ್ಯಾತ್ಮ ಇನ್ಸ್‌ಪೆಕ್ಟರ್ ಸಂಪತ್‌ಕುಮಾರ್!

ಕೊಲೆಯನ್ನೇ ಮುಚ್ಚಿಟ್ಟವನಿಗೆ ಮೈಲಾಂಡಹಳ್ಳಿಯ ದಲಿತರ ದಮನಕಾಂಡವನ್ನು ಅದುಮುವುದು ಯಾವ ಲೆಕ್ಕ? ಈ ಬಗ್ಗೆ ಮಾಲೂರಿನ ಯಾವೊಬ್ಬ ಪತ್ರಕರ್ತನೂ ಬರೆಯುತ್ತಿಲ್ಲ. ಪ್ರತಿನಿತ್ಯ ತಮ್ಮ ಮೇಲಾದ ದಾಳಿ-ಹಲ್ಲೆಯ ಬಗ್ಗೆ ಮೈಲಾಂಡಹಳ್ಳಿಯ ದಲಿತರು ಸಂಘಟನೆ ಕಟ್ಟಿದ್ದೇ ಮೇಲ್ಜಾತಿ ಅಟ್ಟಹಾಸದ ವಿರುದ್ಧ ಸ್ವಯಂ ರಕ್ಷಣೆಗಾಗಿ. ಇಷ್ಟೆಲ್ಲ ದೌರ್ಜನ್ಯಗಳಾದರೂ ಒಂದೇ ಒಂದು ಪೊಲೀಸ್ ಕಂಪ್ಲೇಂಟ್ ದಾಖಲಾಗುತ್ತಿಲ್ಲ ಎಂದರೆ ಏನರ್ಥ?

ಕೋಲಾರದ ಎಸ್ಪಿ ಪುಟ್ಟಸ್ವಾಮಿಯವರಿಗಿದು ಗೊತ್ತಿಲ್ಲವೆಂದಲ್ಲ. ಅಡಿಷನಲ್ ಎಸ್ಪಿ ಫಣೀಂದ್ರಸಿಂಗ್ ಸ್ವತಃ ಮೈಲಾಂಡಹಳ್ಳಿಯ ದಲಿತರನ್ನು ಕಂಡು ಕಷ್ಟ ಕೇಳಿದ್ದಾರೆ. ಹೀಗಿದ್ದೂ ಒಬ್ಬೇಒಬ್ಬ ಮೇಲ್ಜಾತಿ ಪುಂಡನನ್ನು ಮುಟ್ಟದಂತೆ ಮಂತ್ರಿ ಕೃಷ್ಣಯ್ಯ ಶೆಟ್ಟಿಯೇ ಗುಟುರು ಹಾಕಿದ್ದಾರೆ. ತಮ್ಮದೇ ಕ್ಷೇತ್ರದ ದಲಿತರ ಕಣ್ಣೀರು ಒರೆಸಲಾಗದ ಕೃಷ್ಣಯ್ಯ ಶೆಟ್ಟಿ ಯಾವ ದೇವರಿಗೆ ಏನೆಲ್ಲಾ ಯಜ್ಞಯಾಗ ಮಾಡಿ ಏನು ಫಲ? ಮೈಲಾಂಡಹಳ್ಳಿಯ ದಲಿತರು ಹಿಂದೂಗಳಲ್ಲದಿರಬಹುದು; ಆದರೆ ಅವರು ಮನುಷ್ಯರಲ್ಲವೇ?

ದಲಿತರ ಕಣ್ಣೀರು ಇವತ್ತಲ್ಲ ನಾಳೆ ವಂಚಕ ಮಂತ್ರಿ ಕೃಷ್ಣಯ್ಯ ಶೆಟ್ಟಿಗೆ ಮುಳುವಾಗಲಿದೆ. ಮತ್ತೊಂದು ಕಂಬಾಲಪಲ್ಲಿಯಾಗುವ ಮೊದಲು ಮೈಲಾಂಡಹಳ್ಳಿಯ ದಲಿತರನ್ನು ಸರ್ಕಾರ ಕಾಪಾಡಬೇಕಿದೆ. ಈ ಬಗ್ಗೆ ಮಾನವ ಹಕ್ಕು ಆಯೋಗ ಕೂಡ ಕಣ್ಣು ಮುಚ್ಚಿ ಕೂತಿದೆಯೆಂದರೆ ಏನರ್ಥ?

● ರಾ. ಸೋಮನಾಥ್

ಮುಠಾಮೇಸ್ತ್ರಿಯ ದುರ್ಗತಿ

ಮುಠಾಮೇಸ್ತ್ರಿಯ ಭ್ರಮೆ ಕಳಚಿ ಬಿದ್ದಿದೆ. ರಾತ್ರೋರಾತ್ರಿ ಪಕ್ಷ ಕಟ್ಟಿ ಬೆಳಗಾಗುವ ಹೊತ್ತಿಗೆಲ್ಲಾ ಮುಖ್ಯಮಂತ್ರಿಯಾಗುವ ಚಿರಂಜೀವಿಯ ಲೆಕ್ಕಾಚಾರ ತಲೆಕೆಳಗಾಗಿದೆ. ಮೀಡಿಯಾಗಳು ಕೊಟ್ಟ ಚಿತ್ರಣವನ್ನೇ ತನ್ನ ಪರ ಅಲೆ ಎಂದು ನಂಬಿದ. ವಾಸ್ತವ ಪರಿಸ್ಥಿತಿಗಳಿಗೂ ಚಿರಂಜೀವಿಯ ಲೆಕ್ಕಾಚಾರಕ್ಕೂ ತಾಳೆ ಹೊಂದಲೇ ಇಲ್ಲ. ಕಾಪುಗಳೇ ಪ್ರಬಲರಾಗಿದ್ದ ಐದೂ ಜಿಲ್ಲೆಗಳಿಂದ ಪ್ರಜಾರಾಜ್ಯಂಗೆ ದಕ್ಕಿದ್ದು ಕೇವಲ ಐದು ಸ್ಥಾನಗಳು ಮಾತ್ರವೆಂದರೆ ಅದು ಚಿರಂಜೀವಿಯ ವೈಫಲ್ಯವಲ್ಲದೇ ಮತ್ತೇನು?


ಚಿರು


ಮುಠಾಮೇಸ್ತ್ರಿಯ ಭ್ರಮೆ ಕಳಚಿ ಬಿದ್ದಿದೆ. ರಾತ್ರೋರಾತ್ರಿ ಪಕ್ಷ ಕಟ್ಟಿ ಬೆಳಗಾಗುವ ಹೊತ್ತಿಗೆಲ್ಲಾ ಮುಖ್ಯಮಂತ್ರಿಯಾಗುವ ಚಿರಂಜೀವಿಯ ಲೆಕ್ಕಾಚಾರ ತಲೆಕೆಳಗಾಗಿದೆ. ಆಂಧ್ರ ಶಾಸನಾಂಗದ 294 ಸ್ಥಾನಗಳ ಪೈಕಿ ಚಿರಂಜೀವಿಯ ಪ್ರಜಾರಾಜ್ಯಂ ಪಕ್ಷಕ್ಕೆ ಸಿಕ್ಕಿದ್ದು ಕೇವಲ ಹದಿನೆಂಟು ಸ್ಥಾನಗಳು ಮಾತ್ರ. ನಿಂತ ಎರಡು ಕ್ಷೇತ್ರಗಳ ಪೈಕಿ ತಿರುಪತಿಯಷ್ಟೇ ಚಿರು ಕೈಹಿಡಿಯಿತೇ ಹೊರತು ಮತ್ತೊಂದು ಕ್ಷೇತ್ರವಾದ ಪಲಕೋಲೆಯಲ್ಲಿ ಹೆಸರೇ ಇಲ್ಲದ ಮಹಿಳೆಯೊಬ್ಬಳು ಮೆಗಾಸ್ಟಾರ್‌ಗೆ ಮಣ್ಣುಮುಕ್ಕಿಸಿದ್ದಾಳೆ. ಸ್ವತಃ ಚಿರಂಜೀವಿಯ ಬಾಮೈದುನ ಮತ್ತು ಪ್ರಜಾರಾಜ್ಯಂ ಪಕ್ಷದ ದಂಡನಾಯಕನಂತಿದ್ದ ಅಲ್ಲು ಅರವಿಂದ್ ಅನಕಪಲ್ಲೆ ಲೋಕ ಸಭಾ ಕ್ಷೇತ್ರದಿಂದ ಹೀನಾಯ ವಾಗಿ ಸೋತಿದ್ದಾನೆ. ಒಂದೇ ಒಂದು ಲೋಕಸಭಾ ಸ್ಥಾನ ವನ್ನೂ ಚಿರು ಕೈಯಲ್ಲಿ ಗೆಲ್ಲಲಾಗಿಲ್ಲವೆಂದರೆ; ಎಲ್ಲಿಯ ಎನ್‌ಟಿಆರ್ ಮತ್ತುಎಲ್ಲಿಯ ಚಿರಂಜೀವಿ? ಚಿರು ಎಡವಿದ್ದೆಲ್ಲಿ? ಆಂಧ್ರದ ಜನರ ಸಿನಿಮಾ ಹುಚ್ಚೇ ಕ್ಷೀಣಿಸಿತಾ? ಇದು ತಮಿಳುನಾಡಿನ ರಜನಿ ಕಾಂತ್‌ಗೂ ಪಾಠವಾ?

ತಿರುಪತಿಯಲ್ಲಿ ತನ್ನ ಪ್ರಜಾರಾಜ್ಯಂ ಪಕ್ಷ ಸ್ಥಾಪನೆಯ ರ‍್ಯಾಲಿಯಲ್ಲಿ ಸೇರಿದ ಜನ ಸ್ತೋಮ, ಸಿಕ್ಕ ಮೀಡಿಯಾ ಪ್ರಚಾರ, ಚಿರು ಪ್ರಚಾರ ಸಭೆಗೆ ಕಿಕ್ಕಿರಿಯುತ್ತಿದ್ದ ಭಕ್ತವೃಂದ ಎಲ್ಲವನ್ನೂ ಲೆಕ್ಕ ಹಾಕಿಯೇ ಈ ಬಾರಿ ಆಂಧ್ರ ಚಿರಂಜೀವಿಗೊಲಿಯಲಿದೆ ಎಂಬ ನಿರೀಕ್ಷೆಯಿತ್ತು. ಚಿರು ಮತ್ತೊಬ್ಬ ಎನ್‌ಟಿಆರ್ ಆಗುವ ಎಲ್ಲಾ ಲಕ್ಷಣಗಳೂ ನಿಚ್ಚಳವಾಗಿದ್ದವು. ಅದೇ ಗುಂಗಿಗೆ ಬಿದ್ದ ಚಿರು ಪಕ್ಕಾ ಸಿನಿಮಾ ಸ್ಟಾರ್ ಗತ್ತಿನಲ್ಲೇ ಪ್ರಚಾರ ಸಭೆಗಳಿಗೆ ವಿಪರೀತ ಮಹತ್ವ ಕೊಟ್ಟನೇ ಹೊರತು ವಾಸ್ತವ ಅರಿಯಲಿಲ್ಲ.

ಎನ್‌ಟಿಆರ್ ರಾಜಕೀಯಕ್ಕೆ ಕಾಲಿಟ್ಟ ಪರಿಸ್ಥಿತಿಯೇ ಬೇರೆ, ಈಗ ಚಿರಂಜೀವಿ ಪಕ್ಷ ಕಟ್ಟಿದಾಗಿನ ಸ್ಥಿತಿಗಳಲ್ಲೇ ಅಜಗಜಾಂತರ ವ್ಯತ್ಯಾಸವಿತ್ತು. ತೆಲುಗರ ಆತ್ಮಾಭಿಮಾನದ ಪ್ರಶ್ನೆಯನ್ನೇ ಕೆಣಕಿ ಆಂಧ್ರಾದ್ಯಂತ ಚಂಡಮಾರುತ ವೆಬ್ಬಿಸಿದ ಎನ್‌ಟಿಆರ್ ಕಾಲಕ್ಕೆ ಕಾಂಗ್ರೆಸ್ ಬಿಟ್ಟರೆ ಮತ್ತೊಂದು ಪಕ್ಷವಿರಲಿಲ್ಲ, ಕಾಂಗ್ರೆಸ್ಸಿನಲ್ಲೇ ವಿಪರೀತ ಕಚ್ಚಾಟವಿತ್ತು. ಎಂಟೇ ತಿಂಗಳಲ್ಲಿ ಆಂಧ್ರದ ಮೂವರು ಮುಖ್ಯಮಂತ್ರಿಗಳನ್ನು ಬದಲಾಯಿಸಿದ ಇಂದಿರಾಗಾಂಧಿಯ ವಿರುದ್ಧ ಆಕ್ರೋಶದ ಅಲೆ ಯಿತ್ತು.

ಈಗ ಹಾಗಲ್ಲ, ಎನ್‌ಟಿಆರ್ ಅಳಿಯ ಚಂದ್ರಬಾಬು ನಾಯ್ಡುವಿನ ತೆಲುಗು ದೇಶಂ, ಪ್ರತ್ಯೇಕ ತೆಲಂಗಾಣಕ್ಕೆಂದೇ ಜನ್ಮ ತಳೆದ ಟಿಆರ್‌ಎಸ್ ಮತ್ತು ಆಡಳಿತಾರೂಢ ಕಾಂಗ್ರೆಸ್‌ನಂಥ ಮೂರು ಪಳಗಿದ ಪಕ್ಷಗಳನ್ನು ಎದುರಿಸುವಲ್ಲಿ ಬೇಕಾದ ಸಿದ್ಧತೆ, ಚಾಕಚಕ್ಯತೆ, ಶ್ರಮ ಮತ್ತು ದೂರದೃಷ್ಟಿಗಳ್ಯಾವುದೂ ಚಿರಂಜೀವಿಯಲ್ಲಿರಲೇ ಇಲ್ಲ. ಕನಿಷ್ಠ ಆತನ 'ಜಾತಿಯಾದರೂ ಕೈಹಿಡಿಯಬೇಕಿತ್ತು. ಆಂಧ್ರದ ಹಳ್ಳಿಹಳ್ಳಿಗಳಲ್ಲೂ ಚಿರಂಜೀವಿಯ ಅಭಿಮಾನಿ ಸಂಘಗಳಿದ್ದವು. ದುಡ್ಡೂ ಕಾಸಿಗೆ ಬರವಿರಲಿಲ್ಲ, ಕಾಂಗ್ರೆಸ್ ಮತ್ತು ತೆಲುಗು ದೇಶಂಗಳಿಂದ ವಲಸೆ ಬಂದ ಪ್ರಭಾವಿ ನಾಯಕರ ಹಿಂದೇ ಚಿರು ಬೆನ್ನಿಗಿತ್ತು.

ಆದರೆ ಚಿರು ಪಾಲಿನ ಮೆದುಳು, ಕಣ್ಣು ಮತ್ತು ಕಿವಿಯಂತಿದ್ದವನು ಆತನ ಬಾಮೈದ ಅಲ್ಲು ಅರವಿಂದ್. ಯಾರನ್ನು ತನ್ನ ಬಾಹುಬಲವೆಂದು ಚಿರಂಜೀವಿ ಭಾವಿಸಿದ್ದನೋ ಆತನೇ ಚಿರಂಜೀವಿಯ ಅತೀದೊಡ್ಡ ದೌರ್ಬಲ್ಯವಾಗಿದ್ದ. ಪಕ್ಕಾ ಕಾರ್ಪೊರೇಟ್ ಶೈಲಿಯಲ್ಲಿ ಹೈಟೆಕ್ಕಾಗಿ ಪಕ್ಷ ಕಟ್ಟಲು ಹೋದ ಅಲ್ಲು ಅರವಿಂದ್‌ಗೆ ಆಂಧ್ರದ ರಾಜಕೀಯ ಒತ್ತಟ್ಟಿಗಿರಲು ವೋಟ್ ಬ್ಯಾಂಕ್ ತಂತ್ರ ಕೂಡ ಗೊತ್ತಿರಲಿಲ್ಲ.


ಎನ್‌ಟಿಆರ್

ತನ್ನ ಸಿನಿಮಾ ಒಂದು ಸೂಪರ್ ಹಿಟ್ಟಾಗುವುದಕ್ಕೂ, ಪ್ರಚಾರ ಸಭೆಗೆ ಜನ ಕಿಕ್ಕಿರಿಯುವುದಕ್ಕೂ ಹಾಗೇ ಕಿಕ್ಕಿರಿಯುವ ಜನರೆಲ್ಲ ಓಟಾಗಿ ಪರಿವರ್ತನೆಗೊಳ್ಳುವುದಕ್ಕೂ ಇರುವ ಸಂಬಂಧವನ್ನು ಚಿರಂಜೀವಿ ಅರ್ಥ ಮಾಡಿಕೊಳ್ಳಲಿಲ್ಲ. ಆ ಕಾಲದಿಂದಲೂ ಆಂಧ್ರವನ್ನಾಳುತ್ತ ಬಂದದ್ದು ಆಂಧ್ರದ ಜನಸಂಖ್ಯೆಯ ಕೇವಲ ಆರೂವರೆ ಪರ್ಸೆಂಟನಷ್ಟಿರುವ ರೆಡ್ಡಿಗಳು ಮತ್ತು ಶೇ. ಐದಕ್ಕಿಂತ ಕಮ್ಮಿಯಿರುವ ಕಮ್ಮಗಳು ಮಾತ್ರ. 30 ವರ್ಷಕ್ಕಿಂತ ಹೆಚ್ಚು ಕಾಲ ಫ್ಯೂಡಲ್ ರೆಡ್ಡಿಗಳೇ ಆಂಧ್ರದ ಮುಖ್ಯಮಂತ್ರಿಯಾಗಿದ್ದರು. ಕೆಲ ದಿನಗಳ ಕಾಲ ಅಂಜಯ್ಯ ಎಂಬ ಹಿಂದುಳಿದವನೊಬ್ಬ ಇಂದಿರಾ ಕಾಲಕ್ಕೆ ಮುಖ್ಯಮಂತ್ರಿಯಾಗಿದ್ದು ಬಿಟ್ಟರೆ ಮಿಕ್ಕಂತೆ ಕಮ್ಮಗಳೇ ಆಂಧ್ರವನ್ನಾಳುತ್ತಾ ಬಂದರು. ದಲಿತರು, ಹಿಂದುಳಿದವರು ಮತ್ತು ಮುಸ್ಲಿಮರ ಸಂಖ್ಯೆ ಈ ಎರಡೂ ಜಾತಿಗಳಿಗಿಂತ ದೊಡ್ಡದಿದೆ. ಈ ಪೈಕಿ ಚಿರಂಜೀವಿಯ ಕಾಪು ಜನಾಂಗವೊಂದೇ ಶೇ. ಹದಿನೆಂಟರಿಂದ ಇಪ್ಪತ್ತರಷ್ಟಿದೆ.

ಪೂರ್ವ ಗೋದಾವರಿ, ಪಶ್ಚಿಮ ಗೋದಾವರಿ, ಕೃಷ್ಣಾ, ಚಿತ್ತೂರು ಮತ್ತು ಅನಂತಪುರ ಜಿಲ್ಲೆಗಳಲ್ಲಿ ಗಣನೀಯವಾಗಿರುವ ಕಾಪುಗಳೆಲ್ಲ ಚಿರು ಬೆನ್ನಿಗೆ ನಿಂತುಬಿಟ್ಟಿದ್ದರೆ ಕನಿಷ್ಠ ನೂರು ಸೀಟುಗಳಾದರೂ ಗಿಟ್ಟುತ್ತಿತ್ತು. ತನ್ನ ಜಾತಿಯನ್ನೂ ಲೆಕ್ಕಕ್ಕಿಡದಷ್ಟು ಹುಂಬಬುದ್ಧಿ ಚಿರು ತಲೆ ಹೊಕ್ಕಿತ್ತು. ಇನ್ನೇನು ಮುಖ್ಯಮಂತ್ರಿಯಾಗೇ ಬಿಟ್ಟೇ ಎಂಬ ಭ್ರಮೆಯಲ್ಲಿ ತನ್ನ ಅಭಿಮಾನಿ ಸಂಘಗಳನ್ನೂ ಮರೆತುಬಿಟ್ಟ. ಪಲಕೋಲೆಯಲ್ಲಿ ಸ್ಪರ್ಧಿಸದೇ ತನ್ನ ಸ್ವಂತ ಜಿಲ್ಲೆ ಪಶ್ಚಿಮ ಗೋದಾವರಿಯ ನರಸಾಪುರದಿಂದ ಸ್ಪರ್ಧಿಸುವಂತೆ ಆತನ ಅಭಿಮಾನಿ ಸಂಘವೇ ಒತ್ತಾಯಿಸಿತ್ತು.

ತನ್ನ ಅಭಿಮಾನಿಗಳೇ ಕೊಟ್ಟ ಸಲಹೆಯನ್ನು ಧಿಕ್ಕರಿಸಿದ ಚಿರಂಜೀವಿ ಬಾಮೈದ ಅಲ್ಲು ಅರವಿಂದನ ಮಾತು ಕೇಳಿ ಪಲಕೋಲೆಯಿಂದ ಕಣಕ್ಕಿಳಿದ. ಹೀನಾಯವಾಗಿ ಸೋತ. ತಿರುಪತಿಯೇನಾದರೂ ಕೈಹಿಡಿಯದೇ ಹೋಗಿದ್ದರೆ ಚಿರಂಜೀವಿಯ ಮಾನ ಮೂರು ಕಾಸಿಗಿರುತ್ತಿತ್ತು. ತಳಮಟ್ಟದಲ್ಲಿ ಕಾರ್ಯಕರ್ತರನ್ನು ರೂಪಿಸದೇ, ಮತಗಟ್ಟೆಯ ಹಂತದಲ್ಲಿ ಓಟು ಬಾಚುವ ತಂತ್ರವನ್ನೇ ಯೋಜಿಸದೆ ಕೇವಲ ಮೀಡಿಯಾ ಪ್ರಚಾರಕ್ಕಷ್ಟೇ ಪ್ರಜಾರಾಜ್ಯಂ ಸೀಮಿತವಾಯಿತು.


ಎನ್‌ಟಿಆರ್ ಇದ್ದಾಗಿನ ಆಂಧ್ರದ ಹಳ್ಳಿಗಳ ಪರಿಸ್ಥಿತಿಯೇ ಬೇರೆಯಾದರೆ ಈಗ ಕಾಂಗ್ರೆಸ್ ಮುಖ್ಯಮಂತ್ರಿ ರಾಜಶೇಖರ ರೆಡ್ಡಿಯ ಗ್ರಾಮೀಣ ರಾಜಕಾರಣವೇ ಬೇರೆಯಾಗಿತ್ತು. ರೈತರು ಮತ್ತು ಕೃಷಿ ಕಾರ್ಮಿಕರಿಗೆಂದೇ ರಾಜಶೇಖರ ರೆಡ್ಡಿ ಆರೋಗ್ಯ ಶ್ರೀ ಎಂಬ ವಿಶಿಷ್ಟ ಯೋಜನೆ ರೂಪಿಸಿದ್ದ. ಚಂದ್ರಬಾಬು ನಾಯ್ಡು ನಿರ್ಲಕ್ಷಿಸಿದ್ದ ನೀರಾವರಿ ಯೋಜನೆಗಳನ್ನೆಲ್ಲ ವಿಪರೀತ ಆಸಕ್ತಿಯಿಂದ ಪೂರ್ಣಗೊಳಿಸಿದ್ದು, ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಸರಬರಾಜನ್ನು ನಿಲ್ಲಿಸಿದ್ದ ಚಂದ್ರಬಾಬು ನಾಯ್ಡುಗೆ ವ್ಯತಿರಿಕ್ತವಾಗಿ ವೈಎಸ್‌ಆರ್ ಮತ್ತೆ ಉಚಿತ ವಿದ್ಯುತ್ ಕೊಟ್ಟಿದ್ದು, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದಿದ್ದು;

▶▶▶

ಗೆಲ್ಲುವ ತನಕ ಸೋಮಣ್ಣ ಗೆದ್ದ ನಂತರ ಯಾರಣ್ಣ?


ಸೋಮಣ್ಣನ ಕರಾಮತ್ತೇ ಅಂಥಾದ್ದು!

ಕೃಷ್ಣ ಭೈರೇಗೌಡರ ಸೋಲಿಗೆ ಯಾರೇನೇ ಕಾರಣ ಕೊಟ್ಟರೂ ಅದರಲ್ಲಿ ಸೋಮಣ್ಣನ ಕೈಚಳಕದ್ದೇ ಪ್ರತ್ಯೇಕ ಕತೆಯಾಗುತ್ತದೆ. ಬೆಂಗಳೂರು ದಕ್ಷಿಣದ ಬಿಜೆಪಿ ಶಾಸಕರ ಪೈಕಿ ಬಸವನಗುಡಿಯ ರವಿಸುಬ್ರಮಣ್ಯಂ ಸರಿಸುಮಾರು 23 ಸಾವಿರದಷ್ಟು ಲೀಡ್ ಕೊಡಿಸಿದ್ದು ಬಿಟ್ಟರೆ ಅನಂತ್ ಪಾಲಿಗೆ ಆಪದ್ಬಾಂಧವನಾದವನು ಸೋಮಣ್ಣನೇ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಸೋಮಣ್ಣ ಗೋವಿಂದರಾಜ ನಗರದಿಂದ ಗೆದ್ದದ್ದು 24 ಸಾವಿರ ಮತಗಳ ಅಂತರದಿಂದ.


ಅಶೋಕ್

ಈಗ ಅದೇ ಗೋವಿಂದರಾಜನಗರದಿಂದ ಅನಂತ್ ಕುಮಾರ್‌ಗೆ ಒಂಭತ್ತು ಸಾವಿರದಷ್ಟು ಲೀಡು ಸಿಕ್ಕಿದೆ. ಅದರರ್ಥ 24 ಸಾವಿರದಷ್ಟು ಲೀಡಿದ್ದ ಕಾಂಗ್ರೆಸ್ ಮತಗಳನ್ನು ಕಳೆದದ್ದೂ ಅಲ್ಲದೇ ಅದರ ಮೇಲೆ ಒಂಭತ್ತು ಸಾವಿರದಷ್ಟು ಅಂದರೆ ಗೋವಿಂದರಾಜನಗರವೊಂದರಿಂದಲೇ ಅನಂತ್ ಪಾಲಿಗೆ 35 ಸಾವಿರ ಮತಗಳ ಲೀಡ್ ಸಿಕ್ಕಂತಾಯ್ತು. ಇದಲ್ಲದೇ ಪಕ್ಕದ ವಿಜಯನಗರವನ್ನೂ ಕೂಡ ಸೋಮಣ್ಣನೇ ನಿಭಾಯಿಸಿ ಬಿಜೆಪಿಗೆ ಎರಡೂವರೆ ಸಾವಿರ ಲೀಡ್ ಕೊಡಿಸಿಕೊಟ್ಟದ್ದು ಅನಂತ್ ಪಾಲಿಗೆ ಮತ್ತೊಂದು ಆಸರೆಯಾಯ್ತು.


ಕಳೆದ ಚುನಾವಣೆಯಲ್ಲಿ 38 ಸಾವಿರದಷ್ಟು ಲೀಡ್ ಗಳಿಸಿದ್ದ ಕಾಂಗ್ರೆಸ್ಸಿನ ಲೇಔಟ್ ಕೃಷ್ಣಪ್ಪನವರ ತಾಕತ್ತನ್ನೂ ಮೀರಿ ಮತ್ತೆ ಎರಡೂವರೆ ಸಾವಿರದಷ್ಟು ಬಿಜೆಪಿಗೆ ಲೀಡ್ ತಂದಿದ್ದು ಕೂಡ ಸೋಮಣ್ಣನ ಹಿಕಮತ್ತಿಗೆ ಸಾಕ್ಷಿಯಂತಿತ್ತು. ಬಹುಶಃ ಸೋಮಣ್ಣ ಬಿಜೆಪಿಗೆ ಕಾಲಿಡದಿದ್ದರೆ ಕೃಷ್ಣಭೈರೇಗೌಡರು ಐವತ್ತು ಸಾವಿರ ಮತಗಳ ಅಂತರದಿಂದ ಗೆದ್ದು ಬಿಡುತ್ತಿದ್ದರು!


ಸೋಮಣ್ಣ

ಜಯನಗರದ ವಿಜಯ್‌ಕುಮಾರ್, ಚಿಕ್ಕಪೇಟೆಯ ಹೇಮಚಂದ್ರ, ಸಾಗರ್‌ರಂಥ ಬಿಜೆಪಿ ಶಾಸಕರಿದ್ದೂ ಈ ಎರಡು ಕ್ಷೇತ್ರಗಳಲ್ಲಿ ಅನಂತ್ ಲೀಡ್ ಗಳಿಸಲಾಗಲಿಲ್ಲ. ಬಿಟಿಎಂ ಲೇಔಟಿನ ಬಿಜೆಪಿ ಅಧಿಪತಿ ಪ್ರಸಾದ್ ರೆಡ್ಡಿಯಂತೂ ಪ್ರಚಾರಕ್ಕೇ ಬರಲಿಲ್ಲ. ಪದ್ಮನಾಭನಗರ ಮತ್ತು ಬೊಮ್ಮನಹಳ್ಳಿಯಲ್ಲಿ ಅಷ್ಟಿಷ್ಟು ಅಧಿಕ ಮತಗಳನ್ನು ಗಳಿಸಿದ್ದು ಬಿಟ್ಟರೆ ಅನಂತ್ ಗೆಲುವಿನಲ್ಲಿ ದೊಡ್ಡ ಪಾಲಿದ್ದದ್ದು ಸೋಮಣ್ಣನದ್ದೇ. ವಿಜಯನಗರದಲ್ಲಿ ಲೇಔಟ್ ಕೃಷ್ಣಪ್ಪ ಗಳಿಸಿದ್ದ 38 ಸಾವಿರ ಮತಗಳ ಲೀಡನ್ನೂ ಸರಿಗಟ್ಟಿದ್ದೂ ಅಲ್ಲದೇ ಮತ್ತೆ ಎರಡೂವರೆ ಸಾವಿರದಷ್ಟು ಲೀಡ್ ಕೊಡಿಸುವುದೆಂದರೆ ಸಣ್ಣ ಮಾತೆ?


ಸೋಮಣ್ಣನ ಬಿಜೆಪಿ ಭರಾಟೆಗೆ ಸಿಲುಕಿ ಒದೆ ತಿಂದ ಕಾಂಗ್ರೆಸ್ ಕಾರ್ಯಕರ್ತರು ಪೊಲೀಸ್ ಠಾಣೆಯೆದುರು ಧರಣಿ ಕೂತರು. ಆ ಮಟ್ಟಿಗೆ ಅನಂತ್ ಗೆಲುವಿಗೆ ಹೆಣಗಾಡಿದ ಸೋಮಣ್ಣನಿಗೆ ಬಿಜೆಪಿ ಕೊಟ್ಟ ಗೌರವವೇನು ಗೊತ್ತೆ?

ಮಂತ್ರಿಗಿರಿನೇ ಮೋಸ! 'ಸುಮ್ನೇ ನಾಮಕಾವಸ್ತೆಗೆ ಮಂತ್ರಿಯಾಗೋದಕ್ಕಿಂತ ಬಿಡಿಎ ಛೇರ್ಮನ್‌ಗಿರಿ ಕೊಟ್ಟುಬಿಡ್ತೀವಿ. ಬಿಡಿಎಗೆ ಬೆಂಗಳೂರು ಜಲಮಂಡಳಿ, ಬೆಸ್ಕಾಮ್ ಎಲ್ಲವನ್ನೂ ಸೇರಿಸಿ ಸೋಮಣ್ಣಂಗೆ ಸ್ವತಂತ್ರ ಪದವಿ ಕೊಟ್ಟು ಕ್ಯಾಬಿನೆಟ್ ರ‍್ಯಾಂಕನ್ನೂ ಕೊಡ್ತೀವಿ. ಇದೇ ಒಳ್ಳೇದಲ್ವಾ?'


ಕಟ್ಟಾ

ಇದು ಬಿಜೆಪಿಯ ಬೆಂಗಳೂರು ಅಧಿಪತಿಗಳಾದ ಕಟ್ಟಾನಾಯ್ಡು ಮತ್ತು ಅಶೋಕ್ ಕ್ಯಾತೆ. ಬಿಡಿಎ, ಜಲಮಂಡಳಿ, ಬೆಸ್ಕಾಂ ಇತ್ಯಾದಿಗಳನ್ನೆಲ್ಲ ಒಗ್ಗೂಡಿಸಿ ಛೇರ್ಮನ್‌ಗಿರಿ ಕೊಡೋ ಬದಲು ನಗರಾಭಿವೃದ್ಧಿ ಮಂತ್ರಿ ಅಂತಲೇ

▶▶▶


ಅಲ್ಲುಅರವಿಂದ್


...ದ ಗ್ರಾಮೀಣ ಮತದಾರರಲ್ಲಿ ಕಾಂಗ್ರೆಸ್ ಮತ್ತು ...ಆರ್ ಪರ ಸಹಾನುಭೂತಿಯನ್ನು ಇನ್ನೂ ...ತವಾಗಿಟ್ಟಿತ್ತು. ಕಾಂಗ್ರೆಸ್ ವಿರುದ್ಧ ಅಂಥ ವಿರೋಧಿ ...ರಲಿಲ್ಲ. ಚಂದ್ರಬಾಬು ನಾಯ್ಡು ಮತ್ತು ತೆಲಂಗಾಣ ...ಸಮಿತಿಗಿರುವಂಥ ತಳಮಟ್ಟದ ಕಾರ್ಯಕರ್ತರ ...ರ್ಕ್ ಕೂಡ ಚಿರಂಜೀವಿಗಿರಲಿಲ್ಲ. ಮುಖ್ಯವಾಗಿ ...ಾದ್ಯಂತ ಇಡೀ ರಣತಂತ್ರದಲ್ಲಿ ಹಳ್ಳಿಗಳಾಗಲಿ, ...ಗಲಿ ಮುಖ್ಯವಾಗಲಿಲ್ಲ. ತೆಲಂಗಾಣದ ಜನರ ... ಕುರಿತಂತೆ ಚಿರಂಜೀವಿಗೆ ಸ್ಪಷ್ಟ ನಿಲುವಿರಲಿಲ್ಲ. ... ಕಾರಣಕ್ಕೆ ಕಾಂಗ್ರೆಸ್ ಸರ್ಕಾರವನ್ನು ಜನ ...ಪಬೇಕೆಂಬುದಕ್ಕಾಗಲಿ, ತೆಲುಗುದೇಶಂಗಿಂತ ತಾನು ...ಹೆಚ್ಚು ಜನಪರ ಎಂಬುದಕ್ಕಾಗಲಿ, ತೆಲಂಗಾಣ ...ಮಿತಿಗೆ ಪರ್ಯಾಯವಾಗಿ ತನ್ನಲ್ಲಿ ಏನು ಪರಿಹಾರವಿದೆ ...ಗಲಿ; ಚಿರಂಜೀವಿಯ ಬಳಿ ಉತ್ತರವಿರಲಿಲ್ಲ.

...ವಲ ತನ್ನ ಗ್ಲಾಮರ್ ಮತ್ತು ಸ್ಟಾರ್ ವ್ಯಾಲ್ಯೂ ... ಕಾರಣಕ್ಕೆ ಥೇಟು ಎನ್‌ಟಿಆರ್‌ನಂತೆ ಜನ ತನ್ನನ್ನು ...ಮಂತ್ರಿ ಮಾಡುತ್ತಾರೆ ಎಂಬ ಭ್ರಮೆಗೆ ಬಿದ್ದ. ...ಟಿಆರ್ ಕಾಲವೇ ಬೇರೆ, ಚಿರಂಜೀವಿ ಕಾಲದ ...ಗಳೇ ಬೇರೆಯಾಗಿತ್ತು. ತನ್ನ ಅಭಿಮಾನಿ ...ಳನ್ನಾದರೂ ಸಮರ್ಥವಾಗಿ ಬಳಸಿಕೊಂಡಿದ್ದರೆ, ...ತಿ ಕೊಟ್ಟಿದ್ದರೆ ಒಂದಷ್ಟು ಓಟುಗಳನ್ನಾದರೂ ...ಬಹುದಿತ್ತು. ಆದರೆ ಚಿರು ಗಿಮ್ಮಿಕ್ಕಿಗೆ ಬಿದ್ದ. ...ರನನ್ನು ನಂಬಿದ್ದ. ಮೀಡಿಯಾಗಳು ಕೊಟ್ಟ ...ವನ್ನೇ ತನ್ನ ಪರ ಅಲೆ ಎಂದು ನಂಬಿದ. ವಾಸ್ತವ ...ಪರಿಸ್ಥಿತಿಗಳಿಗೂ ಚಿರಂಜೀವಿಯ ಲೆಕ್ಕಾಚಾರಕ್ಕೂ ...ಹೊಂದಲೇ ಇಲ್ಲ. ಕಾಪುಗಳೇ ಪ್ರಬಲರಾಗಿದ್ದ ... ಜಿಲ್ಲೆಗಳಿಂದ ಪ್ರಜಾರಾಜ್ಯಂಗೆ ದಕ್ಕಿದ್ದು ಕೇವಲ ...ಸ್ಥಾನಗಳು ಮಾತ್ರವೆಂದರೆ ಅದು ಚಿರಂಜೀವಿಯ ...ವಲ್ಲದೇ ಮತ್ತೇನು?

...ಗೇ ನೋಡಿದರೆ ಎನ್‌ಟಿಆರ್ ಕಾಲಕ್ಕಿದ್ದ ...ಯ ಅನಿವಾರ್ಯತೆ ಅಥವಾ **political** ...**um** ಚಿರಂಜೀವಿಯ ಕಾಲಕ್ಕಿರಲೇ ಇಲ್ಲ. ...ಬಾಬು ನಾಯ್ಡು, ರಾಜಶೇಖರ ರೆಡ್ಡಿಗೆ ಹೋಲಿಸಿದರೆ ...ಚಿರಂಜೀವಿ ಸಭ್ಯ ಮತ್ತು ಭ್ರಷ್ಟನಲ್ಲ. ಕಳಂಕಿತನಾಗಲಿ, ...ಾಗಲಿ ಅಲ್ಲ. ಕೊರತೆಯಿದ್ದದ್ದು ದೂರದೃಷ್ಟಿಯಲ್ಲಿ. ... ಸ್ಟಾರ್‌ಗಿರಿಗೂ ರಾಜಕೀಯಕ್ಕೂ ವ್ಯತ್ಯಾಸವಿದೆ. ...ಅರಿಯದೇ ಸಿನಿಮೀಯ ಶೈಲಿಯಲ್ಲಿ ಪಕ್ಷ ಕಟ್ಟಿ ...ಯವಾಗಿಯೇ ಪ್ರಚಾರಕ್ಕಿಳಿದ ಚಿರಂಜೀವಿಯದು ...ಖುವಾಗಿ ತಪ್ಪು ಲೆಕ್ಕಾಚಾರವಾಗಿತ್ತು.

...ಗಲೂ ಕಾಲು ಮಿಂಚಿಲ್ಲ. ಚಿರಂಜೀವಿಗೆ ವಾಸ್ತವದ ...ಗಬೇಕಿದೆ. ತನ್ನ ತಪ್ಪುಗಳನ್ನು ತಿದ್ದುಕೊಂಡು ...ಟ್ಟದ ರಾಜಕಾರಣಕ್ಕಿಳಿದದ್ದೇ ಆದರೆ ಇವತ್ತಲ್ಲ ...ವಕಾಶವಿದ್ದೇ ಇದೆ.

● ರಾ. ಸೋಮನಾಥ್


ಅನಂತು


ಮಾಡಬಹುದಲ್ವಾ? ಈ ಎಲ್ಲವೂ ನಗರಾಭಿವೃದ್ಧಿ ಇಲಾಖೆಗೆ ತಾನೇ ಒಳಪಡೋದು? ಜವಾಬ್ದಾರಿ ಮಾತ್ರ ಮಂತ್ರಿಯದು ಹೆಸರಿಗೇಕೆ ಛೇರ್ಮನ್‌ಗಿರಿ? ಕೊಡೋದಾದ್ರೆ ಮಂತ್ರಿಗಿರಿನೇ ಕೊಡಿ. ಪುಡಕೋಶಿ ಬೋರ್ಡ್ ...ನ್‌ಗಿರಿಗೋಸ್ಕರ ನಾನು ಬಿಜೆಪಿಗೆ ...ತ್ತಾ? ಬೆಂಗಳೂರಲ್ಲಿ ಅನಂತ್‌ಕುಮಾರ್ ...ನಿ. ತುಮಕೂರಲ್ಲಿ ಬಸವರಾಜುನ್ನ ಬಿಜೆಪಿಗೆ ... ಅಲ್ಲದೇ ನಾನೇ ಗೆಲ್ಲಿಸಿಕೊಟ್ಟಿದ್ದೀನಿ. ...ಜನಗರಕ್ಕೂ ಹೋಗಿ ಬಿಜೆಪಿಗಾಗಿ ಬೆವರು ...ನಿ. ಈಗ ನೋಡಿದ್ರೆ ಮಂತ್ರಿ ಮಾಡೋ ... ಛೇರ್ಮನ್‌ಗಿರಿ ಅಂತೀರಲ್ಲಾ...

...ನ್ಯಾಯನಾ? ಎನ್ನುತ್ತಿದ್ದಾನೆ ಸೋಮಣ್ಣ. ...ಮಣ್ಣ ಮಂತ್ರಿಯಾದಕ್ಷಣ ತಮ್ಮ ಅಸ್ತಿತ್ವಕ್ಕೇ ... ಅಶೋಕ್ ಮತ್ತು ಕಟ್ಟಾ ...ಗಬ್ಬಾದರೂ ಏಕೆ?

...ಪ್ರತಕ ಸೋಮಣ್ಣ ಗೆದ್ದ ನಂತರ ...? ಇದೇನಾ ಬಿಜೆಪಿ ಬುದ್ಧಿ?

● ರಾ.ಸೋ.

ಅಂಬರೀಶ್ ವಿರುದ್ಧ ಈಗ ಜನರೇ ರೆಬೆಲ್?



ಅಂಬಿ

ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಶ್ರೀರಂಗಪಟ್ಟಣದ ಮತದಾರರು ಅಂಬರೀಶರನ್ನು ಸೋಲಿಸಿದಾಗ "ನಾನು ದೆಹಲಿಗೇ ಹೋಗಬೇಕು ಎಂಬುದು ಮತದಾರರ ಒಲವು ಇರಬೇಕು" ಎಂದು ಅಂಬಿ ತಮ್ಮ ಸೋಲನ್ನು ವ್ಯಾಖ್ಯಾನಿಸಿದ್ದರು. ಆ ಕಾರಣಕ್ಕಾಗಿಯೇ ಅವರು ಮಂಡ್ಯ ಲೋಕಸಭಾ ಕ್ಷೇತ್ರದಿಂದ ಮೊನ್ನೆ ಸ್ಪರ್ಧಿಸಿದ್ದರು. ಆದರೆ ದುರದೃಷ್ಟವಶಾತ್ ಅಲ್ಲಿಯೂ ಅಂಬಿ ಸೋಲನ್ನು ಕಂಡಿದ್ದಾರೆ.

ಇವೆರಡೂ ಚುನಾವಣಾ ಸೋಲುಗಳಿಗಿಂತ ಮುನ್ನ ಕನ್ನಡ ಸಿನಿಮಾಗಳ ಪ್ರೇಕ್ಷಕ ಮಹಾಪ್ರಭು ಎಂದೋ ಅಂಬಿ ಸಿನಿಮಾಗಳ ವಿರುದ್ಧ ಮತ ಹಾಕಿದ್ದಾಗಿದೆ. ಆದರೀಗ ಆ ಗಾಯದ ಮೇಲೆ ಬರೆ ಎಳೆದಿದ್ದಾರೆ. ಈಗ ಅಂಬಿ ಸಿನಿಮಾರಂಗದಲ್ಲೂ ಬೇಡ, ರಾಜ್ಯ ರಾಜಕೀಯದಲ್ಲೂ ಬೇಡ, ರಾಷ್ಟ್ರ ರಾಜಕೀಯದಲ್ಲೂ ಬೇಡ ಎಂಬ ತೀರ್ಮಾನಕ್ಕೆ ಜನತೆ ಬಂದಿರುವುದನ್ನು ನೋಡಿ ಅಂಬರೀಶ್ ದಿಕ್ಕುತೋಚದವರಂತಾಗಿದ್ದಾರೆ.


ಅಲ್ಲೂ ಬೇಡ, ಇಲ್ಲೂ ಬೇಡ, ಎಲ್ಲೆಲ್ಲೂ ಬೇಡ ಎಂಬ ವಿಚಿತ್ರವಾದ ವರ್ತುಲದಲ್ಲಿ ಸಿಲುಕಿಕೊಂಡಿರುವ ಈ ಮಂಡ್ಯದ ಗಂಡು ಸದ್ಯಕ್ಕೆ ಮಲೇಶಿಯಾದಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ.

ಬೆಂಗಳೂರು: 'ಕೈ' ಕೊಟ್ಟ ಕಾಂಗ್ರೆಸ್


ಷರೀಫ್


ತೇಜಸ್ವಿನಿ


ಕೃಷ್ಣಭೈರೇಗೌಡ


ಸಾಂಗ್ಲಿಯಾನ

ಬೆಂಗಳೂರಿನ ದಕ್ಷಿಣ, ಕೇಂದ್ರ ಮತ್ತು ಗ್ರಾಮಾಂತರ ಮತಕ್ಷೇತ್ರಗಳನ್ನು ತನ್ನ ಬಗಲಿಗೆ ಹಾಕಿಕೊಳ್ಳುವ ಅಪೂರ್ವ ಅವಕಾಶವನ್ನು ಕಾಂಗ್ರೆ ತನ್ನ ತಪ್ಪು ಲೆಕ್ಕಾಚಾರ ಮತ್ತು ಅಹಂಕಾರದಿಂದಾಗಿ ಕಳೆದುಕೊಂಡಿದೆ.

"ಬೆಂಗಳೂರು ಸೆಂಟ್ರಲ್‌ನಲ್ಲಿ ಮುಸ್ಲಿಮರು ಅತ್ಯಧಿಕ ಸಂಖ್ಯೆಯಲ್ಲಿರುವುದರಿಂದ ಆ ಕ್ಷೇತ್ರವನ್ನು ನನಗೆ ಬಿಟ್ಟು ಕೊಡಿ" ಎಂದು ಕೇಂದ್ರದ ಮಾಜಿ ರೈಲ್ವೇ ಸಚಿವ ಜಾಫರ್ ಷರೀಫ್ ಕಾಂಗ್ರೆ ಹೈಕಮಾಂಡ್‌ಗೆ ದುಂಬಾಲು ಬಿದ್ದಿದ್ದರು. ಆದರೆ "ಬೆಂಗಳೂರು ಸೆಂಟ್ರಲ್ ನನಗೇ ಬೇಕು" ಎಂದು ಮಾಜಿ ಪೊಲೀಸ್ ಕಮೀಷನರ್ ಎಸ್.ಪಿ. ಸಾಂಗ್ಲಿಯಾನ ಪಟ್ಟು ಹಿಡಿದಿದ್ದರಿಂದ ಕಾಂಗ್ರೆ ಹೈಕಮಾಂಡ್ ಪೊಲೀಸ್ ಪೇದೆಯಂತೆ ಕಾಣುವ ಈ ಆಸಾಮಿಗೇ ಟಿಕೆಟ್ ನೀಡಿತ್ತು.

ಅದಕ್ಕೆ ಕಾರಣವೂ ಇತ್ತು. ಅಮೆರಿಕದೊಂದಿಗಿನ ಅಣು ಒಪ್ಪಂದಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಅವಿಶ್ವಾಸ ನಿರ್ಣಯವನ್ನು ಎದುರಿಸುತ್ತಿದ್ದಾಗ ಸಾಂಗ್ಲಿಯಾನ ತಮ್ಮ ಬಿಜೆಪಿಯನ್ನು ತೊರೆದು ಕಾಂಗ್ರೆ ಪರ ಮತ ಚಲಾಯಿಸಿದ್ದು. ಆ ಋಣಕ್ಕೆ ಬಿದ್ದ ಕಾಂಗ್ರೆಸ್ ಷರೀಫರನ್ನು ತಿರಸ್ಕರಿಸಿ ಸಾಂಗ್ಲಿಯಾನರಿಗೆ ಮಣೆ ಹಾಕಿತ್ತು.

ಈ ಸಾಂಗ್ಲಿಯಾನ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ. ಅವರು ಹೋದಲೆಲ್ಲಾ "ನೀವೂ ನನಗೆ ಓಟು ಕೊಟ್ಟು ಗೆಲ್ಲಿಸಿ. ಒಂದು ವೇಳೆ ನಾನು ಗೆಲ್ಲದಿದ್ದರೆ ಈಶಾನ್ಯ ಭಾರತದ ಯಾವುದಾದರೂ ರಾಜ್ಯಕ್ಕೆ ಮೇಡಂ ನನ್ನನ್ನು ಗವರ್ನರ್ ಮಾಡುತ್ತಾರೆ" ಎಂದೇ ಭಾಷಣ ಮಾಡುತ್ತಿದ್ದರು. ಅವರ ಆಸೆಯಂತೆ ಅವರು ಈಗ ಸೋತು ಯಾವುದೋ ಈಶಾನ್ಯ ರಾಜ್ಯದ ರಾಜ್ಯಪಾಲರಾಗಿ ಹೋಗಬಹುದು.

ಆದರೆ ಇವರ ಸ್ಪರ್ಧೆಯಿಂದಾಗಿ ಈ ಕ್ಷೇತ್ರದ ಮುಸ್ಲಿಮರು ಜೆಡಿಎಸ್‌ನ ಜಮೀರ್‌ರನ್ನು ಬೆಂಬಲಿಸಿದರೆ, ಅಲ್ಲಿನ ಕ್ರಿಶ್ಚಿಯನ್ನರು ಮತ್ತು ಅಪ್ಪಟ ಕಾಂಗ್ರೆಸ್ ಬೆಂಬಲಿಗರು ಮಾತ್ರ ಸಾಂಗ್ಲಿಯಾನ ಪರ ಮತಚಲಾಯಿಸಿದರು. ಇವರಿಬ್ಬರು ಜಾತ್ಯತೀತರ ಮತ್ತು ಅಲ್ಪಸಂಖ್ಯಾತರ ಮತಗಳನ್ನು ಹಂಚಿಕೊಂಡಿದ್ದರಿಂದ ಬಿಜೆಪಿಯ ಪಿ.ಸಿ. ಮೋಹನ್ ಸುಲಭವಾಗಿ ಗೆದ್ದುಬಂದರು.

ಅಕಸ್ಮಾತ್ ಇಲ್ಲಿಯ ಟಿಕೆಟ್‌ಅನ್ನು ಜಾಫರ್ ಷರೀಫರಿಗೆ ನೀಡಿದ್ದರೆ ಜನತಾದಳದಿಂದ ಜಮೀರ್ ಸ್ಪರ್ಧಿಸುತ್ತಿರಲಿಲ್ಲ, ಮತಗಳು ಒಡೆದುಹೋಗುತ್ತಿರಲಿಲ್ಲ, ಷರೀಫರ ಗೆಲುವನ್ನು ಯಾರಿಂದಲೂ ತಡೆಯಲಾಗುತ್ತಿರಲಿಲ್ಲ. ಆದರೆ ಅದೆಲ್ಲ ಕಾಂಗ್ರೆಸ್‌ಗೆ ಗೊತ್ತಾಗಲಿಲ್ಲ.

ಇನ್ನು ಬೆಂಗಳೂರು ದಕ್ಷಿಣದಲ್ಲಿ ಬಿಜೆಪಿಯ ಅನಂತ ಕುಮಾರ್ ವಿರುದ್ಧ ಕಾಂಗ್ರೆಸ್‌ನ ಯುವನಾಯಕ ಕೃಷ್ಣ ಭೈರೇಗೌಡ ತೀವ್ರ ಪೈಪೋಟಿ ನೀಡಿದರಾದರೂ ಅವರ ಬದಲಿಗೆ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರನ್ನು ಸ್ಪರ್ಧೆಗೆ ಇಳಿಸಿದ್ದರೆ ಪರಿಣಾಮ ಬೇರೆಯದೇ ಆಗಿರುತ್ತಿತ್ತು ಎಂದು ಕೆಲವರು ತರ್ಕಿಸುತ್ತಿದ್ದಾರೆ.

ಆದರೆ **2004**ರಲ್ಲಿ ತಮ್ಮ ತವರೂರಾದ ಮಂಡ್ಯದಿಂದ ಸ್ಪರ್ಧಿಸಲು ಹೆದರಿ ಚಾಮರಾಜಪೇಟೆಗೆ ಓಡಿಬಂದಿದ್ದ, ಇತ್ತೀಚೆಗೆ ಮದ್ದೂರಿನಲ್ಲಿ ನಡೆದ ಉಪಚುನಾವಣೆಯಲ್ಲಿ ತಮ್ಮ ಸಹೋದರನ ಪುತ್ರನನ್ನು ಗೆಲ್ಲಿಸುವಲ್ಲಿಯೂ ವಿಫಲರಾದ ಕೃಷ್ಣರಿಗೆ ಬೆಂಗಳೂರು ದಕ್ಷಿಣದಿಂದ ಸ್ಪರ್ಧಿಸುವ ಧೈರ್ಯವಿರಲಿಲ್ಲ. ಆ ಕಾರಣಕ್ಕಾಗಿ ಅವರು "ನಾನು ನಿಂತರೆ ರಾಜ್ಯ ಸಭೆಯಲ್ಲಿ ಕಾಂಗ್ರೆಸ್ ಸಂಖ್ಯೆ ಕಡಿಮೆಯಾಗುತ್ತದೆ" ಎಂದೆಲ್ಲ ವಾದಗಳನ್ನು ಮಂಡಿಸಿ ಚುನಾವಣಾ ಕಣದಿಂದಲೇ ಪರಾರಿಯಾದರು.

2004ರಲ್ಲಿ ಅನಂತಕುಮಾರ್ ಕಾಂಗ್ರೆಸ್ಸಿನ ಲೇಟೆಸ್ಟ್ ಕೃಷ್ಣಪ್ಪನವರನ್ನು **62,000** ಮತಗಳಿಂದ ಸೋಲಿಸಿದ್ದರು. ಆ ಅಂತರವನ್ನು ಈ ಬಾರಿ ಕೃಷ್ಣಭೈರೇಗೌಡರು **37,000**ಕ್ಕೆ ಕರಗಿಸಿದ್ದಾರೆ. ಅದು ಸಾಮಾನ್ಯ ಸಾಧನೆಯಲ್ಲ. ಅಕಸ್ಮಾತ್ ಕಾಂಗ್ರೆಸ್ ಪಕ್ಷವು ಮೊದಲೇ ಕೃಷ್ಣಭೈರೇಗೌಡರೇ ತನ್ನ ಬೆಂಗಳೂರು ದಕ್ಷಿಣದ ಅಭ್ಯರ್ಥಿ ಎಂದು ಘೋಷಿಸಿದ್ದರೆ ಮತ್ತು ಸ್ಥಳೀಯ ನಾಯಕರು ಅವರೊಂದಿಗೆ ಸರಿಯಾಗಿ ಕೈಜೋಡಿಸುವಂತೆ ಮಾಡಿದ್ದರೆ ಅವರು ಸೋಲುತ್ತಿರಲಿಲ್ಲ. ಆದರೆ ಕಡೇ ಕ್ಷಣದ ತೀರ್ಮಾನದಿಂದ ಈ ಕ್ಷೇತ್ರವೂ ಕಾಂಗ್ರೆಸ್ ಕೈಬಿಡುವಂತಾಯಿತು.


ಮತಪೆಟ್ಟಿಗೆ

ಬೆಂಗಳೂರು ಗ್ರಾಮಾಂತರದಲ್ಲೂ ತನ್ನ ಅಭ್ಯರ್ಥಿಯ ಆಯ್ಕೆಯಲ್ಲಿ ಕಾಂಗ್ರೆಸ್ ಎಡವಿತು. ಕೂಗುಮಾರಿ ಎಂದೇ (ಕು)ಖ್ಯಾತಿ ಗಳಿಸಿರುವ ತೇಜಸ್ವಿನಿ ಗೌಡ ಅವರಿಗೆ ಟಿಕೆಟ್ ಕೊಡುವುದು ಬೇಡ ಎಂದು ರಾಜ್ಯ ಕಾಂಗ್ರೆ ಕಾರ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್ ಸ್ಪಷ್ಟವಾಗಿ ಹೇಳಿದ್ದರು. ಆದರೆ ಹೈಕಮಾಂಡ್ ಮಾತ್ರ ಡಿ.ಕೆ.ಯ ಮಾತನ್ನು ಬದಿಗಿರಿಸಿ ತೇಜಸ್ವಿನಿಗೆ ಟಿಕೆಟ್ ನೀಡಿತು. ಕಳೆದ ಬಾರಿ ದೇವೇಗೌಡರನ್ನು ಸೋಲಿಸಿದ ತೇಜಮ್ಮ ಈ ಬಾರಿ ಅವರ ಪುತ್ರ ಕುಮಾರಸ್ವಾಮಿಯವರಿಂದ ಭಾರೀ ಮುಖಭಂಗ ಅನುಭವಿಸಿದ್ದಾರೆ.

ಈ ಕ್ಷೇತ್ರದಿಂದ ಡಿ.ಕೆ.ಶಿವಕುಮಾರ್ ಅಥವಾ ಅವರ ಸಹೋದರ ಡಿ.ಕೆ.ಸುರೇಶ್ ಸ್ಪರ್ಧಿಸಿದ್ದರೆ ಖಂಡಿತವಾಗಿಯೂ ಸ್ಪರ್ಧೆ ಮತ್ತು ಫಲಿತಾಂಶ ಬೇರೆಯದೇ ಆಗಿರುತ್ತಿತ್ತು.

ಹೀಗಾಗಿ ಬೆಂಗಳೂರಿನ ನಾಲ್ಕು ಲೋಕಸಭಾ ಕ್ಷೇತ್ರಗಳ ಸೋಲಿಗೆ ಹೈ ಕಮಾಂಡ್ ಕಾರಣವೇ ವಿನಹ ಬೆಂಗಳೂರಿನ ಪ್ರಬುದ್ಧ ಮತದಾರರು ಅಲ್ಲವೇ ಅಲ್ಲ. ■

19ಕ್ಕೆ ಬೀದರ್ ಯಾಕೆ ಸೇರಿಲ್ಲ?




"ಕರ್ನಾಟಕದಲ್ಲಿ ಬಿಜೆಪಿ 19 ಸ್ಥಾನಗಳನ್ನು ಗೆದ್ದಿರುವುದು ರಾಜ್ಯದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಆಡಳಿತ ವೈಖರಿಗೆ ನೀಡಿದ ತೀರ್ಪು" ಎಂದು ಯಡ್ಡಿ ಹಿಂಬಾಲಕರು ಈಗ ಸಿಕ್ಕಾಪಟ್ಟೆ ಕೊಚ್ಚಿಕೊಳ್ಳುತ್ತಿದ್ದಾರೆ. ಆದರೆ ಫಲಿತಾಂಶಗಳು ಹೊರಬೀಳುವ ಮುನ್ನ ಒಂದು ವೇಳೆ ಹದಿನೆಂಟಕ್ಕೂ ಕಡಿಮೆ ಸ್ಥಾನ ಬಂದರೆ ಎಂಬ ಭಯದಿಂದ ಇದೇ ಜನ ಏನೆಂದು ಹೇಳುತ್ತಿದ್ದರು ಗೊತ್ತೆ? "ಲೋಕಸಭಾ ಚುನಾವಣೆಗೂ ಯಡಿಯೂರಪ್ಪನವರ ಆಡಳಿತಕ್ಕೂ ಯಾವುದೇ ಸಂಬಂಧ ಇಲ್ಲ" ಎಂದು!

ಈಗ "19 ಸೀಟು ಯಡ್ಡಿಯ ಆಡಳಿತಕ್ಕೆ" ಎಂದು ಹೇಳುತ್ತಿರುವ ಯಡ್ಡಿಯ ಹಿಂಬಾಲಕರನ್ನು "ಹಾಗಾದರೆ ಬೀದರ್ ಅಸೆಂಬ್ಲಿ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಸೂರ್ಯಕಾಂತ್ ನಾಗಮಾರಪಲ್ಲಿ ಸೋತು ಕಾಂಗ್ರೆಸ ಕರೀಂಖಾನ್ ಗೆಲ್ಲಲು ಸಾಧ್ಯವಾಗಿದ್ದು ಹೇಗೆ?" ಎಂದು ಪ್ರಶ್ನಿಸಿ ನೋಡಿ. ಆ ಪ್ರಶ್ನೆಗೆ ಉತ್ತರವಿಲ್ಲದೆ ಅವರೆಲ್ಲ ಬಾಯಿಮುಚ್ಚಿಕೊಳ್ಳುತ್ತಾರೆ.

ಸದ್ಯ ಬಿಜೆಪಿಯವರ ಆರ್ಭಟ, ಹಾರಾಟ, ಚೀರಾಟಗಳನ್ನು ತಡೆಯಬೇಕೆಂದರೆ ಬೀದರ್ ಬಗ್ಗೆ ಪ್ರಸ್ತಾಪ ಮಾಡಿದರೆ ಸಾಕು!

ಕ'ಮಲ'ದ ವೈಫಲ್ಯ




ಸಿ.ಎಂ.ಉದಾಸಿ

"ಆಪರೇಷನ್ ಕಮಲ ಯಶಸ್ವಿಯಾಗಿದೆ" ಎಂದು ಚೆಡ್ಡಿಗಳು ಈಗ ಕೊಚ್ಚಿಕೊಳ್ಳುತ್ತಿದ್ದಾರೆ.

ಆದರೆ ವಾಸ್ತವ ಪರಿಸ್ಥಿತಿಯೇ ಬೇರೆಯದ್ದಾಗಿದೆ.

ಬೆಂಗಳೂರು ಗ್ರಾಮಾಂತರ ಮತ್ತು ಬೀದರ್ ಲೋಕಸಭಾ ಕ್ಷೇತ್ರಗಳಿಂದ ಸ್ಪರ್ಧಿಸಲು ಬಿಜೆಪಿಗೆ ಅಭ್ಯರ್ಥಿಗಳೇ ಇಲ್ಲದಾದಾಗ ಶಾಸಕರಾದ ಯೋಗೇಶ್ವರ್ ಮತ್ತು ಗುರುಪಾದಪ್ಪ ನಾಗಮಾರಪಲ್ಲಿ ತಮ್ಮ ಶಾಸಕ ಸ್ಥಾನಗಳಿಗೆ ರಾಜೀನಾಮೆ ನೀಡಿ 'ಚೆಡ್ಡಿ' ತೊಟ್ಟುಕೊಂಡರು. ಈಗ ಇವರಿಬ್ಬರೂ ಲೋಕಸಭಾ ಅಭ್ಯರ್ಥಿಗಳಾಗಿ ಸ್ಪರ್ಧಿಸಿ ಸೋಲನ್ನು ಕಂಡಿದ್ದಾರೆ. ಅಂದರೆ ಮತದಾರರು ಆಪರೇಷನ್ ಕಮಲದ ವಿರುದ್ಧ ತೀರ್ಪು ನೀಡಿದ್ದಾರೆಂದಾಯಿತಲ್ಲವೇ?

ಡಿ.ಬಿ.ಚಂದ್ರೇಗೌಡ, ರಮೇಶ್ ಕತ್ತಿ ಮತ್ತು ಶಿವಕುಮಾರ್ ಉದಾಸಿ ಗೆಲುವು ಸಾಧಿಸಿದ್ದಾರೆ ಎಂದು ಚೆಡ್ಡಿಗಳು ವಾದಿಸಬಹುದು. ಆದರೆ ಚಂದ್ರೇಗೌಡ ತಮ್ಮ ಸ್ವಜಾತಿ ಒಕ್ಕಲಿಗರ ಮತ್ತು ಚೆಡ್ಡಿಗಳ ಬೆಂಬಲದಿಂದ ಗೆದ್ದಿದ್ದರೆ, ರಮೇಶ್ ಕತ್ತಿ ತನ್ನ ಸಹೋದರ ಉಮೇಶ್ ಕತ್ತಿಯ ನೆರವಿನಿಂದಲೂ, ಶಿವಕುಮಾರ್ ಉದಾಸಿ ತನ್ನ ತಂದೆ ಸಚಿವ ಸಿ.ಎಂ.ಉದಾಸಿಯ ಕೃಪಾಕಟಾಕ್ಷದಿಂದ ಗೆದ್ದವರಾಗಿದ್ದಾರೆ.

ಆದ್ದರಿಂದ ಯಡ್ಡಿಯ ಆಪರೇಷನ್ ಕಮಲ ಲೋಕಸಭಾ ಚುನಾವಣೆಯಲ್ಲಿ ವಿಫಲಗೊಂಡಿದೆ ಎಂದೇ ತೀರ್ಮಾನಿಸಬಹುದು. ಇದೆಲ್ಲಕ್ಕಿಂತ ಬೀದರ್‌ನಲ್ಲಿ ಅಸೆಂಬ್ಲಿ ಮತ್ತು ಲೋಕಸಭಾ ಚುನಾವಣೆಯಲ್ಲಿ ನಾಗಮಾರಪಲ್ಲಿ ಎಂಬ ದುಷ್ಟ ಅಪ್ಪ-ಮಗ ಇಬ್ಬರನ್ನೂ ಮತದಾರರು ಮನೆಗೆ ಕಳಿಸಿದ ಒಂದೇ ಒಂದು ಉದಾಹರಣೆ ಯಡ್ಡಿಯ ಆಪರೇಷನ್ ಕ'ಮಲ'ದ ವೈಫಲ್ಯಕ್ಕೆ ಸಾಕ್ಷಿಯಲ್ಲವೇ?


ಶೋಭಾ

ಕರಂದ್ಲಾಜೆಗೆ ಗೇಟ್‌ಪಾಸ್?

ಪಟ್ಟದ ರಾಣಿ ಭಾರತಿ ಶೆಟ್ಟಿ


ಭಾರತಿಶೆಟ್ಟಿ


ಸದ್ಯ ಬಿಜೆಪಿ ಮಹಿಳಾ ಮೋರ್ಛಾದ ರಾಜ್ಯಾಧ್ಯಕ್ಷೆ. ಮೂಲತಃ ಸೊರಬದ ಬಿಜೆಪಿ ಕಾರ್ಯಕರ್ತೆಯಾದರೂ ಇತ್ತೀಚೆಗೆ ಯಡ್ಡಿ ಬಳಗದಲ್ಲಿ ಶೋಭಾ ಕರಂದ್ಲಾಜೆಗೆ ಪರ್ಯಾಯವಾಗಿ ಬೆಳೆಯುತ್ತಿರುವಾಕೆ ಭಾರತಿ ಶೆಟ್ಟಿ. ಕರಂದ್ಲಾಜೆಗೊಬ್ಬಳು ಪ್ರತಿಸ್ಪರ್ಧಿಯಂತೂ ಬಿಜೆಪಿಯಲ್ಲಿ ತಲೆ ಎತ್ತಿದ್ದಾಳೆ. ಕನ್ನಡ ಜನತೆ ಅಪ್ಪ ಮಕ್ಕಳ ದರ್ಬಾರಿನ ಜೊತೆ ಈ 'ಜಡೆ'ಗಳ ಮತ್ಸರವನ್ನೂ ನೋಡಬೇಕಾಯಿತಲ್ಲ; ಎಂಥಾ ಕರ್ಮವಲ್ಲವೆ?

ಯಾರ್ರೀ ಅವ್ಳು ಭಾರತಿ ಶೆಟ್ಟಿ? ಈ ಯಡಿಯೂರಪ್ಪ ಕಷ್ಟಕಾಲದಲ್ಲಿದ್ದಾಗ ಸಪೋರ್ಟ್ ಕೊಟ್ಟವನು ನಾನು. ಈಗ ಅಧಿಕಾರ ಇದೆ ಅಂತ ದೌಲತ್ತು ಮಾಡಿದ್ರೆ ನಾನು ಕೈಕಟ್ಟಿಕೊಂಡು ಕೂರ್‍ತೀನಾ? ನನ್ನತ್ರ ಹದಿನೈದು ಮಂದಿ ಎಮ್ಮೆಲ್ಲೆಗಳಿದ್ದಾರೆ. ಒಂದು ಕೈ ನೋಡೇ ಬಿಡ್ತೀನಿ.....!

- ಇದು ನರ್ಸ್ ಜಯಲಕ್ಷ್ಮಿ ಕಾಮಕಾಂಡದ ರೂವಾರಿ ಹೊನ್ನಾಳಿ ಶಾಸಕ ರೇಣುಕಾಚಾರ್ಯನ ಕಟ್ಟಾರೋಪ. ತೀರ ಇತ್ತೀಚೆಗೆ ತನ್ನ ಪರಮಾಪ್ತ ಪತ್ರಕರ್ತರೊಬ್ಬರಿಗೆ ಫೋನ್ ಮಾಡಿ ಮೇಲ್ಕಂಡಂತೆ ಡೈಲಾಗು ಹೊಡೆದ ರೇಣುಕಾಚಾರ್ಯನೇ ಸದ್ಯ ಯಡ್ಡಿ ಪಾಲಿಗೆ ಸೆರಗಿನ ಕೆಂಡ.

ಒಂದೆಡೆ ಹತ್ತು ಮಂದಿ ಬಿಜೆಪಿ ಎಮ್ಮೆಲ್ಲೆಗಳನ್ನು ಸಾರಾಸಗಟಾಗಿ ಖರೀದಿ ಮಾಡಿ ಯಡ್ಡಿ ಸರ್ಕಾರವನ್ನು ಬುಡಮೇಲು ಮಾಡಲು ಬಳ್ಳಾರಿಯ ಅನಿಲ್ ಲಾಡ್ ಬಲೆ ಹೆಣೆಯುತ್ತಿದ್ದರೆ, ಮತ್ತೊಂದೆಡೆ ಯಡ್ಡಿಯ ಹಳೇ ಬಂಟನೇ ಅವರ ಬುಡಕ್ಕೆ ಕೊಳ್ಳಿ ಇಡುತ್ತಿದ್ದಾನೆ. ಲೋಕಸಭಾ ಫಲಿತಾಂಶದಲ್ಲಿ ಯಡ್ಡಿಯ ಏನೇ ತಾಕತ್ತು ಜಗಜ್ಜಾಹೀರಾದರೂ ಅಪಾಯ ಮತ್ತು ಆತಂಕ ಒಟ್ಟೊಟ್ಟಿಗೇ ವಕ್ಕರಿಸುತ್ತಿವೆ. ವಿಕಟವೆಂದರೆ; ಇದಕ್ಕೆ ದೊಡ್ಡಪಾಲು ಸಲ್ಲಿಸುತ್ತಿರುವವನು ಯಡ್ಡಿಯ ಹಳೇ ಬಂಟ ರೇಣುಕಾಚಾರ್ಯನೇ!

ರೇಣುಕಾಚಾರ್ಯನ ಕ್ಯಾತೆಗೂ ಕಾರಣವಿದೆ. ಅದು ಯಡ್ಡಿ ಮತ್ತು ಭಾರತಿ ಶೆಟ್ಟಿ ಎಂಬ ಧೀಮಂತ (!) ಮಹಿಳಾಮಣಿಯ ಬಂಧಾನುಬಂಧ. ವಿಜಯನಗರದ ಸ್ವಘೋಷಿತ ವೀರಪುತ್ರ ಸೋಮಣ್ಣ ಮತ್ತು ಹಳೇ ಬಿಜೆಪಿ ನಾಯಕ ಬಿ.ಬಿ. ಶಿವಪ್ಪನವರ ಜೊತೆ ಯಡ್ಡಿ ಸಂಪುಟ ಪುನರ್ರಚನೆಯ ಲಾಭ ಉಣ್ಣಲು ನಿಂತ ಮೂರನೆಯ ವಳೇ ಈ ಭಾರತಿ ಶೆಟ್ಟಿ.



ರಾಘು

ಈಕೆ ಸದ್ಯ ಬಿಜೆಪಿ ಮಹಿಳಾ ಮೋರ್ಛಾದ ರಾಜ್ಯಾಧ್ಯಕ್ಷೆ. ಮೂಲತಃ ಸೊರಬದ ಬಿಜೆಪಿ ಕಾರ್ಯಕರ್ತೆಯಾದರೂ ಇತ್ತೀಚೆಗೆ ಯಡ್ಡಿ ಬಳಗದಲ್ಲಿ ಶೋಭಾ ಕರಂದ್ಲಾಜೆಗೆ ಪರ್ಯಾಯವಾಗಿ ಬೆಳೆಯುತ್ತಿರುವಾಕೆ. ಸೊರಬದಲ್ಲೊಂದು ಪೆಟ್ರೋಲ್ ಬಂಕಿದೆ. ಗಂಡನ ಹೆಸರು ಸತೀಶ್ ಶೆಟ್ಟಿ. ಸಾಗರದಲ್ಲೊಂದು ಬಾರ್ ನಡೆಸುತ್ತಲೇ ಕುಡಿತಕ್ಕೆ ಬಿದ್ದು ದಿವಾಳಿಗೆಟ್ಟ ಸತೀಶ್ ಶೆಟ್ಟಿಯನ್ನು ಇತ್ತೀಚೆಗಂತೂ ಕಂಡವರಿಲ್ಲ. ಮೊದಮೊದಲು ಕರಂದ್ಲಾಜೆಗೆ ಪರಮಾಪ್ತೆಯಂತಿದ್ದ ಭಾರತಿಶೆಟ್ಟಿಯನ್ನು ಬಿಜೆಪಿಯ ಮಹಿಳಾ ಮೋರ್ಛಾದ ಅಧ್ಯಕ್ಷಗಾದಿಗೆ ತಂದು, ಎಮ್ಮೆಲ್ಸಿಯನ್ನಾಗಿಯೂ ಮಾಡಿದ್ದು ಕರಂದ್ಲಾಜೆಯೇ.

ಹಾಗೆ ಯಡ್ಡಿ ಅಂತಃಪುರಕ್ಕೆ ಆಪ್ತಳಾದ ಭಾರತಿಶೆಟ್ಟಿ ಕ್ರಮೇಣ ಕರಂದ್ಲಾಜೆಗೇ ಟಾಂಗ್ ಕೊಟ್ಟು ಪಟ್ಟದ ರಾಣಿ ಪದವಿಯನ್ನಾಕ್ರಮಿಸುತ್ತಾರೆಂಬ ನಿರೀಕ್ಷೆ ತಾನೇ ಯಾರಿಗಿತ್ತು?


ಸದ್ಯ ಯಡ್ಡಿಯ ಆಪ್ತವಲಯದಲ್ಲಿ ಹೊಗೆಯೆದ್ದ ಗುಲ್ಲೇನೆಂದರೆ ಯಡ್ಡಿಗೂ ಕರಂದ್ಲಾಜೆಗೂ ಈಗ ಅಷ್ಟಕ್ಕಷ್ಟೆ. ಯಡ್ಡಿಯ ಮುದ್ದಿನ ಮಗಳು ಅರುಣಾದೇವಿಗೂ ಕರಂದ್ಲಾಜೆಗೂ ಇತ್ತೀಚೆಗಷ್ಟೇ ದೊಡ್ಡಮಟ್ಟದ ಜಗಳವಾಗಿದೆ. ಶಿವಮೊಗ್ಗದ ಯಾವುದೇ ಉಸಾಬರಿಗೂ ಕರಂದ್ಲಾಜೆಯನ್ನು ಸೇರಿಸಕೂಡದೆಂದು ಮಕ್ಕಳೆಲ್ಲ ಸೇರಿ ಯಡ್ಡಿಯ ವಿರುದ್ಧ ಜಗಳಕ್ಕ ಬಿದ್ದಿದ್ದಾರೆ. ಇವತ್ತಲ್ಲ ನಾಳೆ ಕರಂದ್ಲಾಜೆ ಅಪ್ಪನ ಉತ್ತರಾಧಿಕಾರಿಯಾಗುತ್ತಾಳೆಂಬುದು ಯಡ್ಡಿ ಮಕ್ಕಳ ಆತಂಕ. ಅದಕ್ಕೆಂದೇ ಮಗ ರಾಘವೇಂದ್ರನನ್ನು ರಾಜಕೀಯಕ್ಕೆ ತಂದು ಶಿವಮೊಗ್ಗದ ಲೋಕಸಭಾ ಅಭ್ಯರ್ಥಿಯನ್ನಾಗಿಸಿದ್ದು ಮತ್ತು ಗೆಲ್ಲಿಸಿದ್ದು.

ರಾಘು ಗೆಲ್ಲಿಸುವಲ್ಲಿ ಯಡ್ಡಿಯಷ್ಟೇ ಬೆವರು ಹರಿಸಿದ್ದು ಮಗಳು ಅರುಣಾದೇವಿ. ಇಡೀ ಶಿವಮೊಗ್ಗದ ಚುನಾವಣಾ ಖರ್ಚಿನ ಹೊಣೆ ಹೊತ್ತು ಕೋಟಿ ಕೋಟಿಯ ಕಂತೆಗಳನ್ನೆಲ್ಲ ಮೊಗೆ ಮೊಗೆದು ಕೊಟ್ಟ ಅರುಣಾದೇವಿಗೆ ಬಲಗೈ ಬಂಟಿಯಂತಿದ್ದವಳೇ ಭಾರತಿ ಶೆಟ್ಟಿ. ಯಾವತ್ತು ರಾಘು ಶಿವಮೊಗ್ಗದ ಬಿಜೆಪಿ ಅಭ್ಯರ್ಥಿಯಾಗುತ್ತಾನೆಂಬುದು ಕರಂದ್ಲಾಜೆಗೆ ಗೊತ್ತಾಯಿತೋ ಆವತ್ತಿನಿಂದಲೇ ಕರಂದ್ಲಾಜೆಯ ಪಿತ್ಥ ನೆತ್ತಿಗೇರಿದೆ. ತನ್ನ ಪರಮಾಪ್ತ ಬಿಜೆಪಿ ನಾಯಕರಿಗೆಲ್ಲ ಫೋನ್ ಮಾಡಿ 'ಯಾವುದೇ ಕಾರಣಕ್ಕೂ ರಾಘು ಅಭ್ಯರ್ಥಿಯಾಗದಂತೆ ನೋಡಿಕೊಳ್ಳಿ' ಎಂದು ಕರಂದ್ಲಾಜೆಯೇ ಹಚ್ಚಿಕೊಟ್ಟ ಸುದ್ದಿಯೂ ಯಡ್ಡಿಯ ಕಿವಿ ಮುಟ್ಟಿದೆ.


ಯಡ್ಡಿ

ಬಿಜೆಪಿ ಕೂಡ ಅಪ್ಪ ಮಕ್ಕಳ ಪಕ್ಷವಾಗೋದು ಬೇಡ ಎಂದು ಕ್ಯಾತೆ ತೆಗೆದ ಕೆಲ ಆರೆಸ್ಸೆಸ್ ನಾಯಕರು ಹೇಳಿಕೇಳಿ ಕರಂದ್ಲಾಜೆಗೆ ಆಪ್ತರಾದವರೇ ಎಂಬುದೂ ಯಡ್ಡಿಗೆ ಗೊತ್ತಾಗಿದೆ. ಆತನಕ ಕರಂದ್ಲಾಜೆಗೆ ಪರಮಾಪ್ತಳಂತಿದ್ದ ಭಾರತಿ ಶೆಟ್ಟಿಯೇ ಕರಂದ್ಲಾಜೆಯ ಹುನ್ನಾರಗಳನ್ನೆಲ್ಲ ಯಡ್ಡಿಯ ಕಿವಿಗೆ ಹಾಕಿ ಪರಿಸ್ಥಿತಿಯ ಲಾಭ ಪಡೆದಳೆಂಬ ಮಾತೂ ಇದೆ. ಅರುಣಾದೇವಿಯ ಜೊತೆ ಜಗಳವಾಡಿದ ಬೆನ್ನಲ್ಲೇ ಯಡ್ಡಿ ಮಗನ ರಾಜಕೀಯ ಪ್ರವೇಶಕ್ಕೂ ಅಡ್ಡಗಾಲಿಡಲು ಯತ್ನಿಸಿದ ಕರಂದ್ಲಾಜೆಯ ವಿರುದ್ಧ ಯಡ್ಡಿ ಸಿಟ್ಟಾಗಿದ್ದಾರೆ. ಮಕ್ಕಳನ್ನಾದರೂ ಮೆಚ್ಚಿಸಲೆಂದು ಭಾರತಿಶೆಟ್ಟಿಯನ್ನು ಮಂತ್ರಿ ಮಾಡ್ತೀನಿ ಎಂದು ಪುಕಾರೆಬ್ಬಿಸಿದ್ದಾರೆ.

ಇದು ಗೊತ್ತಾಗಿದ್ದೇ ಕೆಂಡಮಂಡಲಗೊಂಡದ್ದು ಕೇವಲ ಕರಂದ್ಲಾಜೆಯಷ್ಟೇ ಅಲ್ಲ; ಯಡ್ಡಿಯ ಒಂದಾನೊಂದು ಕಾಲದ ಮಾನಸಪುತ್ರ ರೇಣುಕಾಚಾರ್ಯ. ಲೋಕಸಭಾ ಫಲಿತಾಂಶದ ನಂತರ ಸಂಪುಟ ಪುನಾರಚನೆಯಲ್ಲಿ ಸೋಮಣ್ಣ ಮತ್ತು ಬಿ.ಬಿ. ಶಿವಪ್ಪನವರ ಜೊತೆ ಭಾರತಿ ಶೆಟ್ಟಿಯನ್ನೂ ಮಂತ್ರಿ ಮಾಡೋದಾದರೆ ಅದಕ್ಕೆ ಹದಿನೈದು ಮಂದಿ ಬಿಜೆಪಿ ಶಾಸಕರ ವಿರೋಧವಿದೆ. ಈ ಬಗ್ಗೆ ಹೈಕಮಾಂಡಿಗೆ ದೂರು ಕೊಡ್ತೀವಿ; ಇತ್ಯಾದಿ ಕ್ಯಾತೆ ಶುರು ಹಚ್ಚಿಕೊಂಡಿದ್ದಾನೆ.


ರೇಣುಕಾ

ಇಲ್ಲಿ ರೇಣುಕಾಚಾರ್ಯನ ದಂಗೆಗೆ ಕಾರಣ ಭಾರತಿ ಶೆಟ್ಟಿಯಾ ಅಥವಾ ತನಗೆ ಮಂತ್ರಿಗಿರಿ ಕೊಟ್ಟಿಲ್ಲ ಎಂಬ ಸಿಟ್ಟಾ? ಎಂಬುದೇ ಗೊತ್ತಾಗುತ್ತಿಲ್ಲ. ಭಾರತಿ ಶೆಟ್ಟಿಯನ್ನು ಯಾವ ಕಾರಣಕ್ಕೆ ವಿರೋಧಿಸುತ್ತಿದ್ದೇನೆಂಬುದಕ್ಕೆ ರೇಣುಕಾಚಾರ್ಯನಲ್ಲಿ ಸಮಂಜಸ ಉತ್ತರವಿಲ್ಲ. ಹಾಗೇ ಯಡ್ಡಿಯನ್ನು ಬ್ಲ್ಯಾಕ್‌ಮೇಲ್ ಮಾಡಿ ತನ್ನ ಯಾವ ಕೆಲಸವನ್ನು ಪೂರೈಸಿಕೊಳ್ಳುವುದು ಆತನ ಹುನ್ನಾರವೋ ಗೊತ್ತಿಲ್ಲ. ತನ್ನ ಜೊತೆ ಹದಿನೈದು ಮಂದಿ ಬಿಜೆಪಿ ಶಾಸಕರಿದ್ದಾರೆಂಬುದಕ್ಕೂ ರೇಣುಕಾಚಾರ್ಯ ನಿಖರವಾದ ಪುರಾವೆ ಕೊಡುತ್ತಿಲ್ಲ.

ಲೋಕಸಭಾ ಫಲಿತಾಂಶಕ್ಕೂ ಮೊದಲೇ ಕೆಲ ಪತ್ರಕರ್ತರಿಗೆ ಫೋನ್ ಮಾಡಿದ ರೇಣುಕಾಚಾರ್ಯ "ನಾವು ಹದಿನೈದು ಮಂದಿ ಎಮ್ಮೆಲ್ಲೆಗಳು ಶಾಸಕರ ಭವನದಲ್ಲಿ ಸೇರಿದ್ದೀವಿ" ಎಂಬ ಗುಲ್ಲೆಬ್ಬಿಸಿದ್ದ. ಒಂದಿಬ್ಬರು ವರದಿಗಾರರು ಶಾಸಕರ ಭವನಕ್ಕೆ ಬರುವ ಹೊತ್ತಿಗೆ ರೇಣುಕಾಚಾರ್ಯನ ಜೊತೆ ಕೆಜಿಎಫ್‌ನ ಖದೀಮ ಶಾಸಕ ಸಂಪಂಗಿ ಇಸ್ಪೀಟಾಡುತ್ತಿದ್ದ. ಇದಾದ ಮೇಲೆ ವಿಜಯನಗರ ಕ್ಲಬ್‌ನಲ್ಲಿ ಚನ್ನಗಿರಿಯ ಶಾಸಕ ಮಾಡಾಳು ವಿರೂಪಾಕ್ಷಪ್ಪನ ಜೊತೆ ಪ್ರತ್ಯಕ್ಷನಾದ ರೇಣುಕಾಚಾರ್ಯ "ನಾವಿಲ್ಲಿ ಐದು ಮಂದಿ ಬಿಜೆಪಿ ಶಾಸಕರಿದ್ದೀವಿ" ಎಂದು ಹಾವು ಬಿಟ್ಟಿದ್ದ.

ಒಂದಂತೂ ಸತ್ಯ. ರೇಣುಕಾಚಾರ್ಯ ಸದ್ಯದ ಮಟ್ಟಿಗೆ ಬಿಜೆಪಿ ಬಂಡುಕೋರನೆಂಬುದು ನಿಜವಾದರೂ ಹದಿನೈದು ಶಾಸಕರು ಆತನ ಬೆನ್ನಿಗಿಲ್ಲ. ಹರಿಹರದ ಬಿ.ಪಿ. ಹರೀಶ್, ಕೆ.ಜಿ.ಎಫ್‌ನ ಸಂಪಂಗಿ, ದಾವಣಗೆರೆಯ ಬಸವರಾಜ ನಾಯಕ, ಚನ್ನಗಿರಿಯ ವಿರೂಪಾಕ್ಷಪ್ಪ, ಬಿಜಾಪುರದ ಬೆಳ್ಳುಬ್ಬಿ ಮತ್ತು ಸಾರ್ವಭೌಮ ಬಗಲಿ, ಆನೇಕಲ್ ನಾರಾಯಣ ಸ್ವಾಮಿ ಮುಂತಾದವರೆಲ್ಲ ತನ್ನ ಜೊತೆಗಿದ್ದಾರೆಂದು ರೇಣುಕಾಚಾರ್ಯ ಹಾವು ಬಿಡುತ್ತಿದ್ದಾನೆ. ಮೇಲ್ಕಂಡ ಶಾಸಕರೆಲ್ಲ ಆಗಾಗ ರೇಣುಕಾಚಾರ್ಯನ ಔತಣಕೂಟದಲ್ಲಿ ಉಂಡು ಬರುತ್ತಿದ್ದಾರೆಯೇ ಹೊರತು ಫಲವತ್ತಾದ ನಿಗಮ-ಮಂಡಳಿ ಸಿಕ್ಕತೆಂದರೆ ತೆಪ್ಪಗಾಗುತ್ತಾರೆ.


ಅಸಲಿಗೆ ಯಡ್ಡಿ ತಲೆ ಕೆಡಿಸಿಕೊಂಡಿರುವುದು ಮತ್ತೊಬ್ಬ ಬಿಜೆಪಿ ನಾಯಕ ಈಶ್ವರಪ್ಪನವರ ವಿರುದ್ಧ. ಶಿವಮೊಗ್ಗದ ಲೋಕಸಭಾ ಚುನಾವಣೆಯಲ್ಲಿ ಈಶ್ವರಪ್ಪ ಕಾಟಾಚಾರಕ್ಕಷ್ಟೇ ಓಡಾಡಿದರೇ ಹೊರತು ಮೈಬಗ್ಗಿಸಿ ದುಡಿಯಲಿಲ್ಲ. ಈ ಕಾರಣಕ್ಕೆ ಯಡ್ಡಿಗೂ ಈಶ್ವರಪ್ಪಂಗೂ ಮೊನ್ನೆಯಷ್ಟೇ ಮಾತಿನ ಚಕಮಕಿಯಾಗಿದೆ. ಅದೂ ಯಾವ ಮಟ್ಟಕ್ಕೆಂದರೆ ಮೇ 21 ರ ಬಿಜೆಪಿ ಶಾಸಕಾಂಗ ಪಕ್ಷದ ಸಭೆಗೆ ಈಶ್ವರಪ್ಪ ಬರುವುದೇ ಇಲ್ಲ ಎಂಬಷ್ಟರಮಟ್ಟಿಗೆ ಕಾವೇರಿದೆ. ಈಶ್ವರಪ್ಪನವರ ಜೊತೆ ಜಗದೀಶ್ ಶೆಟ್ಟರ್ ಕೂಡ ಕೈಜೋಡಿಸಿದ್ದು ಯಡ್ಡಿಯ ತಲೆಬಿಸಿಗೆ ಮತ್ತೊಂದು ಕಾರಣ.

ಈಶ್ವರಪ್ಪನವರ ಸಹನೆಯ ಕಟ್ಟೆಯೇನಾದರೂ ಒಡೆದು ಅದಕ್ಕೆ ರೇಣುಕಾಚಾರ್ಯನೂ ಕೈಜೋಡಿಸಿದರಷ್ಟೇ ಅಪಾಯ ಕಟ್ಟಿಟ್ಟ ಬುತ್ತಿ. ಬಹುಶಃ ಅನಂತ್‌ಕುಮಾರ್ ಏನಾದರೂ ಸೋತಿದ್ದರೆ ಇಂಥಾದ್ದೊಂದು ಸಾಧ್ಯತೆಯಿತ್ತು. ಸದ್ಯದ ಮಟ್ಟಿಗೆ ಯಡ್ಡಿಯ ಬುಡಕ್ಕೆ ಕೈಹಾಕುವ ಧೈರ್ಯ ಹೈಕಮಾಂಡಿಗೂ ಇದ್ದಂತಿಲ್ಲ. ಪ್ರಶ್ನೆಯೆಂದರೆ ಇಷ್ಟೆಲ್ಲಾ ವಿರೋಧವಿದ್ದಾಗ್ಯೂ ಯಡ್ಡಿ ಭಾರತಿ ಶೆಟ್ಟಿಯನ್ನು ಮಂತ್ರಿ ಮಾಡುತ್ತಾರಾ? ಅಥವಾ ಸೋಮಣ್ಣ ಒಬ್ಬನನ್ನೇ ಮಂತ್ರಿ ಮಾಡಿ ತಾಪತ್ರಯವನ್ನು ಮುಂದೂಡುತ್ತಾರಾ?.

ಒಂದಂತೂ ಸತ್ಯ. ಕರಂದ್ಲಾಜೆಗೊಬ್ಬಳು ಪ್ರತಿಸ್ಪರ್ಧಿಯಂತೂ ಬಿಜೆಪಿಯಲ್ಲಿ ತಲೆ ಎತ್ತಿದ್ದಾಳೆ. ಕನ್ನಡ ಜನತೆ ಅಪ್ಪ ಮಕ್ಕಳ ದರ್ಬಾರಿನ ಜೊತೆ ಈ 'ಜಡೆ'ಗಳ ಮತ್ಸರವನ್ನೂ ನೋಡಬೇಕಾಯಿತಲ್ಲ; ಎಂಥಾ ಕರ್ಮವಲ್ಲವೆ?

● ರಾ. ಸೋಮನಾಥ್

ರೇಣುಕಾಚಾರ್ಯನ ಬ್ಲ್ಯಾಕ್‌ಮೇಲ್ ಗಿಮಿಕ್



ಲಾಡ್


ಹತ್ತು ಮಂದಿ ಬಿಜೆಪಿ ಶಾಸಕರನ್ನು ಸೆಳೆದು ಯಡ್ಡಿ ಸರ್ಕಾರಕ್ಕೆ ಸಂಚಕಾರ ತರುವ ಬುಡಮೇಲು ಕಾರ್ಯಾಚರಣೆಯೊಂದಕ್ಕೆ ಅನಿಲ್ ಲಾಡ್ ಕೈಹಾಕಿದ್ದಾರಾ? ಅಪರೇಷನ್ ಕಮಲಕ್ಕೆ ತಿರುಗೇಟು ಕೊಡಲು ಕೇಂದ್ರದ ಕಾಂಗ್ರೆಸ್ ಕೂಟ ಅನಿಲ್ ಲಾಡ್‌ರನ್ನು ಛೂ ಬಿಟ್ಟಿದೆಯಾ?

ಹತ್ತು ಮಂದಿ ಬಿಜೆಪಿ ಶಾಸಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಉಳಿಕೆ ಆರು ಮಂದಿ ಪಕ್ಷೇತರರು ಜೆಡಿಎಸ್-ಕಾಂಗ್ರೆಸ್ ಕೂಟದ ಜೊತೆ ನಿಂತರೆಂದರೆ ಬಿಜೆಪಿ ಬಹುಮತ ಕಳೆದುಕೊಳ್ಳುತ್ತದೆ. ಗೋವಿಂದರಾಜನಗರದ ಸೋಮಣ್ಣ, ಚನ್ನಪಟ್ಟಣದ ಯೋಗೇಶ್ವರ್, ರೇವೂ ನಾಯಕ ಬೆಳಮಗಿ, ಖರ್ಗೆ, ಕುಮಾರಸ್ವಾಮಿ ಮುಂತಾದವರೆಲ್ಲರ ಸ್ಥಾನಕ್ಕೆ ಮತ್ತೆ ಚುನಾವಣೆಯಾಗಲು ತಿಂಗಳುಗಳೇಬೇಕು. ಅಷ್ಟರೊಳಗೇ ಬಿಜೆಪಿ ಸರ್ಕಾರವನ್ನು ನಿಕಾಲಿ ಮಾಡಲು ಅನಿಲ್ ಲಾಡ್ ಕೈಚಳಕ ತೋರುತ್ತಾರಾ?

ಹೀಗೊಂದು ಲೆಕ್ಕಾಚಾರ ಶುರುವಾಗಿರುವುದು ಕಾಂಗ್ರೆಸ್ ಪಡಸಾಲೆಯಲ್ಲಿ. ಬಿಜೆಪಿ ಬಹುಮತ ಕಳಕೊಂಡು ಮತ್ತೇನಾದರೂ ಚುನಾವಣೆ ನಡೆಯಿತೆಂದರೆ ಕನಿಷ್ಠ ಐವತ್ತು ಮಂದಿ ಬಿಜೆಪಿ ಶಾಸಕರು ಡುಮುಕಿ ಹೊಡೆಯುತ್ತಾರೆ. ಆ ಮಟ್ಟಿಗೆ ಯಡ್ಡಿ ಸರ್ಕಾರ ಎಕ್ಕುಟ್ಟಿದೆ. ಯಡ್ಡಿ ಸರ್ಕಾರ ಕಿತ್ತೆಸೆಯಲು ಕಾಂಗ್ರೆಸ್ಸಿಗೂ ನೆಪಬೇಕಿದೆ. ಅನಿಲ್ ಲಾಡ್ ಬಳಿ ರೊಕ್ಕವೂ ರೆಡಿಯಾಗಿದೆ. ಗಳಿಗೆಯಷ್ಟೇ ಕೂಡಿ ಬರುತ್ತಿಲ್ಲ. ಇದು ಗೊತ್ತಿದ್ದೇ ರೇಣುಕಾಚಾರ್ಯ ಬಿಜೆಪಿ ಭಿನ್ನಮತೀಯರ ಸಾರಥ್ಯಕ್ಕೆ ತಾಲೀಮು ನಡೆಸುತ್ತಿದ್ದಾನಾ? ಅನಿಲ್ ಲಾಡ್ ಜೊತೆ ಕೈಜೋಡಿಸದಿರಲೆಂದು ಯಡ್ಡಿ ತನ್ನನ್ನು ಮಂತ್ರಿ ಮಾಡುತ್ತಾರೆಂಬುದು ಆತನ ಬ್ಲ್ಯಾಕ್ ಮೇಲ್ ತಂತ್ರವಾ?

ಯಡ್ಡಿ ಅಧಿಕಾರಕ್ಕೆ ರೆಡ್ಡಿ ಏಟು?






"ಚುನಾವಣೆ ನಂತರ ರಾಜ್ಯ ಬಿಜೆಪಿಯಲ್ಲಿ ಭಿನ್ನಮತ ಭುಗಿಲೇಳಲಿದೆ. ಮುಖ್ಯಮಂತ್ರಿ ಯಡ್ಡಿ ವಿರುದ್ಧ ಶಾಸಕರ ದೊಡ್ಡ ಗುಂಪೊಂದು ಕೆಲ ಸಚಿವರ ನೇತೃತ್ವದಲ್ಲಿ ತಿರುಗಿಬೀಳಲಿದೆ. ಪಕ್ಷದ ಆಂತರಿಕ ಕಲಹಕ್ಕೆ ಯಡ್ಡಿ ಬಲಿಯಾಗುವ ಸಾಧ್ಯತೆಗಳಿವೆ" - ಹೀಗೆಂದು ರಾಜ್ಯ ರಾಜಕೀಯ ವಲಯದಲ್ಲಿ ಹಿಂದಿನಿಂದಲೂ ಚರ್ಚೆ ಆಗುತ್ತಲೇ ಇದೆ. ಆದರೀಗ ಈ ಚರ್ಚೆಗೆ ಕೆಲ ಬಿಜೆಪಿ ನಾಯಕರೇ ಒಂದಷ್ಟು ತುಪ್ಪ ಸುರಿದು ಮಜಾ ತೆಗೆದುಕೊಳ್ಳುತ್ತಿದ್ದಾರೆ. ಮಾತ್ರವಲ್ಲ, ಅವರು ಹೇಳುತ್ತಿರುವುದು ಸತ್ಯವಾಗುವ ಸಾಧ್ಯತೆಗಳೂ ಕಾಣಿಸುತ್ತಿವೆ.

ಮೇಲ್ನೋಟಕ್ಕೆ ಬಿಜೆಪಿಯಲ್ಲಿ ಯಾವುದೇ ಮಹತ್ವದ ಬೆಳವಣಿಗೆ ಕಂಡುಬರುತ್ತಿಲ್ಲವಾದರೂ ಒಳಗೊಳಗೇ ಭಿನ್ನಮತೀಯ ಚಟುವಟಿಕೆಗಳು ತೀವ್ರಗೊಳ್ಳುತ್ತಿವೆ. ಯಾವುದೇ ಸಂದರ್ಭದಲ್ಲಿಯೂ 'ಮಹಾಸ್ಫೋಟ' ಸಂಭವಿಸಬಹುದು. ಇದರ ಅರಿವಿರುವ ಯಡ್ಡಿ ತಮಗೆ ಗೊತ್ತಿರುವ ಎಲ್ಲ ರಾಜಕೀಯ ತಂತ್ರಗಾರಿಕೆಗಳನ್ನು ಬಳಸಿ ಸ್ಫೋಟ ತಡೆಯುವ ಯತ್ನ ನಡೆಸಿದ್ದಾರೆ. ಇದರಲ್ಲಿ ಅವರು ಯಶಸ್ಸು ಪಡೆದರೆ ಮಾತ್ರ ಅಧಿಕಾರ ಉಳಿಸಿಕೊಳ್ಳಬಹುದು.

ಸಚಿವ ಸಂಪುಟ ವಿಸ್ತರಣೆ ಇಲ್ಲ ಎಂದರು!



ಕಳೆದ ಚುನಾವಣೆಯಲ್ಲಿ ಗೆದ್ದಿದ್ದಕ್ಕಿಂತ ಒಂದೇ ಒಂದು ಸ್ಥಾನ ಹೆಚ್ಚು ಗೆದ್ದಿದ್ದರೂ ಅದು ಯಡ್ಡಿಗೆ ಆನೆ ಬಲ ತಂದುಕೊಟ್ಟಿದೆ. ನಿರೀಕ್ಷೆಯಷ್ಟು ಸ್ಥಾನಗೆಲ್ಲದಿದ್ದರೆ ಯಡ್ಡಿಯ ಮೇಲೆ ಹರಿಹಾಯಬಹುದು ಎಂದು ಕಾದು ಕುಳಿತಿದ್ದ ಬಿಜೆಪಿಯ ಭಿನ್ನಮತೀಯ ನಾಯಕರೀಗ ತಮ್ಮ ಕಾರ್ಯತಂತ್ರವನ್ನು ಬದಲಾಯಿಸಿಕೊಳ್ಳಬೇಕಾಗಿ ಬಂದಿದೆ. ಹೀಗಾಗಿ ಭಿನ್ನಮತ ಸ್ಫೋಟಗೊಳ್ಳಲು ಇನ್ನು ಸ್ವಲ್ಪ ಸಮಯ ತೆಗೆದುಕೊಳ್ಳಲಿದೆ ಎಂದು ಬಿಜೆಪಿ ಮಂದಿಯೇ ವಿಶ್ಲೇಷಿಸುತ್ತಿದ್ದಾರೆ.

ಆದರೆ ಯಡ್ಡಿ ಸುಮ್ಮನೆ ಕುಳಿತಿಲ್ಲ. ಯಾರೆಲ್ಲಾ ಬಂಡಾಯವೇಳಬಹುದು, ಅವರನ್ನು ಯಾರ್ಯಾರು ಬೆಂಬಲಿಸುತ್ತಾರೆ ಎಂಬ ಮಾಹಿತಿ ಸಂಗ್ರಹಿಸುವ ಕೆಲಸ ಆರಂಭಿಸಿದ್ದಾರೆ. ರಾಜ್ಯ ಗುಪ್ತಚರ ಇಲಾಖೆಯನ್ನು ಕೆಲ ಭಿನ್ನಮತೀಯ ನಾಯಕರ ಹಿಂದೆ ಛೂಬಿಟ್ಟಿದ್ದಾರೆ. ಒಂದು ಫೋನ್ ಮಾಡಿ ಮಾತನಾಡಿದರೂ ಯಡ್ಡಿಗೆ ಇನ್ಫರ್ಮೇಷನ್ ಹೋಗುತ್ತಿದೆ.

ಕೊಟ್ಟ ಮಾತಿನಂತೆ ಯಡ್ಡಿ ನಡೆದುಕೊಳ್ಳುವುದಾದರೆ ಅವರು ಈಗ ಸಚಿವ ಸಂಪುಟವನ್ನು ಪುನರ್‌ರಚಿಸಿ, ವಿಧಾನ ಸಭಾಧ್ಯಕ್ಷರಾಗಿರುವ ಜಗದೀಶ್ ಶೆಟ್ಟರ್‌ರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಬೇಕು. ಚುನಾವಣೆಗಿಂತ ಮೊದಲು ಪಕ್ಷಕ್ಕೆ ಸೇರಿಸಿಕೊಂಡ ಸೋಮಣ್ಣಗೆ ಸಂಪುಟದಲ್ಲಿ ಜಾಗ ಕಲ್ಪಿಸಬೇಕು. ಈ ಎಲ್ಲ ಪ್ರಕ್ರಿಯೆಯನ್ನು ಯಡ್ಡಿ ಆರಂಭಿಸಲಿದ್ದಾರೆ ಎಂದೇ ನಿರೀಕ್ಷಿಸಲಾಗುತ್ತಿತ್ತು. ಆದರೆ ಯಡ್ಡಿ ಉಪಾಯವಾಗಿ ಬೀಸೋ ದೊಣ್ಣೆಯಿಂದ ತಪ್ಪಿಸಿಕೊಳ್ಳಲು ಹೊರಟಿದ್ದಾರೆ. "ಚುನಾವಣೆಯಲ್ಲಿ ಪಕ್ಷ ಉತ್ತಮ ಸಾಧನೆ ಮಾಡಿದ್ದರಿಂದ ಸಚಿವ ಸಂಪುಟ ಪುನರ್ ರಚಿಸುವ ಅಗತ್ಯವಿಲ್ಲ. ಸದ್ಯ ಈ ಬಗ್ಗೆ ಯೋಚಿಸುವುದಿಲ್ಲ" ಎಂದು ದೆಲ್ಲಿಯಿಂದ ಹೇಳಿಕೆ ನೀಡುವ ಮೂಲಕ ಮಂತ್ರಿಗಿರಿಯ ಆಕಾಂಕ್ಷಿಗಳತ್ತ ಬಾಂಬ್ ಎಸೆದಿದ್ದಾರೆ.


ಈ ಮೂಲಕ 'ಜಗದೀಶ್ ಶೆಟ್ಟರ್‌ಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡುವುದಿಲ್ಲ' ಎಂಬ ಸ್ಪಷ್ಟ ಸಂದೇಶವನ್ನು ಯಡ್ಡಿ ನೀಡಿದ್ದಾರೆ. ಜಗದೀಶ್ ಶೆಟ್ಟರ್ ಈಗ ಏನು ಮಾಡುತ್ತಾರೆ ಎಂದು ಯಡ್ಡಿ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದಾರೆ. ಯಾರೊಂದಿಗಾದರೂ ಸೇರಿಕೊಂಡು ಭಿನ್ನಮತ ಚಟುವಟಿಕೆ ಆರಂಭಿಸಿದರೆ ಅವರನ್ನು ಸಂಪೂರ್ಣವಾಗಿ ಮಟ್ಟಹಾಕುವ ತಂತ್ರವನ್ನು ರೂಪಿಸಿದ್ದಾರೆ. ಹೇಗಿದ್ದರೂ ರಾಜ್ಯದಲ್ಲಿ ಪಕ್ಷ 19 ಸ್ಥಾನಗಳನ್ನು ಗೆದ್ದಿರುವುದರಿಂದ ಮತ್ತು ಕೇಂದ್ರದಲ್ಲಿ ಪಕ್ಷ ಸೋತು ಕೂತಿರುವುದರಿಂದ ಸದ್ಯಕ್ಕೆ ಪಕ್ಷದ ಹೈಕಮಾಂಡ್ ತಮ್ಮ ಮಾತಿಗೆ ಎದುರಾಡುವುದಿಲ್ಲ ಎಂಬ ಧೈರ್ಯ ಯಡ್ಡಿಗೆ.

ಇನ್ನು ಸೋಮಣ್ಣನಿಗೆ ಮಂತ್ರಿಗಿರಿ ಕಲ್ಪಿಸುವ ಜವಾಬ್ದಾರಿಯನ್ನು ಕೂಡ ಯಡ್ಡಿ ಸೂಕ್ಷ್ಮವಾಗಿ ನಿವಾರಿಸಿಕೊಂಡಿದ್ದಾರೆ. ಚುನಾವಣೆಗಿಂತ ಮೊದಲು ಸೋಮಣ್ಣರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲೇಬೇಕೆಂದು ಆತುರ ತೋರಿದವರು ಅನಂತ್‌ಕುಮಾರ್ ಆದ್ದರಿಂದ ಸೋಮಣ್ಣನಿಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡುವ ಕುರಿತು ಅನಂತಕುಮಾರೇ ಹೆಚ್ಚು ತಲೆಕೆಡಿಸಿಕೊಳ್ಳಲಿ ಎಂಬುದು ಯಡ್ಡಿಯ ತರ್ಕ! ಹೀಗಾಗಿ ಸೋಮಣ್ಣರನ್ನು ಸಚಿವರಾಗಿಸುವ ವಿಷಯದಲ್ಲಿ ಅನಂತು ತಲೆಬಿಸಿ ಮಾಡಿಕೊಂಡು ಯಡ್ಡಿ ಹಿಂದೆ-ಮುಂದೆ ಓಡಾಡಬೇಕಾಗಿ ಬಂದಿದೆ.

ಒಂದು ವೇಳೆ ಸಚಿವ ಸಂಪುಟ ಪುನರ್ ರಚನೆ ಅನಿವಾರ್ಯವಾದರೆ ಆದರಿಂದಾಗಿ ಏಳುವ ಭಿನ್ನಮತದಲ್ಲಿ ಸೋಮಣ್ಣನಿಗೆ ಸ್ಥಾನ ನೀಡುವ ವಿಷಯವನ್ನೇ ಮುಂದಿಟ್ಟುಕೊಂಡು ಅನಂತು ಬಣವನ್ನು ಮಣಿಸಲು ಯಡ್ಡಿ ಯೋಚಿಸುತ್ತಿದ್ದಾರೆ. ಇದೆಲ್ಲಾ ಅರಿವಿರುವ ಅನಂತು ಸದ್ಯ ಭಿನ್ನಮತೀಯ ಚಟುವಟಿಕೆಗಳಿಗೆ 'ಗ್ರೀನ್' ಸಿಗ್ನಲ್ ನೀಡಿಲ್ಲ.

ಆದರೆ ಯಡ್ಡಿ ಅನಂತುವನ್ನೇನೂ ಕೆಣಕದೆ ಬಿಟ್ಟಿಲ್ಲ. ಗೆದ್ದರೂ ಸೋತಂತಿರುವ ಅನಂತು ಮೇಲೆ ಕಲ್ಲೆಸೆಯುವ ಕೆಲಸ ಮಾಡುತ್ತಲೇ ಇದ್ದಾರೆ. ಈ ಬಾರಿ ಬಿಜೆಪಿ ಹೆಚ್ಚು ಸ್ಥಾನ ಗೆದ್ದಿರುವ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕಕ್ಕೆ ಅಗ್ರಸ್ಥಾನ. ಹೀಗಾಗಿ ಲೋಕಸಭೆಯಲ್ಲಿ ವಿರೋಧ ಪಕ್ಷದ ಉಪ ನಾಯಕರನ್ನಾಗಿ ರಾಜ್ಯದವರನ್ನು ನೇಮಕ ಮಾಡಬೇಕೆಂಬ ಮಾತು ಪಕ್ಷದಲ್ಲಿ ಕೇಳಿಬಂದಿದೆ. ಆ ನಿಟ್ಟಿನಲ್ಲಿ ಅನಂತು ಬೆಂಬಲಿಗರು ದಿಲ್ಲಿಯಲ್ಲಿ ಅವರ ಪರವಾಗಿ ಲಾಬಿ ನಡೆಸುತ್ತಿದ್ದಾರೆ. ಆದರೆ ಸುಮ್ಮನಿರದ ಯಡ್ಡಿ ಬೇಕೆಂತಲೇ ಈ ಸ್ಥಾನಕ್ಕೆ ರಾಜ್ಯಾಧ್ಯಕ್ಷ ಸದಾನಂದ ಗೌಡರ ಹೆಸರನ್ನು ತೇಲಿ ಬಿಟ್ಟಿದ್ದಾರೆ. "ಒಕ್ಕಲಿಗರನ್ನು ಬಿಜೆಪಿಯತ್ತ ಒಲಿಸಿಕೊಳ್ಳಲು ಸದಾನಂದ ಗೌಡರಿಗೆ ಈ ಸ್ಥಾನ ನೀಡಿದರೆ ಒಳ್ಳೆಯದು. ಆಗ ತೆರವಾಗುವ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಹಿಂದುಳಿದ ಜಾತಿಯವರೊಬ್ಬರನ್ನು ನೇಮಿಸೋಣ. ಇದರಿಂದ ರಾಜ್ಯದಲ್ಲಿ ಪಕ್ಷ ಇನ್ನಷ್ಟು ಗಟ್ಟಿಯಾಗುತ್ತದೆ" ಎಂದು ಯಡ್ಡಿ ರಾಷ್ಟ್ರ ನಾಯಕರ ಕಿವಿ ಊದುತ್ತಿದ್ದಾರೆ.

ತಮ್ಮ ರಾಜಕೀಯ ಗುರು ಆಡ್ವಾನಿ ಪ್ರಧಾನಿಯಾಗುತ್ತಿಲ್ಲವೆಂದು ಮುಖ ಸಣ್ಣಗೆ ಮಾಡಿಕೊಂಡು ಹೋದಲ್ಲಿ ಬಂದಲ್ಲಿ ಅಳುತ್ತಿರುವ ಅನಂತು ಈ ಬೆಳವಣಿಗೆಯಿಂದ ಇನ್ನಷ್ಟು ಕೆಂಗೆಟ್ಟಿದ್ದಾರೆ. ತನ್ನ ವಿರುದ್ಧದ ಯಡ್ಡಿಯ ಪಿತೂರಿ ಗೊತ್ತಾದ ನಂತರ "ರಾಷ್ಟ್ರದಲ್ಲಿ ಪಕ್ಷ ಸೋತಿದೆ, ರಾಜ್ಯದಲ್ಲಿಯೂ ನಮ್ಮ ಹಿಡಿತ ತಪ್ಪಿದೆ" ಎಂದು ಅನಂತು ಮತ್ತಷ್ಟು ಜೋರಾಗಿ ಅತ್ತರೆಂದು ಬಸವನಗುಡಿಯ ಅವರ ಆತ್ಮೀಯರೇ ಮಾತನಾಡಿಕೊಳ್ಳುತ್ತಿದ್ದಾರೆ.



ಈಶ್ವರಪ್ಪಗೆ ಆವಾಜ್!

ಈ ಹಿಂದೆ ತಮ್ಮನ್ನು ಮುಖ್ಯಮಂತ್ರಿ ಮಾಡಬಾರದೆಂದು ಪಕ್ಷದ ಹೈಕಮಾಂಡ್‌ಗೆ ಮನವಿ ಮಾಡಿದ್ದ ಈಶ್ವರಪ್ಪ, ಜಗದೀಶ್ ಶೆಟ್ಟರ್ ಮತ್ತು ಶಂಕರಮೂರ್ತಿ ವಿರುದ್ಧ ಯಡ್ಡಿಯ ದ್ವೇಷ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲಿ ಮಗ ರಾಘವೇಂದ್ರನನ್ನು ನಿಲ್ಲಿಸಿ ಗೆಲ್ಲಿಸಿರುವ ಯಡ್ಡಿ, ಈ ಬಾರಿ ತಮ್ಮ ಹಳೆಯ ಸ್ನೇಹಿತ ಈಶ್ವರಪ್ಪ ಪಕ್ಷದ ಪರವಾಗಿ ಸರಿಯಾಗಿ ಕೆಲಸ ಮಾಡಿಲ್ಲ ಎಂದು ಬಹಿರಂಗವಾಗಿ ಈಶ್ವರಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಇದರಿಂದ ಇವರಿಬ್ಬರ ನಡುವಿನ ಸಂಬಂಧ ಇನ್ನಷ್ಟು ಹಳಸಿದೆ.

ಆದದ್ದಿಷ್ಟೇ: ಈಶ್ವರಪ್ಪನ ಕ್ಷೇತ್ರ ಶಿವಮೊಗ್ಗ ನಗರದಲ್ಲಿ ಬಿಜೆಪಿಗೆ - ಅಂದರೆ ಯಡ್ಡಿ ಮಗ ರಾಘವೇಂದ್ರನಿಗೆ - ದೊರೆತ ಮುನ್ನಡೆ ಕೇವಲ 5,006 ಮತಗಳು. ಆದರೆ ಈ ಒಂದು ಕ್ಷೇತ್ರದಿಂದಲೇ ತಮ್ಮ ಮಗನಿಗೆ ಏನಿಲ್ಲವೆಂದರೂ 25 ಸಾವಿರ ಲೀಡ್ ಸಿಗಬಹುದೆಂದು ಯಡ್ಡಿ ನಿರೀಕ್ಷಿಸಿದ್ದರು. ಇದಕ್ಕೆ ಬೇಕಾಗುವಷ್ಟು 'ಸಂಪನ್ಮೂಲ'ವನ್ನೂ ಈಶ್ವರಿಗೆ ಒದಗಿಸಿದ್ದರು. ಆದರೆ "ಈಶ್ವರಪ್ಪ ಸರಿಯಾಗಿ ಕೆಲಸ ಮಾಡಲಿಲ್ಲ. ಸಂಪನ್ಮೂಲ ಹಂಚಿಕೆ ಮಾಡದೇ ತಾವೇ ನುಂಗಿದರು. ಚುನಾವಣೆ ಸಮೀಪಿಸಿದಾಗ ಈಶ್ವರಪ್ಪ ನಿಷ್ಕ್ರಿಯರಾಗಿದ್ದರು" ಎಂದು ಯಡ್ಡಿ ಬಣದವರು ಈಗ ಬಹಿರಂಗವಾಗಿಯೇ ಆರೋಪಿಸುತ್ತಿದ್ದಾರೆ. ಇದೆಲ್ಲಾ ಯಡ್ಡಿಗೂ ಗೊತ್ತಿದ್ದ ವಿಷಯಗಳೇ. ಹೀಗಾಗಿ ಫಲಿತಾಂಶ ಪ್ರಕಟವಾಗುತ್ತಿದ್ದಂತೆಯೇ ಈಶ್ವರಪ್ಪನನ್ನು ಯಡ್ಡಿ ಎಲ್ಲರೆದುರೇ ತರಾಟೆಗೆ ತೆಗೆದುಕೊಂಡರು.

ಇದರಿಂದ ಈಶ್ವರಪ್ಪ ತೀವ್ರ ಅವಮಾನ ಕ್ಕೊಳಗಾದರು. ಪರಿಣಾಮವಾಗಿ ಯಡ್ಡಿ ತನ್ನ ಮಗನ ಗೆಲುವಿನ ಸಂಭ್ರಮ ಹಂಚಿಕೊಳ್ಳಲು ಕರೆದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಭಾಗವಹಿಸಲಿಲ್ಲ. ವಿಜಯೋತ್ಸವದಲ್ಲೂ ಭಾಗಿಯಾಗಲಿಲ್ಲ. ರಾಘವೇಂದ್ರನನ್ನು ಅಭಿನಂದಿಸಲೂ ಇಲ್ಲ. ಯಡ್ಡಿಯೇ ಫೋನ್ ಮಾಡಿ ಕರೆದರೂ ಜಿಲ್ಲಾ ಬಿಜೆಪಿ ಕಚೇರಿಗೆ ಕಾಲಿಡಲಿಲ್ಲ.



ಯಡ್ಡಿ ಸುತ್ತುಮುತ್ತಲಿನ ಪಟಾಲಂ ಗೆಲುವಿನ ಹುಮ್ಮಸ್ಸಿನಲ್ಲಿ ಇವತ್ತು ಆಡುತ್ತಿರುವ ಮಾತು ಕೇವಲ ಈಶ್ವರಪ್ಪನನ್ನು ಮಾತ್ರವಲ್ಲ, ಜಿಲ್ಲಾ ಬಿಜೆಪಿಯ ಇತರ ನಾಯಕರನ್ನೂ ಕೆರಳಿಸಿದೆ. ಅವರೆಲ್ಲಾ ಈಗ ಈಶ್ವರಪ್ಪನ ಬೆಂಬಲಕ್ಕೆ ನಿಂತಿದ್ದಾರೆ. "ಈಗಾಗಲೇ ಜಿಲ್ಲಾ ಬಿಜೆಪಿ ಮೇಲೆ ಯಡ್ಡಿ ಸಂಪೂರ್ಣ ಹಿಡಿತ ಸಾಧಿಸಿದ್ದಾರೆ. ನಾವು ಹೀಗೆಯೇ ಸಹಿಸಿಕೊಂಡಿದ್ದರೆ ನಾಳೆ ಯಡ್ಡಿ ನಮ್ಮ ರಾಜಕೀಯ ಜೀವನವನ್ನೇ ಮುಗಿಸಿಬಿಡಬಹುದು" ಎಂದು ಈಶ್ವರಪ್ಪ ಆಕ್ರೋಶ ವ್ಯಕ್ತಪಡಿಸುತ್ತಿದ್ದು, ಯಡ್ಡಿ ವಿರುದ್ಧ ಬಂಡೇಳಲು ಸಿದ್ಧತೆ ನಡೆಸಿದ್ದಾರೆ.

ಸಭೆ ಬಹಿಷ್ಕರಿಸಿದರು

ಯಡ್ಡಿ ವಿರುದ್ಧ ತಾನು ತಿರುಗಿಬಿದ್ದಿದ್ದೇನೆ ಎಂದು ತೋರ್ಪಡಿಸಲು ಮೇ 20ರಂದು ನಡೆಯಬೇಕಿದ್ದ ಕರ್ನಾಟಕ ವಿದ್ಯುತ್ ನಿಗಮದ ಆಡಳಿತ ಮಂಡಳಿ ಸಭೆಯನ್ನೂ ಈಶ್ವರಪ್ಪ ಬಹಿಷ್ಕರಿಸಿದ್ದಾರೆ. ಆ ಸಭೆಯಲ್ಲಿ ಯಡ್ಡಿಯೊಂದಿಗೆ ಈಶ್ವರಪ್ಪ ಭಾಗವಹಿಸಬೇಕಾಗಿತ್ತು. ಆದರೆ "ಇನ್ನು ಮುಂದೆ ಅವರಿದ್ದಲ್ಲಿ ನಾನು ಇರುವುದಿಲ್ಲ" ಎಂದು ಘೋಷಿಸಿದ ಈಶ್ವರಪ್ಪ ದಿಢೀರಾಗಿ ಶಿವಮೊಗ್ಗಕ್ಕೆ ತೆರಳಿದರು. ಇದರಿಂದಾಗಿ ಸಭೆ ರದ್ದಾಯಿತು.

ಯಡ್ಡಿ ವಿರುದ್ಧ ಬುಸುಗುಟ್ಟುತ್ತಿರುವ ಈಶ್ವರಪ್ಪನಿಗೆ ತಮ್ಮೊಂದಿಗೆ ಯಾರೆಲ್ಲಾ ಸೇರಿಕೊಳ್ಳುತ್ತಾರೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಆದ್ದರಿಂದ ಗೊಂದಲಕ್ಕೊಳಗಾಗಿರುವ ಅವರು ಮುಂದೇನು ಎಂದು ಯೋಚಿಸುತ್ತಿದ್ದಾರೆ. ಅನಂತು ಬಣ ಕಾದು ನೋಡುವ ತಂತ್ರ ಅನುಸರಿಸುತ್ತಿರುವುದರಿಂದ ಭಿನ್ನಮತದ ಚಟುವಟಿಕೆಗಳು ಬಿರುಸುಗೊಂಡಿಲ್ಲ.

ಉದಾಸಿ ಉಲ್ಟಾ

ಚುನಾವಣೆಯ ಫಲಿತಾಂಶವನ್ನಾಧರಿಸಿ ಕೆಲ ಸಚಿವರನ್ನು ಕೈ ಬಿಡುವ ಉದ್ದೇಶವನ್ನು ಯಡ್ಡಿ ಹೊಂದಿದ್ದರು. ಆ ಕಾರಣಕ್ಕಾಗಿಯೇ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸದವರನ್ನು ಸಂಪುಟದಿಂದ ಕೈಬಿಡಲಾಗುತ್ತದೆ ಎಂದೂ ಬೆದರಿಸಿದ್ದರೆ. ಆದರೆ ಯಡ್ಡಿಯ ಗ್ರಹಚಾರಕ್ಕೆ ಅವರ ಆತ್ಮೀಯ ಶೋಭಾ ಕರಂದ್ಲಾಜೆ ಉಸ್ತುವಾರಿ ವಹಿಸಿರುವ ಮೈಸೂರಿನಲ್ಲೇ ಪಕ್ಷ ಸೋತಿದೆ. ಈ ಒಂದು ಅಂಶವೇ ಇವತ್ತು ಯಡ್ಡಿಯ ಕೈಗಳನ್ನು ಕಟ್ಟಿಹಾಕಿದೆ. ಆದರೆ ಬೇರೆಯವರು ಸುಮ್ಮನಿರಬೇಕಲ್ಲ, ತನ್ನ ಮಗ ಶಿವಕುಮಾರನನ್ನು ಹಾವೇರಿಯಿಂದ ಗೆಲ್ಲಿಸುವಲ್ಲಿ ಯಶಸ್ವಿಯಾಗಿರುವ ಮುದಿ ಮಂತ್ರಿ ಸಿ.ಎಂ.ಉದಾಸಿ "ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಲಾಗದ ಮಂತ್ರಿಗಳನ್ನು ಸಚಿವ ಸ್ಥಾನದಿಂದ ಕೈ ಬಿಡಿ" ಎಂದು ಶೋಭಾ ಕರಂದ್ಲಾಜೆಯನ್ನು ಮನಸ್ಸಿನಲ್ಲಿಟ್ಟು ಕೊಂಡೆ ತಕರಾರು ಎತ್ತಿದ್ದಾರೆ.

ಪಾಪ, ಯಡ್ಡಿಗೆ ಏನು ಮಾಡುವುದೆಂದೇ ಗೊತ್ತಾಗದೆ ಬಾಯಿಗೆ ಬಂದಂತೆ ಅರಚುತ್ತಾ ಕೂತಿದ್ದಾರೆ. ■



ಭಿನ್ನಮತದ ಹೋರಿ!

ಚುನಾವಣೆ ನಂತರ ಬಿಜೆಪಿಯಲ್ಲಿ ಭಿನ್ನಮತ ಭುಗಿಲೇಳಲಿದೆ ಎಂಬ ಸುದ್ದಿ ಹೊಸದೇನಲ್ಲ. ಆದರೆ ಆ ಭಿನ್ನಮತೀಯರನ್ನು ತಾನೇ ಸಂಘಟಿಸುತ್ತಿದ್ದೇನೆ ಎನ್ನುತ್ತಿರುವ ಹೊನ್ನಾಳಿಯ ಹೋರಿ ರೇಣುಕಾಚಾರ್ಯನ ಹೊಸ ನಾಟಕದ ತುಣುಕೊಂದು ಇಲ್ಲಿದೆ.

"ನಾವೆಲ್ಲಾ - ಅಂದರೆ ಎಂಟು ಹತ್ತು ಶಾಸಕರು - ಎಲ್ಲೋ ಸಭೆ ಸೇರಿ ಯಡ್ಡಿಗೆ ಪಾಠ ಕಲಿಸಲು ನಿರ್ಧರಿಸಿದ್ದೇವೆ" ಎಂದೆಲ್ಲಾ ರೇಣುಕಾಚಾರ್ಯ ಮೊದಲು ಬೊಗಳೆ ಬಿಟ್ಟ. ಇದು ಗೊತ್ತಾಗಿದ್ದೇ ತಡ ಗುಪ್ತಚರ ಇಲಾಖೆಯ ಅಧಿಕಾರಿಯೊಬ್ಬರು ನೇರ ರೇಣುಕಾಚಾರಿಗೆ ಫೋನ್ ಮಾಡಿ "ಏನ್ಸಾರ್, ಮೀಟಿಂಗ್ ಮಾಡ್ತಾ ಇದ್ದೀರಾ" ಎಂದು ಕೇಳಿದರು. ಆಗ ಈ ಬೇಕೂಫ ರೇಣುಕಾಚಾರ್ಯ "ಹೌದು, ನಮ್ಮೊಂದಿಗೆ 10 ರಿಂದ 15 ಶಾಸಕರಿದ್ದಾರೆ" ಎಂದು ಮತ್ತೆ ಬೊಗಳೆ ಬಿಟ್ಟ. "ಎಲ್ಲಿ ಮೀಟಿಂಗ್ ನಡೀತಿದೆ?" ಎಂದು ಅಧಿಕಾರಿ ಕೇಳಿದರೆ "ನಗರದಿಂದ ಹೊರಗೆ ಎಲ್ಲಿಯೋ ನಡೀತಿದೆ" ಎಂದು ಮತ್ತೊಂದು ಹಸಿ ಹಸಿ ಸುಳ್ಳು ಹೇಳಿ ಅವರನ್ನು ಯಾಮಾರಿಸಲು ನೋಡಿದ.

ಕೊನೆಗೆ ಏನಾದರೂ ಆಗಲಿ ಎಂದು ಆ ಗುಪ್ತಚರ ಅಧಿಕಾರಿ ರೇಣುಕಾಚಾರಿಯ ಮೊಬೈಲ್ ನಂಬರ್ ಆ ಕ್ಷಣ ಎಲ್ಲಿದೆ ಎಂದು ಪರೀಕ್ಷಿಸಿದರು. ಆಗ ಅದು ಶಾಸಕರ ಭವನದ ಟವರ್‌ಗೆ ಲಿಂಕ್ ಆಗಿರುವುದು ಗೊತ್ತಾಯಿತು. ಅಲ್ಲಿಗೆ ಹೋಗಿ ನೋಡಿದರೆ ಏನಾಶ್ಚರ್ಯ?!

ತಾನು ನಗರದ ಹೊರಗೆಲ್ಲೋ ಹತ್ತಕ್ಕಿಂತಲೂ ಹೆಚ್ಚು ಶಾಸಕರೊಂದಿಗೆ ಸಭೆ ನಡೆಸುತ್ತಿದ್ದೇನೆ ಎಂದು ಹೇಳಿದ್ದ ರೇಣುಕಾಚಾರಿ ಶಾಸಕರ ಭವನದಲ್ಲೇ ಲಂಚ ಪಡೆದು ಸಿಕ್ಕಿಹಾಕಿಕೊಂಡಿದ್ದ ಕುಖ್ಯಾತಿಯ ಕೆಜಿಎಫ್ ಶಾಸಕ ಸಂಪಂಗಿ ಜೊತೆ ಅದೇ ಶಾಸಕರ ಭವನದಲ್ಲಿ ಇಸ್ಪೀಟು ಆಡುತ್ತಾ, ಹರಟೆಹೊಡೆಯುತ್ತಾ ಕೂತಿದ್ದಾನೆ!

"ಏನ್ ಸಾರ್ ಇದೆಲ್ಲಾ?" ಎಂದು ಅಧಿಕಾರಿ ಕೇಳಿದರೆ "ನಮ್ಮ ದೇವ್ರು ಯಡ್ಡಿ ಅವರು ಆಡಿಸಿದಂತೆ ಆಡುವುದಷ್ಟೇ ನನ್ನ ಕೆಲಸ" ಎನ್ನುವುದೇ ಈ ಹೊನ್ನಾಳಿ ಹೋರಿ!


ಗಣಿಧಣಿಗಳ ಮೇಲೆ ಎಲ್ಲರ ಕಣ್ಣು

ಯಡ್ಡಿ ವಿರುದ್ಧ ಮುನಿಸಿಕೊಂಡಿರುವ ಗಣಿಧಣಿಗಳು ಭಿನ್ನಮತದ ಚಟುವಟಿಕೆಗಳಿಗೆ ಬೆಂಬಲ ನೀಡುತ್ತಾರೆಯೇ, ಯಡ್ಡಿ ನೇತೃತ್ವದ ಸರ್ಕಾರದ ಪತನಕ್ಕೆ ಕಾರಣರಾಗುತ್ತಾರೆಯೇ ಎಂಬುದೀಗ ಬಿಜೆಪಿ ಮಂದಿಗೆ ಮಿಲಿಯನ್ ಡಾಲರ್ ಪ್ರಶ್ನೆಯಾಗಿದೆ.

ಗಡಿಯಲ್ಲಿ ಗಣಿಗಾರಿಕೆ ಕುರಿತು ಜಂಟಿ ಸಮೀಕ್ಷೆಗೆ ಒತ್ತಾಯಿಸಿ ಯಡ್ಡಿ ಕೇಂದ್ರಕ್ಕೆ ಪತ್ರ ಬರೆದಿರುವುದು ರೆಡ್ಡಿ ಬ್ರದರ್ಸ್‌ರನ್ನು ಕೆರಳಿಸಿದೆ. ಹೀಗಾಗಿ ಈ ಬಾರಿಯ ಚುನಾವಣೆಯಲ್ಲಿ ಅವರು ಅಷ್ಟೊಂದು ಆಕ್ಟಿವ್ ಆಗಿ ಕೆಲಸ ಮಾಡಿರಲಿಲ್ಲ. ಅಲ್ಲದೆ ಯಡ್ಡಿ ಗ್ಯಾಂಗ್‌ಗೆ ಸವಾಲೊಡ್ಡುವ ಮಾತುಗಳನ್ನು ಬಹಿರಂಗವಾಗಿಯೇ ಆಡಿದ್ದರು.

ಇದೀಗ ಹೈಕೋರ್ಟ್ ಬೇರೆ ಜಂಟಿ ಸಮೀಕ್ಷೆಗೆ ಆದೇಶ ನೀಡಿದೆ. ಸಚಿವರಾದ ಜನಾರ್ದನ ರೆಡ್ಡಿ, ಕರುಣಾಕರ ರೆಡ್ಡಿ, ಬಿ. ಶ್ರೀರಾಮುಲು ಒಡೆತನದ ಓಬಳಾಪುರಂ ಮೈನಿಂಗ್ ಕಂಪನಿ ಬಳ್ಳಾರಿ ಅರಣ್ಯ ವಲಯದಲ್ಲಿ ಅಕ್ರಮ ಗಣಿಗಾರಿಕೆ ನಡೆಸಿ ಅಂತರರಾಜ್ಯ ಗಡಿ ಗುರುತು ನಾಶಪಡಿಸಿದೆ ಎಂಬ ಆರೋಪ ಕೇಳಿಬಂದಿದೆ. ಈ ಬಗ್ಗೆ 'ತಕ್ಷಣ ಅರಣ್ಯ ಜಂಟಿ ಸಮೀಕ್ಷೆ ನಡೆಸಿ' ಎಂದು ಸ್ಪಷ್ಟವಾಗಿ ಸೂಚಿಸಿದೆ. ಹೀಗಾಗಿ ಇದೇ ತಿಂಗಳ 27ರಿಂದ 30ರ ಹೊತ್ತಿಗೆ ಎರಡೂ ರಾಜ್ಯಗಳ ಅಧಿಕಾರಿಗಳ ತಂಡ ಕೇಂದ್ರ ಸರ್ಕಾರದ ಅಧಿಕಾರಿಗಳ ನೇತೃತ್ವದಲ್ಲಿ ಸಮೀಕ್ಷೆ ನಡೆಸಲಿದ್ದಾರೆ. ಸರಿಯಾಗಿ ಸಮೀಕ್ಷೆ ನಡೆದಲ್ಲಿ ರೆಡ್ಡಿ ಬ್ರದರ್ಸ್ ಮಾಡಿರುವ ಅಕ್ರಮಗಳೆಲ್ಲಾ ಬಯಲಿಗೆ ಬರಲಿವೆ. ಇದರಿಂದ ಆತಂಕಗೊಂಡಿರುವ ರೆಡ್ಡಿ ಬ್ರದರ್ಸ್ ಆಂಧ್ರದ ಮುಖ್ಯಮಂತ್ರಿ ರಾಜಶೇಖರ ರೆಡ್ಡಿಯೊಂದಿಗೆ ಸೇರಿಕೊಂಡು ಬಚಾವಾಗಲು ಹವಣಿಸುತ್ತಿದ್ದಾರೆ.

ಒಂದು ವೇಳೆ ಕೇಂದ್ರದಲ್ಲಿ ಅಧಿಕಾರ ಹಿಡಿದಿರುವ ಕಾಂಗ್ರೆಸ್ ಪಕ್ಷ ರೆಡ್ಡಿಗಳನ್ನು ಬಚಾವು ಮಾಡಿದ್ದೇ ಆದಲ್ಲಿ, ಇದಕ್ಕೆ ಕಾಣಿಕೆಯಾಗಿ ರಾಜ್ಯ ಬಿಜೆಪಿ ಸರ್ಕಾರವನ್ನು ಪತನಗೊಳಿಸಲು ಅವರಿಗೆ ಸೂಚಿಸಬಹುದು. ಆಗ ಗಣಿಧಣಿಗಳು ನೇರವಾಗಿಯೇ ಭಿನ್ನಮತ ಚಟುವಟಿಕೆಗಳಲ್ಲಿ ಭಾಗವಹಿಸಬೇಕಾಗುತ್ತದೆ.



ಈ ಹಿನ್ನೆಲೆಯಲ್ಲಿ ಗಣಿಧಣಿಗಳು ಯಡ್ಡಿಯನ್ನು ಕೆಳಗಿಳಿಸಿ ಜಗದೀಶ್ ಶೆಟ್ಟರ್‌ರನ್ನು ಮುಖ್ಯಮಂತ್ರಿ ಮಾಡುವ ಸಿದ್ಧತೆ ನಡೆಸಿದ್ದಾರಂತೆ. ಶ್ರೀರಾಮುಲು ಉಪ ಮುಖ್ಯಮಂತ್ರಿಯಾಗುತ್ತಾರೆ ಎಂದು ಅವರ ಆತ್ಮೀಯರು ಹೇಳಿಕೊಂಡು ಓಡಾಡುತ್ತಿದ್ದಾರೆ. ಇದಕ್ಕಾಗಿ ಸಕಲ ಸಿದ್ಧತೆಗಳೂ ನಡೆದಿದ್ದು, ಸುಮಾರು 40ರಿಂದ 50 ಶಾಸಕರೊಂದಿಗೆ ರೆಡ್ಡಿಗಳು ನಿರಂತರ ಸಂಪರ್ಕದಲ್ಲಿದ್ದಾರೆ ಎಂಬ ಸುದ್ದಿ ಇದೆ. ಇದು ಯಡ್ಡಿಯ ಮಂಡೆ ಬಿಸಿಯನ್ನು ಇನ್ನಷ್ಟು ಹೆಚ್ಚು ಮಾಡಿದೆ. ಬಳ್ಳಾರಿ ರೆಡ್ಡಿ ಬ್ರದರ್ಸ್ ರಾಜ್ಯ ರಾಜಕೀಯದಲ್ಲಿ ಮತ್ತೊಂದು ಮಹತ್ವದ ಪಾತ್ರ ವಹಿಸುವ ಎಲ್ಲ ಸಾಧ್ಯತೆಗಳಿವೆ.



ಓ ಈಳಂ

ಹುಲಿ ಬಲಿಯಾಗಿದೆ!

ಆದು ನರಭಕ್ಷಕ ಹುಲಿಯಾಗಿತ್ತು ಎನ್ನುತ್ತಿದೆ ಲಂಕಾ ಸರ್ಕಾರ!!

ಆದರೆ ನಿಸರ್ಗ ನಿಯಮ ಬಲ್ಲವರಿಗೆ ನರಭಕ್ಷಣೆಯು ಹುಲಿಯ ಸಹಜಸ್ವಭಾವವಲ್ಲ ಎಂಬುದು ಗೊತ್ತೇ ಇರುತ್ತದೆ.

ಎಲ್‌ಟಿಟಿಇ ನಾಯಕ ವೇಲುಪಿಳ್ಳೈ ಪ್ರಭಾಕರನ್ ತನ್ನನ್ನು ತಮಿಳು ಹುಲಿ ಎಂದೇ ಘೋಷಿಸಿಕೊಂಡಿದ್ದ, ಹುಲಿಯಂತೆಯೇ ಹೋರಾಡಿ ಸತ್ತಿದ್ದಾನೆ.

ಅವನನ್ನು ಕೊಂದ ಲಂಕಾ ಸರ್ಕಾರ ನರಭಕ್ಷಕ ಸಿಂಹ ಅಲ್ಲದೇ ಬೇರೇನೂ ಅಲ್ಲ. ಪ್ರಭಾಕರನ್ ಪರಿಸ್ಥಿತಿಯ ಒತ್ತಡದಿಂದಾಗಿ ಹುಲಿಯಾದವನು. ಆದರೆ ಲಂಕಾ ಸೇನೆ ಹಾಗೂ ಸರ್ಕಾರ ನರಭಕ್ಷಕ ಸಿಂಹವಾಗೇ ಹುಟ್ಟತ್ತೆಂಬುದೇ ಇಡೀ ಲಂಕಾ ಅಂತರ್ಯುದ್ಧದ ಸಾರಾಂಶ.

* * * * * *

ಪ್ರಭಾಕರನ್ ಸ್ವತಂತ್ರ ಈಳಂ ಬಿಟ್ಟು ಬೇರೇನನ್ನೂ ನಂಬುತ್ತಿರಲಿಲ್ಲ,

ಅವನು ಲಂಕಾ ಸರ್ಕಾರವನ್ನು ನಂಬಲಿಲ್ಲ,

ಭಾರತವನ್ನೂ ನಂಬಲಿಲ್ಲ,


ಈ ಅಪನಂಬಿಕೆಗೆ ಕಾರಣವೂ ಇತ್ತೆನ್ನಿ.

ಆದರೆ ಪ್ರಭಾಕರನ್ ತನ್ನ ಈಳಂ ಕನಸು ಈಡೇರಿಸಿಕೊಳ್ಳಲು ವಿಶ್ವ ಸಮುದಾಯದ ಪಾತ್ರವನ್ನೂ ನಂಬಲಿಲ್ಲ,

ಅಮೆರಿಕ ಮೇಲಿನ 9/11 ದಾಳಿಯ ನಂತರ ಬದಲಾದ ಜಾಗತಿಕ ವಿದ್ಯಮಾನಗಳು ಲಂಕಾದ ಸಿವಿಲ್ ವಾರ್ ಮೇಲೂ ಪರಿಣಾಮ ಬೀರುತ್ತವೆ ಎಂಬುದನ್ನು ನಂಬರಲಿಲ್ಲ,

ಲಂಕಾ ತಮಿಳರ ಕಷ್ಟಗಳನ್ನು ಬಗೆಹರಿಸಲು ಶ್ರೀಲಂಕಾದ ಜನರ ಬೆಂಬಲವನ್ನೂ ಪಡೆಯಬೇಕು ಎಂಬುದನ್ನು ಎಂದೂ ನಂಬರಲಿಲ್ಲ, ಅಷ್ಟೇ ಯಾಕೆ, ಟೈಗರ್‌ಗಳಂತೆಯೇ ಲಂಕಾ ತಮಿಳರ ಪರ ಹೋರಾಟಕ್ಕಿಳಿದಿದ್ದ ಇನ್ನಿತರ ತಮಿಳು ಮಿಲಿಟೆಂಟ್ ಹಾಗೂ ಡೆಮಾಕ್ರಟಿಕ್ ಸಂಘಟನೆಗಳಿಗೂ ಸ್ವಲ್ಪ Space ಬಿಟ್ಟರಬೇಕೆಂಬುದನ್ನೂ ನಂಬಿರಲಿಲ್ಲ,

ಆತ ತನ್ನ ಗೆರಿಲ್ಲಾ ಪಡೆಯ Fire Power ಅನ್ನು ಬಿಟ್ಟು ಗುರಿಸಾಧನೆಗಾಗಿ ಬೇರೇನನ್ನೂ ಆಧರಿಸಿರಲಿಲ್ಲ, ನಂಬರಲೂ ಇಲ್ಲ,


ಬಾಲಕ ಪ್ರಭಾಕರನ್

ಕೊಟ್ಟ ಕೊನೆಯದಾಗಿ

ಟೈಗರ್ ಪ್ರಭಾಕರನ್ ತನ್ನ ನೆರಳನ್ನೇ ನಂಬುತ್ತಿರಲಿಲ್ಲ, ಕೊನೆಗೆ ತನ್ನನ್ನು ಸಹ...!

ಈತ ತನ್ನ ಆಪ್ತರಿಗೆ ಒಮ್ಮೆ "ಸ್ವತಂತ್ರ ಈಳಂ ಹೊರತಾಗಿ ಬೇರೆ ಯಾವುದರ ಬಗ್ಗೆಯೂ ನಾನು ಮಾತನಾಡಿದರೆ ಆ ಕ್ಷಣದಲ್ಲೇ ನನ್ನನ್ನೇ ಗುಂಡಿಟ್ಟು ಕೊಲ್ಲಿ" ಎಂದು ಹೇಳಿದ್ದನಂತೆ.

ಅದರಂತೆ ಅಂತಿಮವಾಗಿ ತಮಿಳು ಟೈಗರ್ ಗೆರಿಲ್ಲಾಗಳ ಪ್ರಶ್ನಾತೀತ ನಾಯಕ ವೇಲುಪಿಳ್ಳೈ ಪ್ರಭಾಕರನ ತಲೆಯನ್ನೇ ಗುಂಡಿಟ್ಟು ಉಡಾಯಿಸಲಾಗಿದೆ.

ಈ ಗುಂಡೇಟು ಲಂಕಾ ಸೈನಿಕರಿಂದ ಬಿತ್ತಾ ಇಲ್ಲಾ ಪ್ರಭಾಕರನ್ ತನ್ನ ತಲೆಗೆ ತಾನೇ ಗುಂಡಿಟ್ಟು ಕೊಂಡನಾ ಎಂಬುದಿಲ್ಲಿ ಅಪ್ರಸ್ತುತ.

ಆದರೆ ವಿಶ್ವ ಕಂಡ ಮಹಾನ್ ಸಾಹಸಿ ಹೋರಾಟಗಾರ ಪ್ರಭಾಕರನ್ ಸಾವಿಗೆ ಆತ ಏನೇನನ್ನೆಲ್ಲಾ ನಂಬರಲಿಲ್ಲವೋ ಅವೆಲ್ಲವೂ ಕಾರಣವಾಗಿದೆ.

ಇದೆಲ್ಲದರಾಚೆಗೆ ಒಂದೇ ಒಂದು Striking Fact ಎದ್ದು ಕಾಣುತ್ತಿದೆ. ಪ್ರಭಾಕರನ್ ಏನೇನನ್ನೋ ನಂಬಲ್ಲದಿದ್ದರೂ ಈಳಂ ಕನಸನ್ನು ನಂಬಿದ್ದ, ಅದಕ್ಕಾಗಿ ತನ್ನ ಪ್ರಾಣವನ್ನೇ ಪಣಕ್ಕೊಡ್ಡಿದ್ದ ಆತ ಹೇಡಿ ಅಂದರೆ ಯಾರೂ ನಂಬುತ್ತಿರಲಿಲ್ಲ, ಹಾಗಾಗಿಯೇ ಪ್ರಭಾಕರನ್ ಹತ್ಯೆಗೀಡಾದಾಗ ವಾರ್ ಜೋನಿನಲ್ಲೇ ಇದ್ದ , ಕೈಲಿ ಬಂದೂಕನ್ನು ಹಿಡಿದೇ ಪ್ರಾಣ ತೆತ್ತ,

ಆತ ತಾನು ನಂಬಿದ್ದನ್ನೇ ಬದುಕಿದ, ನಂಬಿದ ಆಶಯಕ್ಕಾಗಿಯೇ ಪ್ರಾಣತೆತ್ತ,


ಇಂಥ ಪ್ರಭಾಕರನ್ ಸತ್ತಾಗ ಅವನಿಗೆ ಐವತ್ನಾಲ್ಕು ವರ್ಷ ವಯಸ್ಸು, ಮದುವೆಯಾಗಿದ್ದ, ಮೂವರು ದೊಡ್ಡ ಮಕ್ಕಳಿದ್ದರು. ಆದರೆ ಈಗ ಅವರ್‍ಯಾರೂ ಬದುಕುಳಿದಿಲ್ಲ, ಪತ್ನಿ ಮದುವದನಿ, ಗಂಡು ಮಕ್ಕಳಾದ ಚಾರ್ಲ್ಸ್ ಅಂಥೋನಿ ಮತ್ತು ಬಾಲಚಂದರ್, ಮಗಳು ದ್ವಾರಕಾ ಎಲ್ಲರೂ ಸತ್ತಿದ್ದಾರೆ. ಬಹುಶಃ ಯುದ್ಧ ವಲಯದಲ್ಲಿ ಸೆರೆ ಸಿಕ್ಕಿರಬಹುದಾದ ಪ್ರಭಾಕರನ್ ಕುಟುಂಬದ ಸದಸ್ಯರನ್ನು ಲಂಕಾ ಸೈನಿಕರು Point Blank ರೇಂಜಿನಲ್ಲಿ ಗುಂಡಿಟ್ಟು ಹತ್ಯೆ ಮಾಡಿ ಶವಗಳನ್ನು ಎಸೆದಿದ್ದಾರೆ. ಇದರರ್ಥ ಇಷ್ಟೆ,

ಮುಂದೆಂದಾದರೂ ಬೇರೆ ಯಾರು ಕೂಡಾ ತಲೆಯೆತ್ತಿ ಈಳಂ ಹೋರಾಟಕ್ಕೆ ನಾಯಕತ್ವ ನೀಡಲು ಅವಕಾಶ ಕೊಡಬಾರದೆಂಬ ಲಂಕಾ ಸರ್ಕಾರದ ರಾಕ್ಷಸ ನಿರ್ಧಾರ ಅದು.

ತನ್ನ ಐವತ್ನಾಲ್ಕು ವರ್ಷದ ಜೀವನದಲ್ಲಿ ಮೂವತ್ತಾರು ವರ್ಷ ಗೆರಿಲ್ಲಾ ಹೋರಾಟಗಾರನಾಗೇ ಬದುಕಿದ ಪ್ರಭಾಕರನ್ ಅಸಲಿಗೆ ಗೆರಿಲ್ಲಾ ಯಾಕಾದ, ಮೂವತ್ತು ಸಾವಿರದಷ್ಟು Standing Army ಕಟ್ಟುವಷ್ಟು ಸಾಮರ್ಥ್ಯ ಅವನಿಗೆ ಹೇಗೆ ಬಂತು? ಭೂಸೇನೆ, ಮಿಲಿಟರಿ ಟ್ಯಾಂಕುಗಳು, ನೌಕಾಪಡೆ, ಕೊನೆಗೆ ಪುಟ್ಟ ಯುದ್ಧ ವಿಮಾನಗಳನ್ನು ಹೇಗೆ ತಂದಿಟ್ಟುಕೊಂಡನೆಂಬ ಕತೆಯೇ ಒಂದು ಸಾಹಸಗಾಥೆ.

ಪ್ರಭಾಕರನ್ ಕರಿಕಾಳನ್ ಆಗಿದ್ದು

ಜಾಫ್ನಾ ಪಟ್ಟಣದ ಬಳಿಯ ವೇಲ್‌ಪಟ್ಟಿ ತುರೈನಲ್ಲಿ 1954ರ ನವೆಂಬರ್ 26ರಂದು ಪ್ರಭಾಕರನ್ ಹುಟ್ಟಿದಾಗ ಶ್ರೀಲಂಕಾದ ತಮಿಳರ ಸ್ಥಿತಿಗತಿ ಈಗಿನಂತೆಯೇ ಹೀನಾಯವಾಗಿತ್ತು, ತಂದೆ ವೆಂಕಟ ದಾಸನ್ ಲಂಕಾ ಸರ್ಕಾರದ ರೆವಿನ್ಯೂ ಇಲಾಖೆಯ ನೌಕರನಾಗಿದ್ದ, ತಾಯಿ ಪಾರ್ವತಿ ಗೃಹಿಣಿ. ಈ ಕುಟುಂಬದ ನಾಲ್ವರು ಮಕ್ಕಳ ಪೈಕಿ ಪ್ರಭಾಕರನೇ ಕಿರಿಯ. ಒಡಹುಟ್ಟಿದವರ ಪೈಕಿ ಅಕ್ಕ ವಿನೋದಿನಿ ಕೆನಡಾದಲ್ಲಿದ್ದಾಳೆ. ಇನ್ನೊಬ್ಬ ಅಕ್ಕ ಹಾಗೂ ಅಣ್ಣ ಡೆನ್ಮಾರ್ಕ್ ವಾಸಿಗಳು. ತಂದೆ-ತಾಯಿ ಇದುವರೆಗೆ ತಮಿಳುನಾಡಿನ ತಿರುಚ್ಚಿಯಲ್ಲಿ ವಾಸವಿದ್ದವರು ತೀರ ಮೊನ್ನೆ ಮೊನ್ನೆ ಲಂಕಾಗೆ ವಾಪಸ್ಸಾಗಿದ್ದರು. ಅವರ ಗತಿ ಏನಾಗಿದೆಯೋ ಗೊತ್ತಾಗಿಲ್ಲ,



2005ರಲ್ಲಿ ಟೈಗರ್‌ಗಳ ವಶದಲ್ಲಿದ್ದ ಪ್ರದೇಶ

2009 ರಲ್ಲಿ ಸರ್ವನಾಶ

ವೇಲ್‌ಪಟ್ಟಿತುರೈನ ಸೀತಾಂಪರಂ ಸ್ಕೂಲಿನಲ್ಲಿ 10ನೇ ಕ್ಲಾಸಿನವರೆಗೂ ಓದಿದ ಪ್ರಭಾಕರನ್ ನಂತರ ಶಾಲೆಗೆ ಹೋಗಲಿಲ್ಲ, ಅದಕ್ಕೆ ಮುಖ್ಯ ಕಾರಣ ಲಂಕಾ ಸರ್ಕಾರದ ಭಾಷಾ ನೀತಿ. ಸಿಂಹಳ ಭಾಷೆಯಲ್ಲಿ ಮಾತ್ರ ಉನ್ನತ ಶಿಕ್ಷಣಕ್ಕೆ ಅವಕಾಶ ಎಂದು ಆಗಿನ ಜಯವರ್ಧನ ಸರ್ಕಾರ 1971ರ ಸುಮಾರಿಗೆ ಹೊಸ ಕಾನೂನು ಜಾರಿ ಮಾಡಿತ್ತು, ಆದರಿಂದಾಗಿ ತಮಿಳು ಮಾತೃಭಾಷೆಯಲ್ಲೇ ಪ್ರಾಥಮಿಕ, ಪ್ರೌಢಶಿಕ್ಷಣ ಪೂರೈಸಿದ್ದ ಲಕ್ಷಾಂತರ ತಮಿಳು ಯುವ ಜನತೆಗೆ ಉನ್ನತ ಶಿಕ್ಷಣದ ಬಾಗಿಲು ಮುಚ್ಚಿಹೋಯಿತು. ಅವತ್ತಿನ ತಮಿಳು ಬಾಹುಳ್ಯವಿದ್ದ ಪೂರ್ವ ಹಾಗೂ ಉತ್ತರ ಭಾಗದ ಶ್ರೀಲಂಕಾದ ತಮಿಳರಿಗೆ ಒಳ್ಳೆ ಇಂಗ್ಲಿಷ್ ಕಲಿತು ಕೆನಡಾಗೆ ಹೋಗಿ ಕೆಲಸ ಹುಡುಕಿಕೊಳ್ಳುವುದು ಹೊರತುಪಡಿಸಿ ಬೇರೆ ಆಯ್ಕೆಯೇ ಇರಲಿಲ್ಲ, ಲಂಕಾ ಸರ್ಕಾರ ಮಿಲಿಟರಿ, ಪೊಲೀಸು ಇನ್ನಿತರ ಯಾವ ಸರ್ಕಾರಿ ಇಲಾಖೆಗಳಲ್ಲೂ ತಮಿಳರು ಕಾಲಿಡದಂತೆ ನೋಡಿಕೊಂಡಿತ್ತು,

ಇವೆಲ್ಲಾ ಅರ್ಥವಾಗುವ ಮುನ್ನವೇ ಪ್ರಭಾಕರನ್ ಅನುಭವಕ್ಕೆ ಬಂದಿದ್ದು ಜನಾಂಗೀಯ ತಾರತಮ್ಯ ಹಾಗೂ ಅವಮಾನಗಳು. ತನ್ನ ಅಪ್ಪನೊಂದಿಗೆ ಲಂಕಾದ ಅನೇಕ ಕಡೆ ಹೋಗಿಬರುತ್ತಿದ್ದಾಗ, ಒಮ್ಮೆ ಕೊಲಂಬೋಗೂ ಹೋಗಿದ್ದಾಗ ಈ ಕಹಿ ಅನುಭವಗಳು ಆವನಿಗಾದವು. ಸಿಂಹಳೀಯರು ಯಾರೇ ತಮಿಳರನ್ನು ನೋಡಿದರೂ ಕುಂಡೆ ಮೇಲೊದ್ದು "ಏನೋ... ಲೇಯ್... ಯಾಕೋ?" ಎನ್ನುವಂತೆ ವರ್ತಿಸುತ್ತಿದ್ದರು. ತಮಿಳರ ಮುಖದರ್ಶನ ಅಪಶಕುನ ಎನ್ನುವಂತೆ ಎಗರಾಡುತ್ತಿದ್ದರು. ಆದರೆ ಸಿಂಹಳೀಯರು ಹಾಗೆ ತಿಮಿರು ತೋರಿಸಲು ಇಡೀ ಶ್ರೀಲಂಕಾವೇನೂ ಅವರಪ್ಪನ ಮನೆಯ ಆಸ್ತಿಯಾಗಿರಲಿಲ್ಲ, ಸಿಂಹಳೀಯರಂತೆಯೇ ತಮಿಳರು ಕೂಡಾ ಲಂಕಾದ ಮೂಲ ನಿವಾಸಿಗಳೇ ಆಗಿದ್ದರು. ತಲೆತಲೆಮಾರುಗಳಿಂದ ಅಲ್ಲೇ ಬದುಕಿ ಬಾಳಿ, ರಾಜ್ಯಗಳನ್ನು ಕಟ್ಟಿ ಆಳಿದ್ದರು. ಜನಸಂಖ್ಯೆಯ ದೃಷ್ಟಿಯಿಂದ ಸಿಂಹಳೀಯರು ಮೆಜಾರಿಟಿ, ತಮಿಳರು ಮೈನಾರಿಟಿ ಎಂಬುದನ್ನು ಬಿಟ್ಟರೆ ಲಂಕಾ ದ್ವೀಪ ಎಲ್ಲರಿಗೂ ಸೇರಿದ್ದ ತಾಯ್ನೆಲವಾಗಿತ್ತು,

ಆದರೆ 1948ರಲ್ಲಿ ಬ್ರಿಟಿಷರಿಂದ ಸ್ವಾತಂತ್ರ್ಯ ಸಿಕ್ಕಿದೊಡನೆ ಅಧಿಕಾರ ಹಿಡಿದ ಸಿಂಹಳೀಯರಿಗೆ ತಮಿಳರನ್ನು ಸಮಾನವಾಗಿ ಕಂಡು, ಜೊತೆಗೆ ಕರೆದೊಯ್ಯಬೇಕೆಂಬ ಉದಾರ ಭಾವನೆ ಬರಲೇ ಇಲ್ಲ, ಅದರ ಬದಲಾಗಿ ಸರ್ಕಾರ, ಸೇನೆ, ಬೌದ್ಧ ಬಿಕ್ಕುಗಳು ಕೊನೆಗೆ ಸಾಮಾನ್ಯ ಸಿಂಹಳೀಯರು ಕೂಡಾ ತಮಿಳರಿಗೆ ಹಿಂಸೆ ನೀಡಲು ಆರಂಭಿಸಿದರು. ತಮಿಳರನ್ನು ತುಳಿಯುವ ಹೊಸ ಕಾನೂನುಗಳನ್ನೇ ಜಾರಿಗೆ ತಂದರು.

ಪ್ರಭಾಕರನ್ ದೊಡ್ಡವನಾಗುವ ಹೊತ್ತಿಗಾಗಲೇ ತಮಿಳರ ಪ್ರತಿರೋಧವೂ ಶುರುವಾಗಿದ್ದವು. ಆದರೆ ಅದೆಲ್ಲಾ ಬಹುತೇಕ ಶಾಂತಿಯುತವಾಗಿರುತ್ತಿದ್ದವು. ಕೆಲವೊಮ್ಮೆ ಸಣ್ಣಪುಟ್ಟ ಹಿಂಸಾಚಾರಗಳೂ ನಡೆದದ್ದುಂಟು. ಅಂತಹ ಘಟನೆಗಳು ನಡೆದಾಗಲೆಲ್ಲಾ ಸಿಂಹಳ ಸರ್ಕಾರಿ ಬೆಂಬಲಿತ ಪ್ರತಿ ಹಿಂಸೆಗಳು ತಮಿಳರ ವಿರುದ್ಧ ನಡೆಯುತ್ತಿದ್ದವು.

ಆಗೊಮ್ಮೆ ತಮಿಳರ ಕೆಲಮಕ್ಕಳನ್ನು ಕುದಿಯುವ ಟಾರ್ ಡ್ರಂನೊಳಗೆ ಮುಳುಗಿಸಿ ಕೊಂದ ಭಯಾನಕ ಘಟನೆಗಳು ನಡೆದವು.

ಆಗಿನ್ನೂ ಎಳೆಯ ಯುವಕನಾಗಿದ್ದ ಪ್ರಭಾಕರನ್‌ನನ್ನು ಇವು ಘಾಸಿಗೊಳಿಸಿದ್ದವು. ಅವನು ಹದಿನಾರನೇ ▶▶▶

ಹುಲಿಯ ಸಂಸಾರ

ಪ್ರಭಾಕರನ್ ಬದುಕಿನ ಇನ್ನೊಂದು ಅಧ್ಯಾಯ...




ಲಂಕಾದ ಫ್ಯಾಸಿಸ್ಟ್ ಸೇನೆ ಕೇವಲ ಟೈಗರ್ ಪ್ರಭಾಕನ್‌ನನ್ನು ಮಾತ್ರವಲ್ಲ ಅವನ ಇಡೀ ಕುಟುಂಬವನ್ನೇ ಕೊಚ್ಚಿಹಾಕಿದೆ.

ಪ್ರಭಾಕರನ್‌ನ ಬದುಕಿನ ಗುರಿ ಮತ್ತು ಆಪತ್ತು ಏನೆಂದು ತಿಳಿದಿದ್ದೇ ಪ್ರೀತಿಸಿ ಮದುವೆಯಾಗಿದ್ದ ಜಾಫ್ನಾ ಯೂನಿವರ್ಸಿಟಿಯ ಮದುವದನಿಯೂ ಈಗ ಗುಂಡೇಟಿಗೆ ಬಲಿಯಾಗಿದ್ದಾಳೆ. ಮಗ ಬಾಲಚಂದರ್ ಹಾಗೂ ದ್ವಾರಕಾ ಎಂಬ ಹೆಣ್ಣುಮಗಳಿಗೂ ಲಂಕಾ ಸೇನೆ ಮರಣದಂಡನೆ ನೀಡಿದೆ. ಇನ್ನೊಬ್ಬ ಮಗ ಚಾರ್ಲ್ಸ್ ಆಂತೋಣಿ ಯುದ್ಧ ಭೂಮಿಯಲ್ಲೇ ತಂದೆಯ ಜೊತೆಗೆ ನಿಂತು ಹೋರಾಡಿ ಪ್ರಾಣ ನೀಡಿದ್ದಾನೆ.


ಪ್ರಭಾಕರನ್‌ನ ಖಾಸಗಿ ಬದುಕಿನ ಬಗ್ಗೆ ಜಾಸ್ತಿ ವಿವರಗಳು ಸಿಗುವುದಿಲ್ಲ. ಮದುವದನಿ ಜಾಫ್ನಾದಲ್ಲೊಮ್ಮೆ ಅಮರಣಾಂತ ಉಪವಾಸ ಕುಳಿತು ಪ್ರಭಾಕರನ್ ಗಮನ ಸೆಳೆದಿದ್ದಳು. ನಂತರ ಸ್ನೇಹಿತರ ನೆರವಿನಿಂದ ತಮಿಳುನಾಡಿನ ತಿರುಪುರದಲ್ಲಿ ಅವರ ಮದುವೆ ನಡೆದಿತ್ತು, ಮಲ್ಲೈತ್ತೀವು ಪ್ರಾಂತ್ಯದ ಅರಣ್ಯದೊಳಗೆ ನಿರ್ಮಿಸಿಕೊಂಡಿದ್ದ ಬಂಕರ್‌ಗಳು ಅವನ ಕಚೇರಿಯಾಗಿದ್ದರೆ ಇನ್ನೊಂದು ಅಚ್ಚುಕಟ್ಟಾದ ಮನೆಯೂ ಟೈಗರ್‌ಗಿತ್ತು, ಅಲ್ಲಿ ಅವನು ತನ್ನ ಮಕ್ಕಳೊಂದಿಗೆ ಆಟವಾಡುತ್ತಿರುವ, ನೀರಾಟವಾಡುವ, ಮಗನಿಗೆ ಬರ್ತಡೇ ಕೇಕ್ ತಿನ್ನಿಸುತ್ತಿರುವ ಫೋಟೋಗಳಿವೆ. ಈ ಮಕ್ಕಳು ಈಳಂ ದೇಶದ ಯುವರಾಜ-ಯುವ ರಾಜಕುಮಾರಿಯರೋ ಎಂಬಂತೆ ಅವರ ತಲೆಗೆ ಕಿರೀಟವಿರಿಸಿ ಸಂತೋಷಪಡುತ್ತಿದ್ದ ಪ್ರಭಾಕರನ್ ನಿರ್ಭಾವುಕ ಮನುಷ್ಯನೇನೂ ಆಗಿರಲಿಲ್ಲ,

ಯುದ್ಧ ರಂಗದಲ್ಲಿ ಸಿಕ್ಕಿಹಾಕಿಕೊಂಡಿದ್ದ ಈ ಮಕ್ಕಳಿಗೆ ಕೊನೆಗೂ ಬದುಕುಳಿಯುವ ಅವಕಾಶವನ್ನು ನೀಡಲು ರಾಜಪಕ್ಷೆ ನಿರಾಕರಿಸಿ ಕೊಲ್ಲಿಸಿದ್ದಾನೆ.

ಅವರು ಪ್ರಭಾಕರನ್ ಮಕ್ಕಳೆಂಬ ಒಂದೇ ಕಾರಣಕ್ಕೆ.







ಸೇನಾಪಡೆಯೊಂದಿಗೆ... ಗಸ್ತು ತಿರುಗುತ್ತಿರುವ ಸೀ-ಟೈಗರ್ಸ್... ತೂಗುಯ್ಯಾಲೆಯಲ್ಲಿ.... ಮದ್ರಾಸ್‌ನಲ್ಲಿ ರಾ ಏಜಂಟರ ರಕ್ಷಣೆಯಲ್ಲಿ....

ಎಷ್ಟಿನಲ್ಲೇ ತಮಿಳ್ ಮಾನವರ್ ಇರವು (ತಮಿಳು ...ರ್ಥಿ ಸಂಘಟನೆ) ಸೇರಿಕೊಂಡ. ಆಗಿನ್ನೂ ಚಿಕ್ಕವನಾಗಿದ್ದ ...ನ 'ತಂಬಿ' ಎನಿಸಿಕೊಂಡ. ಬರೀ ಪ್ರತಿಭಟನೆಯಿಂದ ...ಬದಲಾಗದೆಂದು ಮಿಲಿಟೆಂಟ್ ಪ್ರತಿರೋಧದ ...ಯೋಚಿಸಲಾರಂಭಿಸಿದ. ಒಮ್ಮೆ ಗೆಳೆಯರನ್ನು ಜೊತೆಗೆ ...ಮಕೊಂಡು ಲಂಕಾ ಸರ್ಕಾರಿ ಬಸ್ಸಿಗೆ ಬೆಂಕಿಯಿಟ್ಟ ...ಾವ ಪೊಲೀಸರು ಈ 'ತಂಬಿ'ಯನ್ನು ಹುಡುಕಿ ...ಡು ಮನೆಗೇ ಬಂದರು.

ಆಗ ಪ್ರಭಾಕರನ್ ಮನೆ ಬಿಟ್ಟ!

ಹೀಗೆ.. ಇಡೀ ಶ್ರೀಲಂಕಾ ದೇಶ, ಅಲ್ಲಿನ ಸರ್ಕಾರ ...ದಿನ 30 ವರ್ಷಗಳ ಕಾಲ ನೆಮ್ಮದಿ ಕಳೆದುಕೊಂಡು



ಮೊದಲ ಹುತಾತ್ಮ ದಿಲೀಪನ್....



ಟೈಗರ್‌ಗಳ ಸಮಾಧಿಗಳು

...ತಪಿಸುವಂತೆ, ಪ್ರಭಾಕರನ್ ಟೈಗರ್ ಗೆರಿಲ್ಲಾ ಆಗುವಂತೆ ...ಡಿದ್ದೇ ಸಿಂಹಳೀಯರು.

ಅವತ್ತು ಮನೆ ಬಿಟ್ಟ ತಂಬಿ ವೇಲ್‌ಪಟ್ಟಿತುರೈನ ...ತೆಗಾರರೊಂದಿಗೆ ಬಾಂಬು-ಬಂದೂಕಿನ ಹೋರಾಟ ...ದ. ಒಮ್ಮೆ ಗ್ರೆನೇಡ್ ಸ್ಫೋಟಿಸಿ ಅವನ ಕಾಲು ...ಟ್ಟು ಕರ್ರಗಾಯಿತು. ಜೊತೆಗಾರರು ಆ ಘಟನೆಯ ...ನಲ್ಲಿ ತಂಬಿ ಪ್ರಭಾಕರನ್‌ನನ್ನು ಕರಿಕಾಳನ್ (ಕಪ್ಪು ...ನವ) ಎಂದರು.

ಕರಿಕಾಳನ್ ಟೈಗರ್ ಪಡೆ ಕಟ್ಟಿದ

...ಪ್ರಭಾಕರನ್ ಕಾಣಿಸಿಕೊಳ್ಳುವವರೆಗೂ ...ಾ ತಮಿಳರಲ್ಲಿ ಪ್ರತ್ಯೇಕ ಈಳಂ ದೇಶದ ...ದು ಅಷ್ಟು ದೊಡ್ಡಮಟ್ಟದಲ್ಲಿರಲಿಲ್ಲ. ...ಳರಿಗೆ ಸಮಾನ ಅವಕಾಶ, ಘನತೆ, ...ಮಾನದ ಬದುಕೇ ಅವರ ಪ್ರಧಾನ ...ಡಿಕೆಗಳಾಗಿದ್ದವು. ಅವತ್ತಿನ ತಮಿಳು ನಾಯ... ಅಷ್ಟನ್ನೇ ಕೇಳುತ್ತಿದ್ದರು. ಆದರೆ ಯಾವಾಗ ...ಂ ವಿಚಾರ ಮುಂಚೂಣಿಗೆ ಬಂತೋ ಸೌಮ್ಯವಾದಿಗಳೂ ಮೂಲೆಗುಂಪಾದರು. TELO, ...OTE, EPRLF ಎಂಬ ಮಿಲಿಟೆಂಟ್ ತರಹದ



ಮೊದಲ ಬಲಿ ದೊರೆಯಪ್ಪನ್

ಗುಂಪುಗಳು ಆಕ್ಟೀವ್ ಆದವು. ಕೆಲವರು ಲೆಬನಾನ್‌ಗೂ ಹೋಗಿ ಗೆರಿಲ್ಲಾ ತರಬೇತಿ ಪಡೆದು ಬಂದರು. ಸ್ವತಃ ಪ್ರಭಾಕರನ್ ಯಾನೆ ತಂಬಿ ಕರಿಕಾಳನ್ ನ್ಯೂ ತಮಿಳ್ ಟೈಗರ್ಸ್ ಗುಂಪು ಕಟ್ಟಿದ. ಉಳಿದ ಯಾವ ಮಿಲಿಟೆಂಟ್‌ರೂ ಇಟ್ಟುಕೊಂಡಿರದಿದ್ದ ಟೈಗರ್ಸ್ ಹೆಸರು ಚಾಲ್ತಿಗೆ ಬಂದಿದ್ದೇ ಹೀಗೆ. ಉಳಿದವರು ತಮಿಳು ಈಳಂ, ಲಿಬರೇಷನ್ ಎಂಬ ಪದಗಳನ್ನು ಬಳಸುತ್ತಿದ್ದರಾದರೂ 'ಟೈಗರ್' ಎಂದಲ್ಲ. ಆದರೆ ಪ್ರಭಾಕರನ್ ರೋಷಾವೇಶ ಹಾಗೂ ಬದ್ಧತೆ ಎಷ್ಟಿತ್ತೆಂದರೆ ಇಡೀ ತಮಿಳು ಜನಾಂಗೀಯರು ಈಳಂಗಾಗಿ ಹುಲಿಗಳಂತೆ ಹೋರಾಡಬೇಕು, ಶತ್ರುಗಳ ಗುಂಡಿಗೆ ಬಗೆದು ರಕ್ತ ಕುಡಿಯುವಂತಿರಬೇಕು ಎಂಬ ಹಠ-ಕೆಚ್ಚು ಅದು.

ಮುಂದೆ ಪ್ರಭಾಕರನ್ ಮೂವತ್ತು ಸಾವಿರದಷ್ಟು ಹುಲಿಗಳ ಗೆರಿಲ್ಲಾ ಸೇನೆ ಕಟ್ಟಿದ. ಅವರಲ್ಲಿ ನರಿಯ ಅಳ್ಳೆದೆ ಹೊಂದಿದವರು ನಿಜಕ್ಕೂ ಇರಲಿಲ್ಲ. ಅವರ ಛಲ, ಧೈರ್ಯ ಸಾಹಸಗಳಿಗೆ ತಕ್ಕಹಾಗೆ 'ಲಿಬರೇಷನ್ ಟೈಗರ್ಸ್ ಆಫ್ ತಮಿಳ್ ಈಳಂ' ಎಂದು ಹೆಸರಿಟ್ಟ. ಅಷ್ಟರಲ್ಲಾಗಲೇ ಪೊಟ್ಟು ಅಮ್ಮಾನ್, ಸೂಸೇ, ಕರುಣಾ, ಜಾಫ್ನಾ ಕಿಟ್ಟು, ಆಂಟೋನಿ, ಬಾಲಸಿಂಗಮ್ ಜೊತೆಗೂಡಿದ್ದರು.

ಭಾರತದ RAW (ರೀಸರ್ಚ್ ಅಂಡ ಅನಾಲಿಸೀಸ್ ವಿಂಗ್) ಎಂಬ ಗೂಢಚರ್ಯೆ ಸಂಸ್ಥೆ ಎಲ್‌ಟಿಟಿಇ ಸೇರಿದಂತೆ ಎಲ್ಲಾ ತಮಿಳು ಮಿಲಿಟೆಂಟ್ ಗುಂಪುಗಳಿಗೂ ಶಸ್ತ್ರಾಸ್ತ್ರ ಒದಗಿಸಿ ಇಂಡಿಯಾದ ಈಶಾನ್ಯ ಭಾಗ, ಉತ್ತರ ರಾಜ್ಯಗಳ ಕಾಡುಗಳಲ್ಲಿ, ತಮಿಳುನಾಡಿನಲ್ಲಿ ತರಬೇತಿ ಕೊಡಿಸಿ ಲಂಕಾ ಸರ್ಕಾರದ ವಿರುದ್ಧ ಛೂ ಬಿಟ್ಟಿತ್ತು.

ಆದರೆ ಪ್ರಭಾಕರನ್ ಮಹತ್ವಾಕಾಂಕ್ಷೆ ದೊಡ್ಡದಿತ್ತು. ಅವನಿಗೆ ಈಳಂ ರಚನೆ ತುರ್ತಾಗಿ ಆಗಬೇಕಿತ್ತು. ಹಾಗಾಗಿ ತಮಿಳರ ಬಲ ಹಲವು ಹತ್ತು ಕಡೆ ಚೆದುರಿ ಹೋಗದಂತೆ; ಬದಲಾಗಿ ಒಂದೇ ದಿಕ್ಕಿನತ್ತ, ಒಂದೇ ಸಂಘಟನೆಯಲ್ಲಿ ಮೇಳೈಸಲಿ ಎಂದು ಯೋಚಿಸಿದ. ಅದರ ಪರಿಣಾಮವಾಗಿ TELO, EPRLF, PLOTEನ ತಮಿಳು ಹೋರಾಟಗಾರರನ್ನು ನಿರ್ದಯವಾಗಿ ಕೊಲ್ಲಿಸಿ ಬಿಟ್ಟ.

ಅದು ಅವಿವೇಕದ ಕೆಲಸವಾಗಿತ್ತು. ಇದಕ್ಕೂ ಮೊದಲು ಲಂಕಾ ತಮಿಳರು ಸಶಸ್ತ್ರ ಹೋರಾಟಕ್ಕಿಳಿಯಲಿ ಎಂದುಕೊಂಡು ಶಾಂತಿಯುತ ಮಾರ್ಗದಲ್ಲಿದ್ದವರನ್ನು ಬೆದರಿಸಿ ಓಡಿಸಿದ್ದ. 1975ರ ಜುಲೈ 17ರಂದು ಜಾಫ್ನಾ ಮೇಯರ್ ಆಗಿದ್ದ ದೊರೆಯಪ್ಪನನ್ನು ತಾನೇ ಗುಂಡಿಟ್ಟು ಕೊಂದಿದ್ದ.

ಹೀಗೆ ಮೊದಲ ಹಂತದಲ್ಲಿ ಶಾಂತಿಮಾರ್ಗಗಳನ್ನು ನಿವಾರಿಸಿದ ಪ್ರಭಾಕರನ್ ನಂತರ ಎಲ್‌ಟಿಟಿಇ ಹೊರತು ಪಡಿಸಿ ಉಳಿದ ಮಿಲಿಟೆಂಟ್ ಸಂಘಟನೆಗಳ ಸದ್ದನ್ನು ಅಡಗಿಸಿಬಿಟ್ಟ.

ಕೊನೆಗೆ ನೇರ ಮುಖಾಮುಖಿ ಲಂಕಾ ಸೇನೆ ಹಾಗೂ ಎಲ್‌ಟಿಟಿಇಗಳ ನಡುವೆ ಶುರುವಾಯಿತು. ಶ್ರೀಲಂಕಾ ಭೌಗೋಳಿಕವಾಗಿ ಹಾಗೂ ಭಾವನಾತ್ಮಕವಾಗಿ ಎರಡಾಗಿ ವಿಭಜನೆಯಾಗಿಹೋಯಿತು. 1980ರಿಂದ ಮೊನ್ನೆಯತನಕ ನಾಲ್ಕು ಘೋರ ಈಳಂ ಯುದ್ಧಗಳಾದವು. 30 ಸಾವಿರದಷ್ಟು ತಮಿಳು ಗೆರಿಲ್ಲಾಗಳು ಈಳಂಗಾಗಿ ಪ್ರಾಣ ತೆತ್ತರು. ಲಂಕಾ ಸೇನೆಯಲ್ಲೂ ಸಹಸ್ರಾರು ಸೈನಿಕರು ಸತ್ತರು. ಎಲ್‌ಟಿಟಿಇಯು Field war ನಡೆಸುತ್ತಿದ್ದ ಜಗತ್ತಿನ ಏಕೈಕ ಮಿಲಿಟೆಂಟ್ ಸಂಘಟನೆಯಾಗಿತ್ತು. ಒಂದು ಹಂತದಲ್ಲಿ ಲಂಕಾದ ಮೂರನೇ ಒಂದು ಭಾಗ ಟೈಗರ್‌ಗಳ ಕಂಟ್ರೋಲಿಗೆ ಬಂದಿತು. ಅದಕ್ಕಿದ್ದ ಇನ್ನೊಂದು ಪ್ರಧಾನ ಕಾರಣ ಏನೆಂದರೆ ಸ್ವತಃ ಲಂಕಾ ಸೇನೆ ದುರ್ಬಲವಾಗಿತ್ತು. ದಕ್ಷಿಣ ಏಷಿಯಾದ ಬಡ ದೇಶಗಳಲ್ಲಿ ಒಂದಾದ ಶ್ರೀಲಂಕಾಗೆ ಸುಸಜ್ಜಿತ ಸೇನೆ ಇರಲಿಲ್ಲ. ಅಸಲಿಗೆ ಲಂಕಾ ಸೈನಿಕರಿಗೆ ಯುದ್ಧದ ಅನುಭವವೇ ಇರಲಿಲ್ಲ. ಅತೀ



ದೂರವಾದ ಸ್ನೇಹಿತರು ಕರುಣಾ, ಬಾಲಸಿಂಗಂ, ತಮಿಳು ಸೆಲ್ವಂ

ಮುಖ್ಯವಾಗಿ ಲಂಕಾ ಸರ್ಕಾರಕ್ಕಾಗಲೀ, ಸೇನೆಗಾಗಲಿ ನೈತಿಕತೆಯೂ ಇರಲಿಲ್ಲ.


ಈ ಅವಧಿಯಲ್ಲಿ ಎಲ್‌ಟಿಟಿಇ ಬಲೂನಿನಂತೆ ಊದಿಕೊಂಡು ಬೆಳೆಯಿತು. ಯುರೋಪ್, ಅಮೆರಿಕ, ಕೆನಡಾ, ಮಲೇಷಿಯಾ, ಸಿಂಗಾಪುರ್, ಇಂಡಿಯಾದಲ್ಲಿದ್ದ ಲಕ್ಷಾಂತರ ತಮಿಳರು ಎಲ್‌ಟಿಟಿಇಗೆ ಹಣ ಸಂಗ್ರಹಿಸಿ ಕಳುಹಿಸತೊಡಗಿದರು. ಈ ಹಣ ಬಳಸಿ ಪ್ರಭಾಕರನ್ ಯುರೋಪ್, ಥೈಲ್ಯಾಂಡ್, ಬರ್ಮಾ, ಆಫ್ರಿಕಾ ದೇಶಗಳಿಂದ

▶▶▶12

ಜನರಲ್ ಶರತ್ ಫೊನ್ಸೆಕಾ ಕೊನೆಗೂ ಸೇಡು ತೀರಿಸಿಕೊಂಡ

ಲಂಕಾ ಸೇನಾಧಿಪತಿ ಜನರಲ್ ಶರತ್ ಫೊನ್ಸೆಕಾ ತಮಿಳು ಟೈಗರ್‌ಗಳ ಭೀಕರ ಸೋಲಿನ ರೂವಾರಿ. ಜಾಫ್ನಾ ಮುತ್ತಿಗೆಯಲ್ಲಿ ನೂರಾರು ಲಂಕಾ ಸೈನಿಕರ ಪ್ರಾಣ ಉಳಿಸಿದ ಫೊನ್ಸೆಕಾಗೆ 'ಮಿಡ್‌ನೈಟ್ ಎಕ್ಸ್‌ಪ್ರೆಸ್' ಎಂಬ ಅಡ್ಡಹೆಸರು ಇದೆ.

ಫೊನ್ಸೆಕಾ ಲಂಕಾ ಸೇನಾ ಮುಖ್ಯಸ್ಥನಾದ ನಂತರ 2006ರ ಏಪ್ರಿಲ್ 25 ರಂದು ತಮಿಳು ಆತ್ಮಹತ್ಯಾ ಬಾಂಬರ್ ಏಟಿಗೆ ಸಿಕ್ಕು ಸಾವಿನ ಹತ್ತಿರ ಹೋಗಿ ಬದುಕಿಕೊಂಡಿದ್ದ. ಲಂಕಾ ಮಿಲಿಟರಿ ಹೆಡ್‌ಕ್ವಾರ್ಟರ್ಸ್‌ನ ಆಸ್ಪತ್ರೆಗೆ ಚೆಕ್‌ಅಪ್‌ಗೆಂದು ಬಂದುಹೋಗುತ್ತಿದ್ದ ಗರ್ಭಿಣಿ ಮಹಿಳೆಯೊಬ್ಬಳು ಒಂದು ದಿನ ಬೆಳಿಗ್ಗೆ ಫೊನ್ಸೆಕಾನ ಮೋಟಾರ್ ಕೇಡಿನೆದರು ಅಡ್ಡ ನಿಂತು ತನ್ನನ್ನೇ ಸಿಡಿಸಿಕೊಂಡಿದ್ದಳು.



ಆಕೆ ಟೈಗರ್ ಸೂಯಿಸೈಡ್ ಬಾಂಬರ್!

ಆವತ್ತಿನ ದಾಳಿಯಲ್ಲಿ ಫೊನ್ಸೆಕಾ ಬದುಕಿಕೊಂಡನಾದರೂ ಅವನ ಸುತ್ತ ಇದ್ದವರಲ್ಲಿ ಒಂಬತ್ತು ಮಂದಿ ಛಿದ್ರವಾಗಿದ್ದರು. ಅಂದು ಫೊನ್ಸೆಕಾ ಎಷ್ಟು ತೀವ್ರವಾಗಿ ಗಾಯಗೊಂಡಿದ್ದನೆಂದರೆ ಆತನನ್ನು ಕೂಡಲೆ ಮಲೇಷಿಯಾದ ಆಸ್ಪತ್ರೆಗೆ ವಿಮಾನದಲ್ಲಿ ಸಾಗಿಸಿ ಆತನ ಪ್ರಾಣವನ್ನು ಉಳಿಸಿಕೊಳ್ಳಲಾಗಿತ್ತು.

ಟೈಗರ್‌ಗಳು ಒಬ್ಬನನ್ನು ಗುರಿಯಾಗಿಸಿಕೊಂಡು ಮುಗಿಸಲು ತೀರ್ಮಾನಿಸಿದರೆ ಯಾವ ಮಟ್ಟಕ್ಕೂ ಹೋಗಲು ತಯಾರೆಂಬುದು ಫೊನ್ಸೆಕಾ ಮೇಲಿನ ಬಾಂಬ್ ದಾಳಿಯಿಂದ ಇನ್ನಷ್ಟು ದೃಢಪಟ್ಟಿತ್ತು.

ಫೊನ್ಸೆಕಾ ತಮ್ಮ ಏಟಿಗೆ ಸಿಗಬೇಕೆಂದರೆ ಮಿಲಿಟರಿ ಕೇಂದ್ರ ಕಚೇರಿ ಹೊಕ್ಕಬೇಕು. ಅಲ್ಲೊಂದು ಆಸ್ಪತ್ರೆ ಇದೆ. ಗರ್ಭಿಣಿ ಮಹಿಳೆಯರಿಗೆ ಪ್ರವೇಶ ಸುಲಭ. ಹಾಗಾಗಬೇಕೆಂದರೆ ಒಂದೋ ಗರ್ಭಿಣಿಯಾಗಿರುವಾಕೆ ಸೂಯಿಸೈಡ್ ಬಾಂಬರ್ ಆಗಲು ತಯಾರಾಗಬೇಕು. ಇಲ್ಲಾ ಸೂಯಿಸೈಡ್ ಬಾಂಬರೇ ಗರ್ಭಿಣಿಯಾಗಿ ಸೇನಾ ಆಸ್ಪತ್ರೆಗೆ ಪ್ರವೇಶ ಪಡೆಯಬೇಕು!

ಆಗಾಗ್ಗೆ ಆಸ್ಪತ್ರೆಗೆ ಹೋಗಿಬರುವ ನಾಟಕವಾಡುತ್ತಲೇ ಫೊನ್ಸೆಕಾಗೆ ಕಾಯಬೇಕು. ಆತ ಕಾಣಿಸಿಕೊಂಡ ದಿನ ಅವನ ಕಾರಿಗೆ ಅಡ್ಡನುಗ್ಗಿ ತನ್ನನ್ನೇ ಸ್ಫೋಟಿಸಿಕೊಳ್ಳಬೇಕು....

ಫೊನ್ಸೆಕಾ ಅವತ್ತು ಬಚಾವಾದ. ಇವತ್ತು ಗೆದ್ದಿದ್ದಾನೆ.

ಆದರೆ ಅವತ್ತು ಸತ್ತ ಗರ್ಭಿಣಿ ಗೆರಿಲ್ಲಾ ಮಹಿಳೆಯ ಕೋಪ, ಸೇಡಿನ ಭಾವನೆಯನ್ನು ಪ್ರಚೋದಿಸಿದ್ದು ಇದೇ ಫೊನ್ಸೆಕಾ ತರದ ಕೊಲೆಗಡುಕರು ತಾನೇ?

ಪೊಟ್ಟು ಅಮ್ಮಾನ್ ಎಂಬ ಹುಲಿಯ ಕತೆ


ಎಲ್‌ಟಿಟಿಇಯ ಇಡೀ ಚರಿತ್ರೆಯಲ್ಲೇ ಅತ್ಯಂತ ...ಕುಬುದ್ಧಿಯ ತಂತ್ರ, ತಂತ್ರಕ್ಕೆ ಪ್ರತಿತಂತ್ರ, ಧೈರ್ಯ ...ಸಗಳಿಗೆ ಪ್ರಖ್ಯಾತನಾಗಿದ್ದವನೇ ಈ ಪೊಟ್ಟು ಅಮ್ಮಾನ್. ...ಮೊನ್ನೆ ಪ್ರಭಾಕರನ್ ಜೊತೆ ಇವನೂ ಹತ್ಯೆಗೀಡಾದ ...ದು ಲಂಕಾ ಸೇನೆ ಹೇಳಿದೆ. ಆದರೆ ಶವ ಪ್ರದರ್ಶಿಸಿಲ್ಲ.

ಅಂದಾಜು 47 ವಯಸ್ಸಿನವನಾಗಿದ್ದ ...ಟ್ಟುವಿನ ಮೂಲ ಹೆಸರು ಶಿವ...ರ್ ಜಾಫ್ನಾ ಸಮೀಪದ ಆರಿಯಲ್ಲೆ...ನ ಹುಟ್ಟೂರು. ಇಂಗ್ಲಿಷ್, ತಮಿಳು ...ಗೂ ಸಿಂಹಳಿ ಭಾಷೆ ಬಲ್ಲವನಾಗಿದ್ದ ...ಗೆ 'ಪೊಟ್ಟು ಅಮ್ಮಾನ್' ಎಂಬ ...ಹೆಸರು ಹೇಗೆ ಬಂತೆಂಬುದಕ್ಕೆ ಒಂದು ...ಇದೆ. ತಮಿಳಿನಲ್ಲಿ ಪೊಟ್ಟು ಅಂದರೆ ...ಕ ಅಥವಾ ಬಿಂದು. ಶಿವಶಂಕರ್ ...ನ್ನೂ ಯುವಕನಿದ್ದಾಗ ಲಂಕಾ ...ರದ ವಿರುದ್ಧ ತಮಿಳರು ನಡೆಸುತ್ತಿದ್ದ ಪ್ರತಿಭಟನೆಗಳಲ್ಲಿ ...ಯಾಗುತ್ತಿದ್ದ. ಆಗ ... ಒಂದು ಸಂಪ್ರದಾಯ ...ಗಿತ್ತೆಂದರೆ ತಮಿಳು ... ತಮ್ಮ ಬೆರಳು ...ಕೊಂಡು ರಕ್ತದಿಂದ ...ಯ ನಾಯಕರ ಹಣೆಗೆ ...ಮೂಲಕ ಹೋರಾಟಕ್ಕೆ ಕಮಿಟ್ ಆಗಿರುವಂತೆ ...ಸುತ್ತಿದ್ದರು. ಆಗ ಜಾಫ್ನಾದ ಸಂಸತ್ ಸದಸ್ಯನಾಗಿದ್ದ ಯೋಗೀಶ್ವರನ್‌ನ ಹಿಂಬಾಲಕನಾಗಿದ್ದ ಶಿವಶಂಕರ್ ಒಂದು ಸಾರಿ ತನ್ನ ಹೆಬ್ಬೆರಳನ್ನು ಕುಯ್ದುಕೊಂಡು ರಕ್ತವನ್ನು ಯೋಗೀಶ್ವರನ್ ಹಣೆಗೆ ತಿಲಕದಂತೆ ಬಳಿದ. ಆದರೆ ಅವನ ಬೆರಳಿಗಾದ ಗಾಯ ಎಷ್ಟು ಆಳವಾಗಿತ್ತೆಂದರೆ ರಕ್ತಸ್ರಾವ ನಿಲ್ಲದೆ ಶಿವಶಂಕರನ್‌ನನ್ನು ತಕ್ಷಣ ಆಸ್ಪತ್ರೆಗೆ ಕರೆದೊಯ್ದು ಟ್ರೀಟ್‌ಮೆಂಟ್ ಕೊಡಿಸಬೇಕಾಯಿತು. ಈ ಘಟನೆ ಎಷ್ಟು ಪ್ರಭಾವ ಬೀರಿತ್ತೆಂದರೆ ಶಿವಶಂಕರನ್‌ಗೆ ಅವತ್ತಿನಿಂದ ಪೊಟ್ಟು (ತಿಲಕ) ಎಂಬ ಅಡ್ಡ ಹೆಸರು ಬಿತ್ತು. ಮುಂದೆ ಪೊಟ್ಟು ಎಲ್‌ಟಿಟಿಇ ಸೇರಿದಾಗ ಅವನ ಹಿರಿತನ ಪರಿಗಣಿಸಿ 'ಅಮ್ಮಾನ್' (ಅಂಕಲ್) ಎಂದು ಗೌರವದಿಂದ ಕರೆಯಲಾಯಿತು.



ಅಲ್ಲಿಂದಾಚೆಗೆ ಶಿವಶಂಕರ್ ಶಾಶ್ವತವಾಗಿ ಪೊಟ್ಟು ಅಮ್ಮಾನ್ ಆದ. 1982ರಲ್ಲಿ ಈತ ಎಲ್‌ಟಿಟಿಇ ಸೇರಿದಾಗ ಅದರಲ್ಲಿದ್ದವರೇ 32 ಗೆರಿಲ್ಲಾಗಳು. ನಂತರ ಪೊಟ್ಟು ಜಾಫ್ನಾ ಕಮಾಂಡರ್ ಆದ. ಟೈಗರ್ ಸಂಘಟನೆಯ ಇಂಟಲಿಜೆನ್ಸ್ ಮುಖ್ಯಸ್ಥನಾದ. ರಾಜೀವ್ ಹತ್ಯೆ, ಲಂಕಾ ಅಧ್ಯಕ್ಷ ಪ್ರೇಮದಾಸ ಹತ್ಯೆಗೆ ಪ್ಲಾನ್ ನಡೆಸಿದ್ದೂ ಇವನೇ ಎನ್ನಲಾಗಿದೆ.

ಕೆಲವು ವರ್ಷಗಳ ಹಿಂದೆ ಇದೇ ಪೊಟ್ಟು 'ಚಿರತೆಗಳ್' ಎಂಬ ಕಮಾಂಡೋ ಪಡೆ ರೂಪಿಸಿದ್ದ. ಬ್ಲಾಕ್ ಟೈಗರ್ಸ್ (ಕರುಪು ಪುಲಿಗಳ್) ಎಂಬ ಇನ್ನೊಂದು ಆತ್ಮಾಹುತಿ ದಳದ ರೂವಾರಿಯೂ ಇವನೇ ಆಗಿದ್ದ.



ಪೊಟ್ಟು ನೆಲೆಸಿದ್ದ ಮನೆ....

ಬಹಳ ಕಾಲ ಪೊಟ್ಟು ಹಿನ್ನೆಲೆ ಹಾಗೂ ಚಲನವಲನಗಳ ಬಗ್ಗೆ ಹೊರಜಗತ್ತಿಗೆ ಗೊತ್ತಿರಲಿಲ್ಲ. ಪ್ರಭಾಕರನ್‌ಗಿಂತ ರಹಸ್ಯಮಯ ವ್ಯಕ್ತಿಯಾಗಿದ್ದ ಪೊಟ್ಟು, ಸಂದಿವೇಲ್ ಪ್ರಾಂತ್ಯದ ಒಬ್ಬಾಕೆಯನ್ನು ಮದುವೆಯಾಗಿದ್ದು ಒಬ್ಬ ಮಗ-ಮಗಳಿದ್ದಾರೆ.

ಒಂದು ಸಾರಿ ಲಂಕಾ ತಮಿಳು ಮಿಲಿಟೆಂಟ್ ಗುಂಪುಗಳ ನಡುವೆ ಒಳಜಗಳ ನಡೆದಿದ್ದಾಗ LTTEಗಳು PLOTEಗೆ ಸೇರಿದ್ದ ಕಣ್ಣನ್‌ನನ್ನು ಕಿಡ್ನಾಪ್ ಮಾಡಿದ್ದರು. ಆಗ PLOTE ಗೆರಿಲ್ಲಾಗಳು ತಮಿಳುನಾಡಿನ ಮಹಾಲಿಂಗಪುರಂನಲ್ಲಿದ್ದ ಪೊಟ್ಟು ಅಮ್ಮಾನ್‌ನನ್ನೇ ಅಪಹರಿಸಿ ಒತ್ತೆಯಾಳಾಗಿರಿಸಿಕೊಂಡರು. ಕೊನೆಗೆ ಪ್ರಭಾಕರನ್ ಕಣ್ಣನ್‌ನನ್ನು ಬಿಟ್ಟುಕೊಟ್ಟು ಪೊಟ್ಟುನನ್ನು ಬಿಡಿಸಿಕೊಂಡಿದ್ದ. ಎಲ್‌ಟಿಟಿಇಯು ನಡೆಸಿದ ಬಹುತೇಕ ಯುದ್ಧ ಕಾರ್ಯಾಚರಣೆಗಳು ಗೆರಿಲ್ಲಾ ದಾಳಿಗಳು ಹಾಗೂ ಇತರೆ ತಮಿಳುಗುಂಪುಗಳ ವಿರುದ್ಧದ ದಾಳಿಗಳ ಮಾಸ್ಟರ್ ಮೈಂಡ್ ಈ ಪೊಟ್ಟು ಅಮ್ಮಾನ್ ಆಗಿದ್ದ. ಅವನದೊಂದು ಹಳೆಯ ಫೋಟೋ ಬಿಟ್ಟರೆ ಇಂಟರ್‌ಪೋಲ್‌ಗೂ ಅವನ ಚಹರೆಗಳು ಸಿಕ್ಕಿರಲಿಲ್ಲ. ತೀರಾ ಇತ್ತೀಚೆಗೆ ಅಂದರೆ 2009 ಮಾರ್ಚ್ 29ರಂದು ಲಂಕಾ ಸೇನೆ ಮಲ್ಲೈತಿರುವು ಪಟ್ಟಣದ ಸಮೀಪದ ಇರನಾಪಲ್ಲಿ ಎಂಬಲ್ಲಿ ಒಂದು ಮನೆಯನ್ನು ಮುತ್ತುವರೆದಿತ್ತು. ಅದು ಪೊಟ್ಟು ಅಮ್ಮಾನ್ ರಹಸ್ಯವಾಗಿ ವಾಸವಿದ್ದ ಮನೆ ಎಂಬ ಅನುಮಾನದಿಂದ. ಆದರೆ ಅಲ್ಲಿ ಪೊಟ್ಟು ಸಿಗಲಿಲ್ಲ. ಮೊನ್ನೆ ಮೇ 18ರ ರಾತ್ರಿ ಹತ್ಯೆಗೀಡಾಗುವವರೆಗೂ ತನ್ನಿಡೀ 30 ವರ್ಷಗಳ ಗೆರಿಲ್ಲಾ ಫೈಟರ್ ಬದುಕಿನಲ್ಲಿ ಪೊಟ್ಟು ಒಮ್ಮೆಯೂ ಸರ್ಕಾರಿ ಪಡೆಗಳಿಗೆ ಸೆರೆಸಿಕ್ಕಿರಲಿಲ್ಲ. 1983ರಲ್ಲಿ ಪ್ರಭಾಕರನ್‌ನನ್ನು ಮುಗಿಸಿಬಿಡಲು ಎಲ್‌ಟಿಟಿಇಯ ಇನ್ನೊಬ್ಬ ನಾಯಕ ಮಹತ್ತೀಯ ಸಂಚು ನಡೆಸುತ್ತಿದ್ದಾನೆಂಬುದನ್ನು ಮೊದಲು ಪತ್ತೆ ಹಚ್ಚಿದವನೇ ಈ ಪೊಟ್ಟು ಅಮ್ಮಾನ್.

ಈಳಂ ದೇಶ ರಚನೆಯ ಬಗ್ಗೆ ಅಪಾರ ಕನಸು ... ಪೊಟ್ಟು ತನ್ನ ಗೆಳೆಯ ಪ್ರಭಾಕರನ್ ಜೊತೆ ... ಅವನ ... ಬದ್ಧತೆಗಳಿಗೆ ಅನುಗುಣವಾಗಿಯೇ ಇದೆ. ■

ಲಂಕಾ ಸೇನೆಯ counter insurgency ಕಾರ್ಯಾಚರಣೆಗಳು


ಯುದ್ಧ ಅಂದರೆ ನೇರಾನೇರ ಸೇನಾ ಘರ್ಷಣೆ. ಟೈಗರ್‌ಗಳು ನೇರ ಯುದ್ಧದ ಜೊತೆಗೆ ಗೆರಿಲ್ಲಾ ದಾಳಿ, ಸೂಯಿಸೈಡ್ ಬಾಂಬಿಂಗ್ ನಡೆಸುತ್ತಿದ್ದುದು ನಮಗೆಲ್ಲಾ ಗೊತ್ತಿದೆ. ಅದೇರೀತಿ ಲಂಕಾ ಸೇನೆಯೂ ಟೈಗರ್ ಪಡೆಯೊಂದಿಗೇ ತನ್ನ ಏಜೆಂಟರನ್ನು ಕಳುಹಿಸಿ ಕೆಲ ಪ್ರಮುಖ ಟೈಗರ್ ಲೀಡರ್‌ಗಳನ್ನು ಕೊಲ್ಲಿಸಿತ್ತು.

ಲಂಕಾ ಸೇನೆಯ ಈ ರಹಸ್ಯ ಪಡೆ ಹೆಸರೇ LRRP (Long Range Reconnaissance patrol) ಎಂದು. ಈ ಏಜೆಂಟರಿಗೆ deep penetration squad ಎಂತಲೂ ಕರೆಯುತ್ತಾರೆ. ಇವರ ಕೆಲಸ ಏನೆಂದರೆ ಟೈಗರ್ ಸೇನೆಯಲ್ಲೇ ಇದ್ದುಕೊಂಡು ಪ್ರಮುಖರ ಕೊಲೆ ಮಾಡಿ ತಮ್ಮ ಪಾಡಿಗೆ ಮುಗ್ಧರಂತೆ ಇದ್ದು ಬಿಡುವುದು.

ಗೆರಿಲ್ಲಾ ಪರಿಭಾಷೆಯಲ್ಲಿ ಇದನ್ನು covert operation ಎನ್ನುತ್ತಾರೆ. ಈ ತಂತ್ರ ಬಳಸಿ 2001 ರಲ್ಲಿ ಗಂಗೈ ಅಮರನ್ ಎಂಬ ಲೀಡರ್‌ನನ್ನು ಲಂಕಾ ಸರ್ಕಾರ ಕೊಲ್ಲಿಸಿತ್ತು. ಇನ್ನೊಮ್ಮೆ ಶಂಕರ್ ಎಂಬ ಟೈಗರ್‌ನ ಮೋಟಾರ್ ಬೈಕಿನಲ್ಲೇ clay-more ಬಾಂಬ್ ಇರಿಸಿ ಸ್ಫೋಟಿಸಿ ಕೊಲ್ಲಿಸಿತ್ತು.

ಟೈಗರ್ ನಾಯಕರು ತಮ್ಮ ವಾಸಸ್ಥಾನ, ಚಲನವಲನಗಳನ್ನೆಲ್ಲಾ ಅತೀ ರಹಸ್ಯವಾಗಿರಿಸಲು ಇಂಥ ಅಪಾಯಗಳೇ ಕಾರಣವಾಗಿದ್ದವು. ಇಂಡಿಯಾದಲ್ಲಿ ಪೊಲೀಸರು ನಕ್ಸಲ್ ಸ್ಕ್ವಾಡುಗಳಿಗೆ ತಮ್ಮ ಏಜೆಂಟರನ್ನು ಸೇರಿಸಿ ನಂತರ ಅವಕಾಶ ಸಿಕ್ಕಾಗ ಇದೀ ತಂಡವನ್ನೇ ಕೊಲ್ಲಿಸಿದ ಉದಾಹರಣೆಗಳಿವೆ.

ಪ್ರಭಾಕರನ್‌ನ ರಹಸ್ಯ ಬಂಕರ್‌ನಲ್ಲಿ ಲಂಕಾ ಸೈನಿಕರು.....



ಆ ಕೊನೆಯ ಕ್ಷಣಗಳು......

ಪ್ರಭಾಕರನ್‌ನ ಕೊನೆಯ ಗಂಟೆಗಳು, ನಿಮಿಷ, ಕ್ಷಣಗಳು ಹೇಗಿದ್ದವು. ಆತ ಹೇಗೆ ಸಿಕ್ಕ ಯಾರಿಂದ ಕೊಲ್ಲಲ್ಪಟ್ಟನೆಂಬ ಸತ್ಯಸಂಗತಿ ಹೊರಬರಲು ಇನ್ನು ಕೆಲವು ದಿನ ಬೇಕಾಗಬಹುದು. ಈಗ ಲಭ್ಯವಿರುವ ಮಾಹಿತಿ ಪ್ರಕಾರ ಹೇಳಬೇಕೆಂದರೆ


ಲಂಕಾ ಸೇನೆ ಮುಂದೊತ್ತಿ ಬಂದಂತೆ ಪೂರ್ವ ಭಾಗದ ಮಾಲೈತ್ತೀವು ಕಡೆಗೆ ಹಿಂದೆಸರಿದ ಟೈಗರ್‌ಗಳ ಸೇನೆಯ ಜೊತೆ ಪ್ರಭಾಕರನೂ ಇದ್ದ. ಲಂಕಾ ಸೇನೆ ಕಳೆದ ಮೂರ್ನಾಲ್ಕು ತಿಂಗಳಿಂದಲೂ ಇದನ್ನು ಖಚಿತಪಡಿಸುತ್ತಲೇ ಇತ್ತು. ಮೇ 16-17 ರ ರಾತ್ರಿ ನಂದಿಕಡಲ್ ಎಂಬ ಸ್ಥಳದ ಬಳಿ ಕೇವಲ ನೂರಿನ್ನೂರು ಮೀಟರ್ ವ್ಯಾಪ್ತಿಯೊಳಗೆ ಅಂದಾಜು 300 ಗೆರಿಲ್ಲಾಗಳು ಕಾರ್ನರ್ ಆಗಿ ಸುತ್ತುವರೆಯಲ್ಪಟ್ಟಿದ್ದರು. ಲಂಕಾದ 58ನೇ ಡಿವಿಜನ್ ಸೇನೆ ಇಡೀ ಪ್ರದೇಶವನ್ನು ಆವರಿಸಿತ್ತು. ಆಗ ಪ್ರಭಾಕರನ್‌ನೊಂದಿಗೆ 18 ಜನರೂ ಅವರ ಸುತ್ತ ಸುಮಾರು ಮುನ್ನೂರು ಗೆರಿಲ್ಲಾಗಳು ರಕ್ಷಣೆಗಿದ್ದರು. ಗುಂಡಿನ ಚಕಮಕಿ, ಸಾವು, ಶೆಲ್ ದಾಳಿಗಳ ನಡುವೆ ಲಂಕಾ ಸೈನಿಕರಿಗೆ ಒಬ್ಬ ಸೆರೆಸಿಕ್ಕ.

ಆತ ಡಾ. ರೇಗನ್!

ಪ್ರಭಾಕರನ್‌ನ ಖಾಸಗಿ ಡಾಕ್ಟರ್ ಅವನು. ಲಂಕಾ ಮಿಲಿಟರಿ ಆಫೀಸರ್‌ಗಳು ರೇಗನ್‌ಗೆ ಚಿತ್ರಹಿಂಸೆ ನೀಡಿ ಬಾಯಿ ಬಿಡಿಸಿದಾಗ "ಸೇನೆಯ ಮುತ್ತಿಗೆ ಮುರಿದು, ದಾಳಿ ಮಾಡುತ್ತಾ ಹೊರ ತೆರಳಲು ಟೈಗರ್‌ಗಳು ಪ್ಲಾನ್ ಮಾಡಿದ್ದಾರೆ" ಎಂದು ಹೇಳಿದನಂತೆ.

ಭಾನುವಾರ ಸಂಜೆ, ಟಿವಿ ನ್ಯೂಸ್ ನೋಡುತ್ತಿದ್ದವರಿಗೆ ಘನಘೋರ, ಭಯಾನಕ ಸ್ಫೋಟವೊಂದು ಕಾಣಿಸಿತಲ್ಲ?

ಅದು ಗೆರಿಲ್ಲಾಗಳು ಪ್ರಭಾಕರನ್ ತಪ್ಪಿಸಿಕೊಂಡು ಹೋಗಲು ಅನುವು ಮಾಡಿಕೊಡಲು ನಡೆಸಿದ ಅಂತಿಮ ದಾಳಿಯಾಗಿತ್ತು, ಆ ಸ್ಫೋಟವೊಂದರಲ್ಲೇ ಕನಿಷ್ಠ 260 ಗೆರಿಲ್ಲಾಗಳು ಸುಟ್ಟು ಕರಕಲಾದರು. ಆ ಅವಕಾಶ ಬಳಸಿಕೊಂಡು ಪ್ರಭಾಕರನ್ ಹೊರ ನುಗ್ಗಲು



ತಮಿಳು ಸೆಲ್ವಂ ಪೊಟ್ಟು ಸೂಸೈ

ಹೊರಟನಾದರೂ ಮೊದಲೇ ಸಿದ್ಧವಾಗಿದ್ದ ಸೇನೆ ಅವನಿಗೆ ಆ ಅವಕಾಶವನ್ನು ಕೊಡಲಿಲ್ಲ.

ಅಲ್ಲಿಂದಾಚೆಗೆ ಏನಾಯಿತೆಂಬುದು ಸದ್ಯಕ್ಕಂತೂ ರಹಸ್ಯವಾಗಿದೆ.

ಪ್ರಭಾಕರನ್ ರಾಕೆಟ್ ದಾಳಿಯಲ್ಲಿ ಸತ್ತ ಎನ್ನುತ್ತಿದೆ ಸೇನೆ. ಆದರೆ ಹುಲಿಯ ದೇಹಕ್ಕೆ ಸುಟ್ಟ ಗಾಯಗಳೇನೂ ಆಗಿರಲಿಲ್ಲ.

ಸೆರೆಹಿಡಿದು ತೀರಾ ಹತ್ತಿರದಿಂದ ತಲೆ ಚಿಪ್ಪು ಹಾರಿ ಹೋಗುವಂತೆ ಗುಂಡು ಹಾರಿಸಿರುವುದು ಸ್ಪಷ್ಟವಾಗೇ ಗೊತ್ತಾಗುತ್ತಿತ್ತು, ಚಾರ್ಲ್ಸ್ ಆಂತೋಣಿ ಮೃತ ದೇಹವೂ ಅದೇ ರೀತಿ ಇತ್ತು. ಅವನ ಕಣ್ಣಿನೊಳಗಿಂದ ನುಗ್ಗಿದ ಬುಲೆಟ್ ತಲೆಯ ಹಿಂಭಾಗದಿಂದ ಹೊರಬಂದಿತ್ತು.

ಕೆಲವು ತಮಿಳು ನಾಯಕರು ಪ್ರಭಾಕರನ್ ಸತ್ತಿಲ್ಲ, ಸತ್ತವನು ಡೂಪ್ಲಿಕೇಟ್ ಪ್ರಭಾಕರನ್ ಎನ್ನುತ್ತಿದ್ದಾರೆ. ಈ ಅನುಮಾನಕ್ಕೆ ಪುಷ್ಟಿ ನೀಡುವಂತೆ ಪೊಟ್ಟು ಅಮ್ಮಾನ್, ಸೂಸೈ ಸತ್ತಿದ್ದಾರೆ ಎಂದರೂ ಅವರ ಮೃತ ದೇಹಗಳನ್ನು ಸರ್ಕಾರ ತೋರಿಸಿಲ್ಲವಾದರೂ ಪ್ರಭಾಕರನ್ ಸಾವು ಬಹುತೇಕ ಖಚಿತವಾದಂತೆಯೇ ಸರಿ.

ಪ್ರಭಾಕರನ್ ತಪ್ಪಿಸಿಕೊಳ್ಳುವ ಸಾಧ್ಯತೆ ಇತ್ತಾ ಎಂಬ ಪ್ರಶ್ನೆ ಹಾಕಿಕೊಂಡರೆ ಖಂಡಿತಾ ಇತ್ತು ಎನ್ನಬಹುದು. ಈ ವರ್ಷದ ಆರಂಭದಿಂದಲೂ ಆತ ಎಚ್ಚರಿಕೆ ವಹಿಸಿ ಯುದ್ಧ ಭೂಮಿಯಿಂದ ದೂರ ಉಳಿದಿದ್ದರೆ ಆತ ಬದುಕುಳಿಯುವ ಛಾನ್ಸ್ ಇತ್ತು.

ಆದರೆ ಈ ಟೈಗರ್ ಹೇಡಿ ಅನ್ನಿಸಿಕೊಳ್ಳಲು ಸಿದ್ಧವಿರಲಿಲ್ಲ, ಅವನೊಳಗೆ ಸದಾ ಒಬ್ಬ ಗೆರಿಲ್ಲಾ ಫೈಟರ್ ಇದ್ದನೇ ವಿನಃ ರಾಜಕಾರಣಿ ಇರಲಿಲ್ಲ.

ಪ್ರಭಾಕರನ್‌ನಿಂದ ಹಿಡಿದು ಪ್ರಮುಖ ಟೈಗರ್ ಲೀಡರ್‌ಗಳೆಲ್ಲಾ ಸಾಯುವ ಕೊನೇ ಕ್ಷಣದವರೆಗೂ ರಣರಂಗದಲ್ಲೇ ಇದ್ದರು. ಕೊನೆಗೆ ಅಲ್ಲೇ ಸತ್ತರೆಂಬುದು ಈಳಂಗಾಗಿ, ಸಮಾನತೆ, ನ್ಯಾಯಕ್ಕಾಗಿ, ಹೋರಾಡುವ ಅವರ ದೃಢ ನಿರ್ಧಾರ, ಕೆಚ್ಚು, ಹಠವನ್ನು ತೋರಿಸುವುದಿಲ್ಲವೆ?

ಚೀನಾ-ಇಂಡಿಯಾ-ಅಮೆರಿಕ ಲೆಕ್ಕಾಚಾರಗಳು


ತಮಿಳು ಟೈಗರ್‌ಗಳ ವಿರುದ್ಧದ ನಿರ್ಣಾಯಕ ಯುದ್ಧದಲ್ಲಿ ಲಂಕಾ ಸೇನೆಗೆ ಈ ಬಾರಿ ಪೂರ್ಣ ನೆರವು ನೀಡಿದ್ದು ಯಾವ ದೇಶ ಗೊತ್ತೇ?

ಚೀನಾ!

ಲಂಕಾ ಸೇನೆಗೆ ಜಿಯಾನ್-7 ಫೈಟರ್ ಜೆಟ್ ಯುದ್ಧ ವಿಮಾನಗಳು, ಆಂಟಿ ಏರ್‌ಕ್ರಾಫ್ಟ್ ಗನ್‌ಗಳು, ಏರ್ ಸರ್ವೇಲೆನ್ಸ್ ರೆಡಾರ್‌ಗಳು ಹಾಗೂ ಇನ್ನಿತರ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಸಪ್ಲೈ ಮಾಡಿದ ಚೀನಾ ಟೈಗರ್‌ಗಳ ಸರ್ವನಾಶದಲ್ಲಿ ಮುಖ್ಯ ಪಾತ್ರ ವಹಿಸಿದೆ.

ಹಾಗೆ ನೋಡಿದರೆ ಎಲ್‌ಟಿಟಿಇ ವಿರುದ್ಧ ಇಂಡಿಯಾ, ಇಸ್ರೇಲ್ ಹಾಗೂ ಅಮೆರಿಕಗಳೂ ಮೊದಲಿನಿಂದಲೂ ಲಂಕಾ ಸರ್ಕಾರಕ್ಕೆ ನೆರವಾಗುತ್ತಲೇ ಬಂದಿದ್ದವು. ಹಣ, ತರಬೇತಿ, ಆಯುಧಗಳನ್ನು ನೀಡುತ್ತಾ ಇದ್ದವು. ಆದರೆ ಇದರ ನಡುವೆ ಚೀನಾ ನುಗ್ಗಿಬಂದು [illegible]ದಲ್ಲಿ ತನ್ನ ಪ್ರಭಾವ ಬೆಳೆಸಿಕೊಂಡಿದ್ದಕ್ಕೆ ಅನೇಕ ಕಾರಣಗಳಿವೆ.

ಈಗಲೂ ಚೀನಾದ ಶೇ.80ರಷ್ಟು ಆಯಿಲ್ ಸಪ್ಲೈ ಅರಬ್ ದೇಶಗಳಿಂದ ಬರುತ್ತಿದೆ. ಈ ತೈಲ ನೌಕೆಗಳು ಅರಬ್ ದೇಶಗಳಿಂದ ದಕ್ಷಿಣಕ್ಕೆ ಹೊರಟು ಹಿಂದೂ ಮಹಾಸಾಗರ ಹಾದು ಶ್ರೀಲಂಕಾ ಬಳಸಿಕೊಂಡು ಮತ್ತೆ ಉತ್ತರ ದಿಕ್ಕಿನತ್ತ ಚೀನಾದ ಕಡೆ ಹೋಗುತ್ತದೆ. ಈ ಹಾದಿಯುದ್ದಕ್ಕೂ ಅನ್ಯದೇಶಗಳಲ್ಲಿ ಚೀನಾ ತನ್ನದೇ ಹಣದ ನೆರವು ನೀಡಿ ಬಂದರುಗಳನ್ನು ನಿರ್ಮಿಸಿದೆ. ಅದರಂತೆ ಪಶ್ಚಿಮ ಪಾಕಿಸ್ತಾನದ ಗಾದರ್‌ನಲ್ಲೊಂದು ಬಂದರು. ಶ್ರೀಲಂಕಾದ ಹಂಬನ್‌ತೋಟಾದಲ್ಲಿ ಒಂದು, ಬಾಂಗ್ಲಾದೇಶದ ಚಿತ್ತಗಾಂಗ್‌ನಲ್ಲೊಂದು ನೌಕಾನೆಲೆ ಹಾಗೂ ಬರ್ಮಾಗೆ ಸೇರಿರುವ ಗ್ರ್ಯಾಂಡ್ ಕೊಕಿದ್ವೀಪ್‌ಗಳಲ್ಲಿ ಒಂದು ನೌಕಾ ಗೂಢಚರ್ಯೆ ನೆಲೆ ಸ್ಥಾಪಿಸುತ್ತಿದೆ. ಈ ದ್ವೀಪ ಅಂಡಮಾನ್ ದ್ವೀಪಗಳಿಗೆ ಬಹಳ ಹತ್ತಿರವಿರುವ ಜಾಗ.



ನಾರ್ವೆ ನಿಯೋಗದೊಂದಿಗೆ......

ಶ್ರೀಲಂಕಾದಲ್ಲಿನ ಜನಾಂಗೀಯ ಯುದ್ಧದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿರುವುದಾಗಿ ಅಮೆರಿಕ ಆಕ್ಷೇಪಿಸಿ ಈಗ್ಗೆ ಕೆಲ ವರ್ಷಗಳಿಂದ ಲಂಕಾ ಸರ್ಕಾರಕ್ಕೆ ಹಣಕಾಸಿನ ನೆರವನ್ನು ನಿಲ್ಲಿಸಿತ್ತು. ಇನ್ನು ಭಾರತಕ್ಕೆ ಇದ್ದ ಬಿಕ್ಕಟ್ಟೆಂದರೆ ಬಹಿರಂಗವಾಗಿ ಲಂಕಾ ಸರ್ಕಾರದ ನೆರವಿಗೆ ಹೋದರೆ ಅದು ತಮಿಳುನಾಡಿನಲ್ಲಿ ಅಸಹನೆ ಮೂಡಿಸಬಹುದು ಎಂಬುದಾಗಿತ್ತು, IPKF ನ ಕಹಿ ಅನುಭವ ಬೇರೆ ಹಸಿಯಾಗಿತ್ತು.

ಈ ಅವಕಾಶವನ್ನು ತಕ್ಷಣ ಗಮನಿಸಿದ ಚೀನಾ ತರಾತುರಿಯಲ್ಲಿ ಲಂಕಾ ಸೇನೆಗೆ ಬೇಕು ಬೇಕಾದ ಆಯುಧ ಕೊಟ್ಟು ಸರ್ಕಾರಕ್ಕೂ ಸುಮಾರು ನಾಲ್ಕು ಸಾವಿರ ಕೋಟಿ ರೂಪಾಯಿ ಹಣಕಾಸಿನ ನೆರವನ್ನು ಕೊಟ್ಟು ಟೈಗರ್‌ಗಳನ್ನು ಮುಗಿಸಲು ಕೈ ಜೋಡಿಸಿದೆ.

ಹಾಗೆ ಮಾಡುವ ಮೂಲಕ ನಿಶ್ಯಕ್ತವಾಗಿದ್ದ ಲಂಕಾ ಸರ್ಕಾರದಿಂದ ತನಗೆ ಲಾಭವಾಗುವ ಅನೇಕ ಡೀಲ್‌ಗಳನ್ನು ಚೀನಾ ಈಗ ಕುದುರಿಸಿಕೊಂಡಿದೆ. ಈ ನಡುವೆ ಅಮೆರಿಕನ್ನರೂ ಸುಮ್ಮನೆ ಕುಳಿತಿಲ್ಲ, ಕೊಲಂಬೊನಲ್ಲಿ ಅಮೆರಿಕನ್ ಚೇಂಬರ್ ಆಫ್ ಕಾಮರ್ಸ್‌ನ ಕಚೇರಿ ತೆರೆದು 280ರಷ್ಟು ಸಿಂಹಳ ಬಂಡವಾಳಶಾಹಿಗಳ ಕಂಪನಿಗಳೊಂದಿಗೆ ವ್ಯಾಪಾರದ ಮಾತುಕತೆ ನಡೆಸುತ್ತಿದೆ.

ಈ ಎಲ್ಲರಿಗೂ ತಮ್ಮ ಹಿತಾಸಕ್ತಿಗಳು, ಲಾಭಗಳು ಬೇಗನೆ ಸಿಗಬೇಕೆಂದಲ್ಲಿ ಲಂಕಾದ ಸಿವಿಲ್ ವಾರ್ ಕೊನೆಯಾಗಲೇಬೇಕಿತ್ತು, ಟೈಗರ್‌ಗಳು ನಾಶವಾಗಲೇಬೇಕಿತ್ತು, ಹಾಗಾಗಿಯೇ ಕಳೆದ ನಾಲ್ಕಾರು ತಿಂಗಳಿಂದ ತೀವ್ರ ಸ್ವರೂಪ ಪಡೆದಿದ್ದ ಯುದ್ಧದಲ್ಲಿ ಲಕ್ಷಾಂತರ ತಮಿಳು ನಾಗರಿಕರು ಸಂಕಷ್ಟಕ್ಕೆ ಸಿಲುಕಿದ್ದಾಗಲೂ ವಿಶ್ವ ಸಮುದಾಯ ಅವರ ನೆರವಿಗೆ ಬಾರದಂತೆ, ಮಧ್ಯಪ್ರವೇಶಿಸದಂತೆ ನೋಡಿಕೊಂಡರು. ವಿಶ್ವಸಂಸ್ಥೆಯ ಸೆಕ್ಯುರಿಟಿ ಕೌನ್ಸಿಲ್‌ನಲ್ಲಿ ಈ ವಿಚಾರದ ಬಗ್ಗೆ ಚರ್ಚೆಯಾಗುವ ಸನ್ನಿವೇಶ ಬಂದಾಗ ಚೀನಾ ಅದಕ್ಕೆ ಅವಕಾಶವನ್ನೇ ನೀಡದೆ ಸಹಸ್ರಾರು ನಾಗರಿಕ ಸಾವಿಗೆ ಹೊಣೆಯಾಗಿದೆ.

▶▶▶11

ಓ ಈಳಂ

ಅತ್ಯಾಧುನಿಕ ಆಯುಧಗಳನ್ನು ತರಿಸಿ ತನ್ನ ಹೋರಾಟಗಾರರ ಕೈಗಿಟ್ಟ. ನೌಕಾಪಡೆ ಕಟ್ಟಿದ. ಸ್ವತಃ ತನ್ನ ಮಗನಿಗೆ ಐರ್ಲ್ಯಾಂಡ್‌ನಲ್ಲಿ ಏರೋನಾಟಿಕಲ್ ಇಂಜಿನಿಯರಿಂಗ್ ಕಲಿಸಿ ಕರೆಸಿಕೊಂಡು ವಿಮಾನ ಪಡೆಯನ್ನು ಕಟ್ಟಿದ. ಜಗತ್ತು ಅದುವರೆಗೂ ಕಂಡು ಕೇಳರಿಯದಿದ್ದ ಆತ್ಮಹತ್ಯಾ ಬಾಂಬರ್‌ಗಳನ್ನು ರೆಡಿ ಮಾಡಿದ. ನಿರ್ಣಾಯಕ ಯುದ್ಧಗಳಲ್ಲಿ ತಾನೇ ನೇರವಾಗಿ ಭಾಗಿಯಾಗುತ್ತಿದ್ದ. ಇದೆಲ್ಲದರಿಂದಾಗಿ ಟೈಗರ್‌ಗಳು ಲಂಕಾ ಸೇನೆಯನ್ನು ಹತ್ತಾರು ಸಾರಿ ಬಗ್ಗು ಬಡಿದಿದ್ದರು. ಆದರೆ ವಿಪರ್ಯಾಸ ಏನೆಂದರೆ ಪ್ರಭಾಕರನ್‌ನ ಈ ಮಿಲಿಟರಿ ವಿಜಯಗಳು ಈಳಂನ ರಾಜಕೀಯ ವಿಜಯಗಳಾಗಿ ಬದಲಾಗಲಿಲ್ಲ, ಹಾಗೆ ಸಿಕ್ಕಿದ ಮೂರು ನಿರ್ಣಾಯಕ ಅವಕಾಶಗಳನ್ನು ಪ್ರಭಾಕರನ್ ನಿರ್ಲಕ್ಷಿಸಿದ್ದ. ಲಂಕಾ ಅಧ್ಯಕ್ಷೆ ಚಂದ್ರಿಕಾ ಕುಮಾರತುಂಗಾ ತಮಿಳರಿಗೆ ಸ್ವಾಯತ್ತ ಅಧಿಕಾರ ನೀಡುವ ಪ್ರಸ್ತಾಪ, ಪ್ರೇಮದಾಸ ನೀಡಿದ್ದ ಮಾತುಕತೆಯ ಆಹ್ವಾನ ಹಾಗೂ ಇತ್ತೀಚೆಗೆ ನಾರ್ವೆ ಮಧ್ಯಸ್ಥಿಕೆಯಲ್ಲಿ ಮೂಡಿದ್ದ ಪ್ರಸ್ತಾಪಗಳವು.

ತಾತ್ಕಾಲಿಕವಾಗಿ ಇವುಗಳಲ್ಲಿ ಯಾವುದನ್ನೂ ಒಪ್ಪಿಕೊಂಡಿದ್ದರೂ ಟೈಗರ್‌ಗಳಿಗೆ ಲಂಕಾದ ಕಾಲುಭಾಗದ ಮೇಲಿನ ಕಂಟ್ರೋಲ್ ಹಾಗೆ ಉಳಿಯುವ ಅವಕಾಶವಿತ್ತು. ಮುಂದೆ ಮತ್ತೆ ಬಲಗೂಡಿಸಿಕೊಂಡು ಈಳಂಗಾಗಿ ಹೋರಾಟ ನಡೆಸುವ ಅವಕಾಶ ಇದ್ದೇ ಇತ್ತು, ಆದರೆ ಪ್ರತ್ಯೇಕ ಈಳಂ ದೇಶ ಬಿಟ್ಟು ಬೇರೆ ಏನನ್ನೂ ಒಪ್ಪುವ ಮನಸ್ಥಿತಿ ಪ್ರಭಾಕರನ್ನಿಗಿರಲಿಲ್ಲ, ಇದೇ ಧ್ಯೇಯಕ್ಕಾಗಿ ಅವನ ಪ್ರಾಣ ಮಿತ್ರರಂತಿರುತ್ತಿದ್ದ ದಿಲೀಪನ್, ಶಂಕರ್, ತಮಿಳ್ ಸೆಲ್ವನ್ ಚಾರ್ಲ್ಸ್ ಆಂಟನಿಯಾದಿಯಾಗಿ ಸಹಸ್ರಾರು ತಮಿಳು ಹೋರಾಟಗಾರರು ಪ್ರಾಣ ಬಲಿಕೊಟ್ಟಿದ್ದರು. ತಾತ್ಕಾಲಿಕವಾಗಿಯಾದರೂ ಈಳಂ ವಿಚಾರ ಕೈಬಿಡುವುದು ಹುತಾತ್ಮರಿಗೆ ಬಗೆಯುವ ದ್ರೋಹ ಎಂದೇ ನಂಬಿದ್ದ ಪ್ರಭಾಕರನ್ ಹೋರಾಟ ಬಿಟ್ಟು ಬೇರೆ ಮಾತಾಡಲಿಲ್ಲ.

ತನ್ನ 20ನೇ ವಯಸ್ಸಿನಲ್ಲೇ ಗೆರಿಲ್ಲಾ ಫೈಟರ್ ಆಗಿ ಆವಿರ್ಭವಿಸಿದ ಪ್ರಭಾಕರನ್ ಕನಿಷ್ಠ ತನ್ನ 50ನೇ ವಯಸ್ಸಿನಲ್ಲಾದರೂ ಓರ್ವ ರಾಜಕೀಯ ಮುತ್ಸದ್ದಿಯಾಗಿ ಅರಳಬೇಕಿತ್ತು. ಅವನ ಕಣ್ಣೆದುರೆ, ಖುರ್ದಿಶ್, ಪ್ಯಾಲೇಸ್ಟೇನ್, ಐರ್ಲ್ಯಾಂಡ್, ಈಸ್ಟ್ ತೈಮೂರ್, ಯುಗೋಸ್ಲಾವಿಯಾದ ನ್ಯಾಪನಾಲಿಟಿ ಹೋರಾಟಗಳು ಬೇರೆ ಬೇರೆ ರೀತಿ ರೂಪಾಂತರಗೊಂಡಿದ್ದವು. ಕೆಲವು ಬಗೆಹರಿದಿದ್ದರೆ ಇನ್ನುಳಿದವು ಬದಲಾದ ಜಾಗತಿಕ ಸನ್ನಿವೇಶಕ್ಕನುಗುಣವಾಗಿ ತಮ್ಮ ರಾಜಕೀಯ ವ್ಯೂಹಗಳನ್ನು ಬದಲಿಸಿಕೊಂಡವು. ಹೇಗೋ ಮಾಡಿ ತಮ್ಮ ಹೋರಾಟದ ದೀಪ ಆರಿಹೋಗದಂತೆ ಕಾಪಾಡಿಕೊಳ್ಳಲು ಹೆಣಗುತ್ತಿದ್ದವು. ಆದರೆ ಪ್ರಭಾಕರನ್ ಈ ಬೆಳವಣಿಗೆಗಳನ್ನು ನಿರ್ಲಕ್ಷಿಸಿಬಿಟ್ಟ. ಅವನ ರಾಜಕೀಯ ಸಲಹೆಗಾರ ಆಂಟನಿ ಬಾಲಸಿಂಗಂ ಕ್ಯಾನ್ಸರ್‌ನಿಂದ ಸತ್ತಿದ್ದ. ಪ್ರಭಾಕರನ್‌ನ ಬಲಗೈನಂತಿದ್ದ ಪೂರ್ವ ಲಂಕಾದ ಟೈಗರ್ ಮುಖ್ಯಸ್ಥ ವಿನಾಯಗಮೂರ್ತಿ ಮುರುಳೀಧರನ್ ಯಾನೆ ಕರುಣಾ ಬೇಸತ್ತು ದೂರಹೋಗಿದ್ದ. ಕರುಣಾ ಜೊತೆಗಿದ್ದ 6 ಸಾವಿರಷ್ಟು ಟೈಗರ್ ಸೇನೆಯೂ ದೂರವಾಗಿತ್ತು.


ಇಷ್ಟಾದರೂ ಪ್ರಭಾಕರನ್‌ಗಿದ್ದ ಧೈರ್ಯ ಏನೆಂದರೆ ಲಂಕಾ ಸೇನೆ ದುರ್ಬಲವಾಗಿದೆ ಎಂದು. ಸ್ವಲ್ಪಮಟ್ಟಿಗೆ ಅದು ನಿಜವೂ ಆಗಿತ್ತು. ಆದರೆ ಲಂಕಾ ಸರ್ಕಾರ ಕಳೆದೈದು ವರ್ಷದಿಂದ ತಣ್ಣಗೆ ಬೇರೆ ಸಿದ್ಧತೆ ಮಾಡಿಕೊಳ್ಳುತ್ತಿತ್ತು. ಇಂಡಿಯಾ, ಚೀನಾ, ಇಸ್ರೇಲ್, ಅಮೆರಿಕಗಳಿಂದ ತನ್ನ ಸೇನೆಗೆ ಬೇಕಾದ ಹೊಸ ವೆಪನ್‌ಗಳು, ಹಣಕಾಸು, ತರಬೇತಿ ಕೊಡಿಸಿತ್ತು. ದೊಡ್ಡ ಸಂಖ್ಯೆಯಲ್ಲಿ ಸಿಂಹಳ ಯುವಕರನ್ನು ಸೇನೆಗೆ ಭರ್ತಿ ಮಾಡಿಕೊಂಡಿತ್ತು.

ಈ ಹಂತದಲ್ಲೂ ಪ್ರಭಾಕರನ್ ಮತ್ತೆ ತಪ್ಪು ಮಾಡಿದ್ದ. 2004ರಲ್ಲಿ ಮಾಹಿಂದ ರಾಜಪಕ್ಸೆ ಅಧ್ಯಕ್ಷೀಯ ಚುನಾವಣೆಗೆ ನಿಂತಾಗ 'ಎಲ್‌ಟಿಟಿಇ ಮುಗಿಸುವುದಾಗಿ' ಭರವಸೆ ನೀಡಿದ್ದ. ಆದರೆ ಅವನ ಎದುರಾಳಿಯಾಗಿ ಸ್ಪರ್ಧಿಸಲು ರೆಡಿಯಾಗಿದ್ದ ಲಕ್ಷ್ಮಣ ಕದಿರಮಾಗರ್ 'ಮಾತುಕತೆ ಹಾಗೂ ರಾಜಿ ಮೂಲಕ ಅಂತರ್ಯುದ್ಧ ಕೊನೆಗಾಣಿಸುವುದಾಗಿ' ಜನರಿಗೆ ಭರವಸೆ ಕೊಟ್ಟಿದ್ದ.

ಆದರೆ ಅದೇ ಆವೇಶ, ದುಡುಕುತನಗಳ ಪ್ರಭಾಕರ್ ಏನು ಮಾಡಿದ ಗೊತ್ತೇ?

ಕದಿರಮಾಗರ್‌ನನ್ನು ಕೊಲ್ಲಿಸಿ ತಮಿಳರು ರಾಜಪಕ್ಸೆಗೆ ಓಟು ಹಾಕದಂತೆ, ಮತದಾನ ಬಹಿಷ್ಕರಿಸುವಂತೆ ಕರೆಕೊಟ್ಟ. ಕೊನೆಗೆ ರಾಜಪಕ್ಸೆ ಕಡಿಮೆ ಲೀಡ್‌ನಲ್ಲಿ ಗೆದ್ದು ಅಧ್ಯಕ್ಷನಾಗಿಬಿಟ್ಟ. ಹೇಳಿದಂತೆಯೇ ಸೇನೆ ಸಿದ್ಧಪಡಿಸಿ ಟೈಗರ್‌ಗಳ ವಿರುದ್ಧ ಛೂ ಬಿಟ್ಟ. ಪ್ರಭಾಕರನ್‌ನ ಮಿತಿಮೀರಿದ ಮಹತ್ವಾಕಾಂಕ್ಷೆ, ವಿವೇಚನೆಯಿಲ್ಲದ ನಿರ್ಧಾರಗಳು, ದುಡುಕುತನಗಳಿಂದಾಗಿ 30 ವರ್ಷ ನಡೆದ ಯುದ್ಧ ಒಂದು ಲಕ್ಷ ಜನ ಬಲಿಯಾದ ಸಂಘರ್ಷ ಈಗ ಹೃದಯವಿದ್ರಾವಕವಾಗಿ ಕೊನೆಯಾಗುತ್ತಿದೆ. ತಮಿಳು ಹುಲಿ ಸತ್ತಿದೆ. ಈಳಂ ಕನಸು ಮುರಿದು ಬಿದ್ದಿದೆ.

ಈ ಯುದ್ಧದಲ್ಲಿ ವಿಜಯಶಾಲಿಯಾಗಿರುವ ಸಿಂಹ ತನ್ನ ನರಭಕ್ಷಣೆಯನ್ನು ಮುಂದುವರೆಸುತ್ತಲೇ ಇದೆ.



ತುಮಕೂರು: ನೂರ್‌ಸೀಮಾಳ ರೇಪ್ ಅಂಡ್ ಮರ್ಡರ್



ಕಾಮುಕರ ಪೈಶಾಚಿಕತನಕ್ಕೆ ಮತ್ತೊಂದು ಹುಡುಗಿ ಬಲಿಯಾಗಿದ್ದಾಳೆ. ಇನ್ನೇನು ಒಂದು ವರ್ಷದಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಬಿಇ ಡಿಗ್ರಿ ಪಡೆದುಕೊಂಡು ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ಹೊರಟಿದ್ದವಳು ನೂರ್‌ಸೀಮಾ. ಉತ್ತಮ ಉದ್ಯೋಗಕ್ಕೆ ಸೇರಿಕೊಂಡು ತನ್ನನ್ನು ಸಾಕಿ, ಸಲುಹಿ, ವಿದ್ಯಾಭ್ಯಾಸ ಕೊಡಿಸಿದ ತಂದೆತಾಯಿಗಳನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂಬ ಕನಸುಗಳನ್ನು ಕಟ್ಟಿಕೊಂಡಿದ್ದ ಮುಗ್ಧ ಹುಡುಗಿ ನೂರ್‌ಸೀಮಾ.

ಆದರೆ ಅವಳ ಕನಸುಗಳು ನನಸಾಗುವ ಮುನ್ನ ಆಕೆಯ ಸ್ನೇಹಿತರೇ ಸೇರಿಕೊಂಡು ಅವಳ ಅತ್ಯಾಚಾರ ಮಾಡಿ ಆಕೆಯನ್ನು ಕೊಲೆಗೈದಿದ್ದಾರೆ. ನ್ಯಾಯ ದೊರಕಿಸಿ ಕೊಡಬೇಕಿದ್ದ ಪೊಲೀಸರು ಕಾಮುಕ ಕೊಲೆಗಡುಕರ ರಕ್ಷಣೆಗೆ ನಿಂತಿದ್ದಾರೆ. ನೂರ್‌ಸೀಮಾ ಮತ್ತು ಆಕೆಯ ಕೊಲೆಗಡುಕ ವಿದ್ಯಾರ್ಥಿಗಳು ಓದುತ್ತಿದ್ದ ಹೆಚ್‌ಎಂಎಸ್ ಇಂಜಿನಿಯರಿಂಗ್ ಕಾಲೇಜಿಗೆ ಕೆಟ್ಟ ಹೆಸರು ಬರುತ್ತೆ, ತಮ್ಮ ಡೊನೇಷನ್ ಬಿಸಿನೆಸ್ ಹಾಳಾಗುತ್ತೆ ಎಂದು ಅದರ ಆಡಳಿತ ವರ್ಗ ಕೊಲೆಯನ್ನು ಮುಚ್ಚಿಹಾಕಲು ಪ್ರಯತ್ನಿಸುತ್ತಿದೆ.



ಚೇರ್ಮನ್ ಶಫಿ

ಯಾರು ಈ ನೂರ್‌ಸೀಮಾ?

ನೂರ್‌ಸೀಮಾ ಎಂಬ ಈ ಸುಂದರ ಮುಸ್ಲಿಮ್ ಹುಡುಗಿಗೆ ಇನ್ನೂ ಇಪ್ಪತ್ತು ವರ್ಷ ತುಂಬಿರಲಿಲ್ಲ. ಮಂಡ್ಯ ಜಿಲ್ಲೆಯ ಮಳವಳ್ಳಿಯ ಪೇಟೆಬೀದಿಯಲ್ಲಿರುವ ಮೀರ್ ಅಬ್ದುಲ್ ಖಾನ್ ಮತ್ತು ಜರೀನಾ ಎಂಬ ದಂಪತಿಗಳ ಎರಡನೇ ಮಗಳು. ವೃತ್ತಿಯಲ್ಲಿ ರೇಷ್ಮೆ ವ್ಯಾಪಾರಿಯಾಗಿರುವ ಅಬ್ದುಲ್ ಖಾನ್ ಅಂಥಾ ಶ್ರೀಮಂತರೇನಲ್ಲ. ಮಧ್ಯಮ ವರ್ಗಕ್ಕೆ ಸೇರಿದ ಸಾಮಾನ್ಯ ಕುಟುಂಬವದು. ಮಕ್ಕಳೇ ಅವರಿಗೆ ಭವಿಷ್ಯ. ಅದರಲ್ಲೂ ತಮ್ಮ ಎರಡನೇ ಮಗಳಾದ ನೂರ್‌ಸೀಮಾ ಓದುವುದರಲ್ಲಿ ಒಂದಿಷ್ಟು ಚುರುಕಾಗಿದ್ದರಿಂದ ಆಕೆಗೆ ಎಂಜಿನಿಯರ್ ಮಾಡಬೇಕೆಂದು ಅವಳ ತಂದೆ ತಾಯಿ ಆಶೆ ಪಟ್ಟಿದ್ದರು. ತಮಗೆ ಒಂದೊತ್ತು ಊಟವಿಲ್ಲದಿದ್ದರೂ ಪರವಾಗಿಲ್ಲ, ಆಕೆಯ ಓದಿಗೆ ತೊಂದರೆಯಾಗಬಾರದೆಂದು ಕಷ್ಟಪಟ್ಟು ದುಡಿಯುತ್ತಿದ್ದರು.

ನೂರ್‌ಸೀಮಾ ಹೈಸ್ಕೂಲ್ ಓದಿದ್ದು ಮಳವಳ್ಳಿಯ ಕ್ರಿಶ್ಚಿಯನ್ ಕಾನ್ವೆಂಟಿನಲ್ಲಿ. ಆಕೆ ಎಂಥ ಪ್ರತಿಭಾವಂತ ವಿದ್ಯಾರ್ಥಿನಿ ಎಂದರೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಇಡೀ ಹೈಸ್ಕೂಲಿನಲ್ಲೇ ಅತ್ಯುತ್ತಮ ಅಂಕ ಪಡೆದು ಹತ್ತು ಸಾವಿರ ರೂಪಾಯಿಗಳ ಬಹುಮಾನವನ್ನೂ ಪಡೆದಿದ್ದಳು. ನಂತರ ಆಕೆ ಮಳವಳ್ಳಿಯ ಶಾಂತಿನಿಕೇತನ ಕಾಲೇಜಿಗೆ ಸೇರಿ ಅಲ್ಲಿಯೂ ವಿಜ್ಞಾನ ವಿಭಾಗದಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದಳು. ನಂತರ ಆಕೆ ಎಂಜಿನಿಯರ್ ಮಾಡಬೇಕೆಂದು ಆಶಿಸಿದ್ದ ಅವಳ ಅಪ್ಪ ಅಬ್ದುಲ್‌ಖಾನ್ ಮತ್ತು ತಾಯಿ ಜರೀನಾ ನೂರ್‌ಸೀಮಾಳನ್ನು ತುಮಕೂರಿನ ಹೆಚ್.ಎಂ.ಎಸ್ ಇಂಜಿನಿಯರಿಂಗ್ ಕಾಲೇಜಿಗೆ ಸೇರಿಸಿದ್ದರು. ಅಲ್ಲಿಯತನಕ ತಾವು ದುಡಿದು ಉಳಿಸಿದ್ದ ಹಣವನ್ನೆಲ್ಲಾ ಸೇರಿಸಿ ಡೊನೇಷನ್, ಫೀಜು, ಹಾಸ್ಟೆಲ್ ಬಾಬ್ತು – ಎಂದು ಎಲ್ಲಾ ಖರ್ಚು ವೆಚ್ಚಗಳನ್ನು ಭರಿಸಿದ್ದರು. ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗಕ್ಕೆ ಸೇರಿದ ನೂರ್‌ಸೀಮಾ ಕೂಡ ತಂದೆ-ತಾಯಿಗಳ ನಿರೀಕ್ಷೆಯನ್ನು ಹುಸಿಮಾಡದಂತೆ ಚೆನ್ನಾಗಿಯೇ ಓದುತ್ತಿದ್ದಳು. ಇನ್ನೇನು ಒಂದು ವರ್ಷದಲ್ಲಿ ಮಗಳು ಎಂಜಿನಿಯರ್ ಪದವೀಧರೆಯಾಗಿ ಮನೆಗೆ ಮರಳುತ್ತಾಳೆ ಎಂದು ಅಬ್ದುಲ್ ಖಾನ್ ಮತ್ತು ಜರೀನಾ ಕಾಯುತ್ತಿದ್ದರು. ಆದರೆ ನೂರ್‌ಸೀಮಾ ಎಂಜಿನಿಯರ್ ಪದವೀಧರೆಯಾಗಿ ಬರಲಿಲ್ಲ, ಮೈಮೇಲೆ ಪರಚಿದ ಗಾಯಗಳಿರುವ ಹೆಣವಾಗಿ ಬಂದಳು.

ಅವತ್ತು ನಡೆದಿದ್ದೇನು?

ನೂರ್‌ಸೀಮಾ ಒಂದಿಷ್ಟು ಲವಲವಿಕೆಯ ಸ್ವಭಾವದವಳು. ಎಲ್ಲವನ್ನೂ ಆಳವಾಗಿ ಅವಲೋಕಿಸಿ ನಿರ್ಧಾರಕ್ಕೆ ಬರುವ ಸೂಕ್ಷ್ಮಜೀವಿ. ಎಲ್ಲರೊಂದಿಗೆ ಬೆರೆಯುತ್ತಾ, ಹೊಸ ಹೊಸ ಸ್ನೇಹಿತರನ್ನು ಮಾಡಿಕೊಳ್ಳುತ್ತಾ, ಎಲ್ಲರೊಂದಿಗೂ ಸಲುಗೆಯಿಂದಿರುವ ಸ್ನೇಹಜೀವಿ. ಈ ಸ್ವಭಾವದಿಂದಲೇ ಆಕೆ ಕಾಲೇಜಿನಲ್ಲಿ, ಹಾಸ್ಟೆಲ್‌ನಲ್ಲಿ ಸ್ನೇಹಿತ-ಸ್ನೇಹಿತೆಯರ ದೊಡ್ಡ ಹಿಂಡನ್ನೇ ಸಂಪಾದಿಸಿಕೊಂಡಿದ್ದಳು. ಅವರಲ್ಲಿ ಉತ್ತರ ಪ್ರದೇಶ ಮೂಲದ ಸುಖದೇವ್ ಸಿಂಗ್ ಕೂಡ ಒಬ್ಬ.

ಸುಖದೇವ್ ಸಿಂಗ್ ಮತ್ತು ನೂರ್‌ಸೀಮಾ ಇಬ್ಬರೂ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಅಧ್ಯಯನ ಮಾಡುತ್ತಿದ್ದ ಕ್ಲಾಸ್‌ಮೇಟ್‌ಗಳು. ಸಹಜವಾಗಿಯೇ ಅವರಿಬ್ಬರಿಗೂ ಪರಿಚಯವಾಗಿದೆ. ಪರಿಚಯ ಸ್ನೇಹಕ್ಕೆ ತಿರುಗಿದೆ. ಸುಖದೇವ್ ಕೂಡ ಒಬ್ಬ ಉತ್ತಮ ಸ್ನೇಹಿತನಂತೆಯೇ ಆಕೆಯೊಂದಿಗಿದ್ದ. ಆದರೆ, ಇದೇ ಸ್ನೇಹಿತ ಮುಂದೊಂದು ದಿನ ಆಕೆಯನ್ನು ಹರಿದು ಮುಕ್ಕುತ್ತಾನೆಂದು ಆಕೆ ನಿರೀಕ್ಷಿಸುವುದಾದರೂ ಹೇಗೆ?

ಅದು ಮೇ ತಿಂಗಳ ಹದಿನಾಲ್ಕನೇ ತಾರೀಖು. ಈ ಭೂಮಿಯ ಮೇಲೆ ನೂರ್‌ಸೀಮಾಳ ಕೊನೆಯ ದಿನ.



ಸುಖದೇವ್ ಸಿಂಗ್

ಅದರ ಹಿಂದಿನ ದಿನ ಹಿರಿಯ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವಿತ್ತು. ಅದರಲ್ಲಿ ನೂರ್‌ಸೀಮಾ ಬಹಳ ಕ್ರಿಯಾಶೀಲವಾಗಿ ಭಾಗವಹಿಸಿ ಹಾಸ್ಟೆಲ್‌ಗೆ ಮರಳಿದ್ದಳು. ಮರುದಿನ, ಅಂದರೆ ಮೇ 14ರಂದು ಬೆಳಗ್ಗೆ 9.30ರ ಸಮಯದಲ್ಲಿ ಹಾಸ್ಟೆಲ್‌ನಲ್ಲಿಯೇ ತಿಂಡಿ ತಿಂದು ತನ್ನ ರೂಮ್‌ನಲ್ಲಿ ವಿಶ್ರಾಂತಿ ಪಡೆಯುತ್ತಿದ್ದಳು. ಈ ಮಾಹಿತಿಯನ್ನು ಹಾಸ್ಟೆಲ್ ವಾರ್ಡನ್ ಮತ್ತು ಉಪನ್ಯಾಸಕಿಯಾಗಿರುವ ಲತಾ ಅವರೇ ಖಚಿತಪಡಿಸುತ್ತಾರೆ.

ನಂತರ ಬೆಳಗ್ಗೆ 10.30ರ ಹೊತ್ತಿಗೆ ಸುಖದೇವ್ ಸಿಂಗ್ ತನ್ನ ಸ್ಯಾಂಟ್ರೋ ಕಾರಿನಲ್ಲಿ (ಯುಪಿ 70, ಪಿ-0628) ನೂರ್‌ಸೀಮಾಳನ್ನು ಕರೆದುಕೊಂಡು ಹೋಗಿದ್ದಾನೆ. ಮಧ್ಯಾಹ್ನ 4.30 ಹೊತ್ತಿಗೆ ಮೈಮೇಲೆ ಪರಚಿದ ಗಾಯಗಳಿರುವ ಆಕೆಯ ಶವ ಹಾಸ್ಟೆಲ್‌ಗೆ ಬಂದಿದೆ!

"ನಾನು ನೂರ್‌ಸೀಮಾಳನ್ನು ನನ್ನ ಕಾರಿನಲ್ಲಿ ಕರೆದುಕೊಂಡು ಹೋಗಿದ್ದು ನಿಜ. ನಾವಿಬ್ಬರೂ ಸರಸ್ವತಿಪುರಂನ ಐದನೇ ಕ್ರಾಸ್‌ನಲ್ಲಿರುವ ನನ್ನ ಬಾಡಿಗೆ ಮನೆಗೆ ಹೋಗಿದ್ದೆವು. ಅಲ್ಲಿಂದ ಕಾರ್ ಪಾರ್ಕಿಂಗ್ ಮಾಡುವುದಕ್ಕಾಗಿ ಬಾಡಿಗೆ ಪಡೆದಿರುವ ಸರಸ್ವತೀಪುರಂನ ಏಳನೇ ಕ್ರಾಸ್‌ನಲ್ಲಿರುವ ಕಾರ್‌ಶೆಡ್‌ಗೆ ಹೋದೆವು. ಅಲ್ಲಿ ಕಾರ್‌ನಲ್ಲಿ ಕುಳಿತು ಮಾತನಾಡುತ್ತಿದ್ದಾಗ ಎಸಿ ಆನ್ ಆಗಿದ್ದರಿಂದ ಕಾರ್ಬನ್ ಮೊನಾಕ್ಸೈಡ್ ಉತ್ಪತ್ತಿಯಾಗಿ ಇಬ್ಬರೂ ಪ್ರಜ್ಞೆ ತಪ್ಪಿ ಬಿದ್ದೆವು. ನಂತರ ನನಗೆ ಎಚ್ಚರವಾದಾಗ ನೂರ್ ಸೀಮಾ ಇನ್ನೂ ಪ್ರಜ್ಞಾಹೀನವಾಗಿಯೇ ಇದ್ದಳು. ಆಕೆಯ ಮೂಗಿನಲ್ಲಿ ರಕ್ತ ಸೋರುತ್ತಿತ್ತು. ತಕ್ಷಣ ನಾನು ಆಕೆಯನ್ನು ಕರೆದುಕೊಂಡು ಆಸ್ಪತ್ರೆಗೆ ಬಂದೆ. ಅಷ್ಟರಲ್ಲಿ ಆಕೆ ಸತ್ತು ಹೋಗಿದ್ದಳು" ಇದು ಸುಖದೇವ್ ಸಿಂಗ್ ಹೇಳುವ ಕಾಗಕ್ಕ-ಗುಬ್ಬಕ್ಕನ ಕತೆ. ಆಕೆಯ ಮೈಮೇಲೆ ಪರಚಿದ, ಕಚ್ಚಿದ ಗಾಯದ ಗುರುತುಗಳಿರುವ ಬಗ್ಗೆ, ತುಟಿ, ಮುಖ ನೀಲಿಬಣ್ಣಕ್ಕೆ ತಿರುಗಿರುವುದರ ಬಗ್ಗೆ ಅವನಲ್ಲಿ ಉತ್ತರವಿಲ್ಲ.

ನೂರ್‌ಸೀಮಾ ಹೀಗೆ ಅನುಮಾನಾಸ್ಪದವಾಗಿ ಕೊಲೆಯಾಗಿರುವುದು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯ ಎಂಬ ಸಾಮಾಜಿಕ ಸಂಘಟನೆಯೊಂದರ ಕಾರ್ಯಕರ್ತರಿಗೆ ಗೊತ್ತಾಗುತ್ತಿದ್ದಂತೆಯೇ ಅವರು ನೇರವಾಗಿ ಆಸ್ಪತ್ರೆಗೆ ಬಂದು ಸುಖದೇವ್‌ನನ್ನು ವಿಚಾರಿಸಿದ್ದಾರೆ. ತಡಬಡಿಸುತ್ತಾ ಆತ "ನನ್ನ ರೂಮ್‌ನಲ್ಲಿ ಬಿದ್ದಿದ್ದಳು, ಆಸ್ಪತ್ರೆಗೆ ಸೇರಿಸಲು ತಂದಿದ್ದೇನೆ" ಎಂದು ಜಾರಿಕೊಳ್ಳಲು ಪ್ರಯತ್ನ ಮಾಡಿದ. ಅದು ಸಹಜ ಸಾವೆಂಬಂತೆ ಕಾಣದ ಕಾರಣ ಪೊಲೀಸರಿಗೆ ಮಾಹಿತಿ ತಿಳಿಸಿದ್ದಾರೆ.

ವಾಸ್ತವ ಏನೆಂದರೆ, ಸುಖದೇವ್ ಸಿಂಗ್ ಡ್ರಗ್ಸ್‌ಗೆ ದಾಸನಾಗಿರುವ ವ್ಯಕ್ತಿ. ಅವನಿಗೆ ಅಂಥವರೇ ಒಂದಿಷ್ಟು ಪುಂಡ ಗೆಳೆಯರಿದ್ದಾರೆ. ಅವರೆಲ್ಲಾ ಸೇರಿ ಆಕೆಯನ್ನು ಎಲ್ಲಿಗೆ ಕರೆದೊಯ್ದರೋ ಗೊತ್ತಿಲ್ಲ. ಒಟ್ಟಿನಲ್ಲಿ ಆಕೆಯನ್ನು ಎಲ್ಲರೂ ಸೇರಿ ರೇಪ್ ಮಾಡಿ ಕೊನೆಗೆ ಕೊಲೆಗೈದಿದ್ದಾರೆ. ಇದನ್ನು ಶವದ ಮರಣೋತ್ತರ ಪರೀಕ್ಷೆ ನಡೆಸಿದ ಡಾ.ಮಂಜುನಾಥ್ ಅವರೇ ಖಚಿತಪಡಿಸಿದ್ದಾರೆ.

ಪೊಲೀಸರು ರೇಪಿಸ್ಟರ ಬೆನ್ನಿಗೆ ನಿಂತರು!

ಬಹುತೇಕ ಎಲ್ಲಾ ರೇಪ್ ಅಂಡ್ ಮರ್ಡರ್ ಕೇಸುಗಳಲ್ಲಿ ಸಾಮಾನ್ಯವಾಗಿ ನಡೆಯುವ [illegible] ಮೊದಲು ಕಾಮುಕ ಕೊಲೆಗಡುಕರು [illegible] ಹೆಂಗಳೆಯರನ್ನು ಹರಿದು ಮುಕ್ಕಿ ಕೊಲೆಗೈಯ್ಯುತ್ತಾರೆ. ನಂತರ ಪೊಲೀಸರು ಕೊಲೆಯಾದವರ ಬಗ್ಗೆಯೇ [illegible] ಆರೋಪ ಮಾಡುತ್ತಾ, [illegible] ಮೊದಲೇ ನೊಂದಿರುವ ತಂದೆತಾಯಿಗಳ [illegible] ಬರೆ ಎಳೆಯುತ್ತಾರೆ. ನೂರ್‌ಸೀಮಾ ಕೇಸಿನಲ್ಲೂ ಆಗುತ್ತಿರುವುದು ಇದೇ.

ಸುಖದೇವ್ ಸಿಂಗ್ ಉತ್ತರಪ್ರದೇಶದ ಶ್ರೀಮಂತ ಕುಟುಂಬದವನು. ಆತನ ತಂದೆ ಅದ್ಯಾವುದೋ ಬಹುರಾಷ್ಟ್ರೀಯ ಕಂಪೆನಿಯೊಂದರಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದಾನೆ. ಈತನ ಸಂಬಂಧಿಕರಲ್ಲಿ ಕೆಲವರು ಉತ್ತರ ಪ್ರದೇಶ ಪೊಲೀಸ್ ಇಲಾಖೆಯಲ್ಲಿ ಉನ್ನತ ಅಧಿಕಾರಿಗಳಾಗಿದ್ದಾರೆ. ಹೀಗೆ, ಸುಖದೇವ್‌ಗೆ ಅಪ್ಪನ ದುಡ್ಡಿದೆ, ಸಂಬಂಧಿಕರ ಅಧಿಕಾರವಿದೆ. ಈ ಕಾರಣಕ್ಕಾಗಿಯೇ ಅವನನ್ನು ನಾಮಕಾವಸ್ತೆಗಾಗಿ ಬಂಧಿಸಿದ್ದು ಬಿಟ್ಟರೆ ತನಿಖೆ ಒಂದು ಹಜ್ಜೆ ಮುಂದೆ ಹೋಗಿಲ್ಲ. ತನಿಖೆಗಾಗಿ ನೇಮಿಸಲಾಗಿರುವ ಸರ್ಕಲ್ ಇನ್ಸ್‌ಪೆಕ್ಟರ್ ಸಣ್ಣ ತಿಮ್ಮಯ್ಯ ಸುಖದೇವ್‌ನಿಂದ ಅದೆಷ್ಟು ಆಮೇಧ್ಯ ತಿಂದಿದ್ದಾನೋ ಗೊತ್ತಿಲ್ಲ, ರಜೆ ಹಾಕಿ ಮಾಯವಾಗಿದ್ದಾನೆ. ಡಿವೈಎಸ್‌ಪಿ ಬಸವರಾಜು ತನ್ನ ಕಿಕ್ಕಲು ಮಾತುಗಳಲ್ಲೇ ತನಿಖೆ ಮಾಡಿಸುತ್ತಿದ್ದಾನೆ.

ಪೊಲೀಸರ ಈ ನಿರ್ಲಕ್ಷ್ಯದ ವಿರುದ್ಧ ಈಗಾಗಲೇ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯ, ಕರ್ನಾಟಕ ರಕ್ಷಣಾ ವೇದಿಕೆ, ಜಯಕರ್ನಾಟಕ ಮುಂತಾದ ಸಂಘಟನೆಗಳ ಕಾರ್ಯಕರ್ತರು ಬೀದಿಗಿಳಿದಿದ್ದಾರೆ. ಆದರೂ [illegible]

● ಲಕ್ಷ್ಮಣ್ ಚೀರನಹಳ್ಳಿ

ಇದರಲ್ಲಿ ಶಫಿಯ ಪಾಲೆಷ್ಟು?

ಕಾಮುಕ ಕೊಲೆಗಡುಕ ಸುಖದೇವ್ ಮತ್ತು ಅಮಾಯಕ ಬಲಿಪಶು ನೂರ್‌ಸೀಮಾ ಇಬ್ಬರೂ ಓದುತ್ತಿದ್ದ ಹೆಚ್.ಎಂ.ಎಸ್ ಎಂಜಿನಿಯರಿಂಗ್ ಕಾಲೇಜ್‌ಗೆ ಮಾಜಿ ಶಾಸಕ ಹಾಗೂ ಹಾಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶಫಿ ಅಲಿಯಾಸ್ ಶಫಿ ಮೊಹಮ್ಮದ್‌ನೇ ಒಡೆಯ. ಪ್ರಾಯಶಃ ಇಲ್ಲಿ ಮುಸ್ಲಿಮ್ ಹುಡುಗಿಯರಿಗೆ ರಕ್ಷಣೆ ಇರುತ್ತೆ ಎಂಬ ಕಾರಣಕ್ಕೋ ಏನೋ ನೂರ್‌ಸೀಮಾಳ ತಂದೆತಾಯಿಗಳು ಹುಡುಕಿ ಹುಡುಕಿ ಆಕೆಯನ್ನು ಇಲ್ಲಿಗೆ ತಂದು ಸೇರಿಸಿದ್ದರೋ ಏನೋ? ಅದೂ ಈಗ ಹುಸಿಯಾಗಿದೆ.

ಶಫಿ ನೆತ್ತಿಗೆ ಈಗ ದುಡ್ಡಿನ ಅಮಲು ಏರಿಬಿಟ್ಟಿದೆ. ಈತನ ಹೆಚ್.ಎಂ.ಎಸ್. ಎಂಜಿನಿಯರಿಂಗ್ ಕಾಲೇಜು ಹಣವನ್ನು ಸುರಿಸುವ ಮರವಾಗಿ ಬೆಳೆದುಬಿಟ್ಟಿದೆ. ಅದರಲ್ಲಿ ಉತ್ತರ ಭಾರತದಿಂದ ಬರುವ ವಿದ್ಯಾರ್ಥಿಗಳ ಸಂಖ್ಯೆಯೇ ಜಾಸ್ತಿಯಿದೆ. ಈಗ ನೂರ್‌ಸೀಮಾಳನ್ನು ರೇಪ್ ಮಾಡಿ ಕೊಲೆಗೈದಿರುವುದು ಉತ್ತರ ಭಾರತದ ವಿದ್ಯಾರ್ಥಿಯೇ. ಇದೇನಾದರೂ ಬಯಲಿಗೆ ಬಿದ್ದರೆ ಶಫಿಗೆ ಎರಡು ಕಡೆಯಿಂದ ಲಾಸ್ ಆಗುತ್ತೆ. ಒಂದು, ಯಾವ ತಂದೆತಾಯಿಗಳೂ ತಮ್ಮ ಹೆಣ್ಣುಮಕ್ಕಳನ್ನು ಶಫಿಯ ಕಾಲೇಜಿಗೆ ಕಳಿಸುವುದಿಲ್ಲ, ಎರಡನೆಯದು, ಕೊಲೆಗೈದ ಉತ್ತರ ಭಾರತದ ವಿದ್ಯಾರ್ಥಿಯೊಬ್ಬನನ್ನು ಪೊಲೀಸ್‌ಗೆ ಒಪ್ಪಿಸಿದರೆ ಉತ್ತರ ಭಾರತದಿಂದ ಕಾಲೇಜಿಗೆ ಸೇರುವ ವಿದ್ಯಾರ್ಥಿಗಳ ಸಂಖ್ಯೆಯ ಮೇಲೂ ಪರಿಣಾಮ ಬೀರುತ್ತೆ. ಹೀಗೆ ಎರಡೂ ಕಡೆಯಿಂದ ಕೆಟ್ಟ ಹೆಸರು ಬಂದು ಕಾಲೇಜಿಗೆ ಸೇರುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತದೆ. ಅರ್ಥಾತ್ ಶಫಿಗೆ ಸಿಗುವ ಡೊನೇಷನ್ ನಿಲ್ಲುತ್ತದೆ. ಆದ್ದರಿಂದಲೇ ಆತ ನ್ಯಾಯದ ಪರವಾಗಿ ನಿಲ್ಲುವುದನ್ನು ಬಿಟ್ಟು "ಇದು ರೇಪ್ ಅಂಡ್ ಮರ್ಡರ್ ಅಲ್ಲ, ಆಕ್ಸಿಡೆಂಟ್" ಎಂದು ಒದರುತ್ತಿದ್ದಾನೆ.

ಶಫಿ ಈ ಕಾಲೇಜು ಪ್ರಾರಂಭಿಸಿದ್ದು ದುಡ್ಡು ಉದುರಿಸುವುದಕ್ಕೇ ಹೊರತು ಉತ್ತಮ ಶಿಕ್ಷಣ ನೀಡುವುದಕ್ಕಲ್ಲ. ದುಡ್ಡು ಕೀಳುವುದಕ್ಕೆ ತಕ್ಕಂತೆ ಉತ್ತಮ ಗುಣಮಟ್ಟದ ಶಿಕ್ಷಣ, ಪರಿಸರ ಒದಗಿಸಬೇಕೆಂಬ ಕನಿಷ್ಠ ಕಾಳಜಿಯೂ ಆತನಿಗಿಲ್ಲ. ಕಾಲೇಜಿನಲ್ಲಿ ರ್‍ಯಾಗಿಂಗ್ ಎಗ್ಗಿಲ್ಲದೇ ಸಾಗಿದ್ದರೂ ಅದರ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಹಾಸ್ಟೆಲ್ ವಿದ್ಯಾರ್ಥಿಗಳು ಡ್ರಗ್‌ಗೆ ಅಡಿಕ್ಟ್ ಆಗಿದ್ದರೂ ಅದರ ನಿವಾರಣೆಗೆ ಕ್ರಮ ಕೈಗೊಂಡಿಲ್ಲ.

ದುಡ್ಡು ಸರಿಯಾಗಿ ಬರುತ್ತಿದೆಯಲ್ಲಾ ಅಷ್ಟು ಸಾಕು ಅವನಿಗೆ. ●

ಹೊರಗಿನ ವಿದ್ಯಾರ್ಥಿಗಳ ಗೂಂಡಾಗಿರಿ



[illegible]

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಹಾವೇರಿ: ಬಿಜೆಪಿ ಮಾನ ಹರಾಜಿಗಿಟ್ಟ ಕರಿಬಸಮ್ಮನವರ್



"ಇನ್ನೊಂದಿಷ್ಟು ದಿನ ಮಂಜುಳಾ ಕರಿಬಸಮ್ಮನವರ್ ಎಂಬ ಅಟ್ರಾಸಿಟಿ ಕೇಸುಗಳ ಪ್ರವೀಣೆ ಹಾವೇರಿ ನಗರ ಸಭಾಧ್ಯಕ್ಷೆಯಾಗಿ ಮುಂದುವರೆದದ್ದೇ ಆದರೆ ನಗರದಲ್ಲಿ ಬಿಜೆಪಿ ನೆಲಸಮವಾಗುವುದು ಗ್ಯಾರಂಟಿ ಎನಿಸುತ್ತಿದೆ. ಒಂದು ಕಾಲಕ್ಕೆ ತುತ್ತು ಅನ್ನಕ್ಕೂ ಗತಿಯಿಲ್ಲದೇ ಮೈತುಂಬಾ ಸಾಲಸೋಲ ಮಾಡಿಕೊಂಡು ಸಾಲಗಾರರಿಗೆ ಮುಖ ತೋರಿಸಲಾಗದೆ ತಲೆಮರೆಸಿಕೊಂಡು ತಿರುಗುತ್ತಿದ್ದ ಮಂಜುಳಾ ಈ ಹೊತ್ತು ಬಿಜೆಪಿ ಕೊಟ್ಟ ಅಧಿಕಾರದಿಂದಾಗಿ ಕೋಟ್ಯಾಧಿಪತಿಯಾಗಿದ್ದಾಳೆ. ನಗರಸಭೆಯ ಅಧ್ಯಕ್ಷಳಾಗಿ ದಿನಬೆಳಗಾಗುವಷ್ಟರಲ್ಲಿ ಆಕೆ 30-40 ಲಕ್ಷ 'ದುಡಿಮೆ' ಮಾಡಿದ್ದಾಳೆ. ಆ ಮೂಲಕ ಬಿಜೆಪಿಗೂ 'ಕೀರ್ತಿ' ತರುತ್ತಿದ್ದಾಳೆ.


ನಗರ ಸಭಾಧ್ಯಕ್ಷೆ ಮಂಜುಳಾ ಮತ್ತವಳ ಗಂಡ ಶೇಖರ್ ಒಂದು ವರ್ಷದ ಹಿಂದೆ ನಾಮ ಬಳಿಯುವ ಗಿರಾಕಿಗಳೆಂದೇ ಫೇಮಸ್ ಆದವರು. ಕೊಟ್ಟ ದುಡ್ಡು ಕೇಳಲು ಹೋದವರಿಗೆ ಅಟ್ರಾಸಿಟಿ ಕೇಸು ಎಂಬ ಧಮಕಿ ಹಾಕಿ ಲಕ್ಷಗಟ್ಟಲೇ ನಾಮ ಹಾಕಿದವರು. ಸಾಲದೆಂಬಂತೆ ಆಶ್ರಯ ಕೊಟ್ಟ ಮನೆ ಮಾಲಿಕರಿಗೂ ಅಟ್ರಾಸಿಟಿ ಕೇಸೆಂಬ ಭೂತ ತೋರಿಸಿ ಇಲ್ಲಿಯತನಕ ಬಾಡಿಗೆ ಕೊಡದೆ ಅದೇ ಮನೆಯಲ್ಲಿದ್ದಾರೆ. ಇಷ್ಟೆಲ್ಲಾ ಕುಖ್ಯಾತಿ ಹೊಂದಿರುವ ಮಂಜುಳಾಳನ್ನು ರಾಜಕೀಯಕ್ಕೆ ಕರೆದುಕೊಂಡು ಬಂದು ಹೊಸ ಬದುಕು ಕೊಟ್ಟವರು ಮಾಜಿ ಎಮ್ಮೆಲ್ಲೆ ಮತ್ತು ಹಾಲಿ ಎಮ್ಮೆಲ್ಸಿ ಶಿವರಾಜ ಸಜ್ಜನ.


ಆಕೆಯನ್ನು ನಗರ ಸಭಾಧ್ಯಕ್ಷಳನ್ನಾಗಿಯೂ ಮಾಡಿದರು ಸಜ್ಜನ ಎಂಬ ಪುಣ್ಯಾತ್ಮ. ಆಕೆ ಅಧ್ಯಕ್ಷಳಾಗಿದ್ದೇ ತಡ, ನಗರಸಭೆಯ ಪೌರಾಯುಕ್ತ ಕೆ.ಎಚ್.ಹಳ್ಳೇಳ್ಳರ್ ಮತ್ತು ಕಂದಾಯ ಅಧಿಕಾರಿ ಎಚ್.ಜಿ.ಬಂಡಿವಡ್ಡರ ಎಂಬ ಹರಾಮ್‌ಕೋರರನ್ನು ಬಗಲಲ್ಲಿಟ್ಟುಕೊಂಡು ಇಡೀ ನಗರ ಸಭೆಯನ್ನು ಗುಡಿಸಿಗುಂಡಾಂತರ ಮಾಡಿದ್ದಾಳೆ. ಅಸಲಿಗೆ ಹಳ್ಳೇಳ್ಳರ ಮತ್ತು ಬಂಡೀವಡ್ಡರ ಕೂಡ ಮಂಜುಳಾಳಷ್ಟೇ ಅಟ್ರಾಸಿಟಿ ವೀರರು ಎಂಬುದನ್ನಿಲ್ಲಿ ಹೇಳಲೇಬೇಕು.

ಅಧಿಕಾರಕ್ಕೇರಿದ ಒಂದೇ ವರ್ಷದಲ್ಲಿ ಮಂಜುಳಾ 15 ಲಕ್ಷ ರೂ. ಕಿಮ್ಮತ್ತಿನ ಮನೆಯೊಂದನ್ನು ಎಬ್ಬಿಸಿದ್ದಾಳೆ, ಕವಾಕನಕಾಪುರ ರಸ್ತೆಯ ಬೈಪಾಸ್ ಹತ್ತಿರ 10 ಲಕ್ಷ ಕಿಮ್ಮತ್ತಿನ ಜಮೀನು ಖರೀದಿಸಿದ್ದಾಳೆ. ಎರಡು ಇಂಡಿಕಾ ಕಾರುಗಳಿಗೆ ಬೇನಾಮಿ ಒಡತಿಯಾಗಿದ್ದಾಳೆ. ಹೀಗೆ ಕೇವಲ ಒಂದು ವರ್ಷದ ಹಿಂದೆ ಏನೂ ಗತಿಯಿಲ್ಲದ ಮಂಜುಳಾ ಈ ಹೊತ್ತು ಏನಿಲ್ಲವೆಂದರೂ ಒಂದು ಕೋಟಿಗೆ ತೂಗುತ್ತಾಳೆ ಎಂದರೆ ಹಾವೇರಿ ನಗರಸಭೆಯ ಗತಿ ಏನಾಗಿರಬೇಡ?

ಮೊದಲೇ ಮಂಜುಳಾ ಅಟ್ರಾಸಿಟಿ ಕೇಸಿನ ನಟೋರಿಯಸ್ ಹಿನ್ನೆಲೆಯುಳ್ಳವಳಾದ್ದರಿಂದ ಆಕೆ


ಸಿ.ಎಂ.ಉದಾಸಿ




ಶಿವರಾಜ್ ಸಜ್ಜನರ್


ನೆಹರು ಓ...ರ್

ಮಾಡುತ್ತಿರುವ ದಗಲ್ಬಾಜಿ ದಂಧೆಗಳನ್ನು ಬಯಲಿಗೆಳೆಯುವುದಕ್ಕೆ ಯಾವೊಬ್ಬ ಅಧಿಕಾರಿಯೂ, ಯಾವೊಬ್ಬ ಸದಸ್ಯನೂ ಮುಂದೆ ಬರುತ್ತಿಲ್ಲ. ಮರ್ಯಾದಸ್ತ ಕುಟುಂಬದ ಹಿನ್ನೆಲೆಯುಳ್ಳ ನಗರಸಭೆಯ ಉಪಾಧ್ಯಕ್ಷ ವಿಜಯಕುಮಾರ್ ಚನ್ನಿಕಟ್ಟಿ, ಸ್ಥಾಯಿ ಸಮಿತಿ ಅಧ್ಯಕ್ಷ ಕಟ್ಟಿ, ಲತಾ ಗುಂಡೇನಗಳ್ಳಿ, ಗಿರೀಶ ತುಪ್ಪದ ಮುಂತಾದವರು ತಾವಾಯಿತು ತಮ್ಮ ಕೆಲಸವಾಯಿತು ಎಂದುಕೊಂಡಿದ್ದಾರೆ.

ಯಾರಾದರೂ ಮಂಜುಳಾ ಬಗ್ಗೆ ಚಕಾರವೆತ್ತಿದರೆ ಚಪ್ಪಲಿಯಿಂದ ಹೊಡೆಯುವುದಾಗಿ ಬಹಿರಂಗವಾಗಿಯೇ ಆವಾಜ್ ಹಾಕುತ್ತಾಳೆ. ಮೊನ್ನಿನ ಲೋಕಸಭಾ ಚುನಾವಣೆಯ ಸಮಯದಲ್ಲಿ ತಾನು ನಗರದ ಪ್ರಥಮ ಮಹಿಳೆ ಎಂಬುದನ್ನೂ ಮರೆತು ಒಂದು ಇಡೀ ದಿವಸ ಕೈಯಲ್ಲಿ ಬೂಟು ಹಿಡಿದುಕೊಂಡು ತಿರುಗಾಡುತ್ತಾ ಬಿಜೆಪಿಯ ಮಾನ-ಮರ್ಯಾದೆಗಳನ್ನು ಬೀದಿಪಾಲು ಮಾಡಿದ್ದಳು.

ಮೊನ್ನಿನ ಚುನಾವಣೆಗಳು ಸಾಬೀತುಪಡಿಸಿರುವಂತೆ ಹಾವೇರಿಯಲ್ಲಿ ಬಿಜೆಪಿ ಒಂದಿಷ್ಟು ನೆಲೆ ನಿರ್ಮಿಸಿಕೊಂಡಿದೆ. ಆದರೀಗ ಮಂಜುಳಾ ಅದನ್ನು ನೆಲಸಮ ಮಾಡುತ್ತಿದ್ದಾಳೆ. ಇದನ್ನು ಕಂಡು ಬಿಜೆಪಿಯ ಕಾರ್ಯಕರ್ತರೇ ಆಕೆಯ ವಿರುದ್ಧ ತಿರುಗಿಬಿದ್ದಿದ್ದಾರೆ. "ಈಗ ಎಮ್ಮೆಲ್ಸಿ ಚುನಾವಣೆ ಬೇರೆ ಎದುರಾಗುತ್ತಿದೆ. ಇಂಥ ಸಂದರ್ಭದಲ್ಲಿ ಮಂಜುಳಾ ರಂಥ ಅಡ್ನಾಡಿಗಳು ನಗರಸಭೆಯ ಅಧ್ಯಕ್ಷರಾಗಿ ಕುಳಿತುಕೊಂಡರೆ ಅದು ಬಿಜೆಪಿಗೆ ಡ್ಯಾಮೇಜು" ಎಂದು ಅವರೆಲ್ಲಾ ಚಟಪಡಿಸುತ್ತಿದ್ದಾರೆ. ಹೀಗೆ ಬಹಿರಂಗವಾಗಿ ಕಾರ್ಯಕರ್ತರೇ ಆಕೆಯ ವಿರುದ್ಧ ತಿರುಗಿಬಿದ್ದಿದ್ದರೂ ಉದಾಸಿ, ಸಜ್ಜನ ಮತ್ತು ಓಲೇಕಾರರು ಏಕೆ ಆಕೆಯನ್ನು ಕಿತ್ತೆಸೆಯುತ್ತಿಲ್ಲ ಎಂಬುದು ಮಾತ್ರ ಇನ್ನೂ ಯಾರಿಗೂ ಅರ್ಥವಾಗಿಲ್ಲ.

● ಹುರುಳಿಕುಪ್ಪಿ ವಿನಯ್

ಬೀದರ್-ಗುಲ್ಬರ್ಗಾ: ನಾರಮಾರಪಲ್ಲಿ, ಬೆಳಮಗಿ ಗಟಾರಕ್ಕೆ ಬಿದ್ದದ್ದು ಹೇಗೆ?



ರೇವುನಾ...


ಗುರುಪಾದ...

ಹೈದ್ರಾಬಾದ್ ಕರ್ನಾಟಕದ ಪ್ರಮುಖ ಸಂಸದೀಯ ಕ್ಷೇತ್ರಗಳಾದ ಕಲಬುರ್ಗಿ, ಬೀದರ ಹಾಗೂ ರಾಯಚೂರು ಮತಕ್ಷೇತ್ರಗಳಲ್ಲಿ ಈ ಬಾರಿ ಹಿಂದೆಂದಿಗಿಂತಲೂ ಹೆಚ್ಚಿನ ಸ್ಪರ್ಧೆ ಇತ್ತು, ಕಲಬುರ್ಗಿ ಹಾಗೂ ಬೀದರ ಕ್ಷೇತ್ರಗಳಲ್ಲಿ ಕ್ರಮವಾಗಿ ಮಲ್ಲಿಕಾರ್ಜುನ ಖರ್ಗೆ ಮತ್ತು ಧರ್ಮಸಿಂಗ್ ನಿಂತುಕೊಂಡಿದ್ದರಿಂದ ತೀವ್ರ ಕುತೂಹಲ ಕೆರಳಿಸಿತ್ತು. ಈಗ ಇಬ್ಬರೂ ಗೆಲ್ಲುವ ಮೂಲಕ ಚಡ್ಡಿ ತೊಟ್ಟು ತಾಲೀಮು ಶುರುಮಾಡಿದ್ದ ಬಿಜೆಪಿಗಳ ಸ್ಪೀಡ್‌ಗೆ ಇಲ್ಲಿ ಬ್ರೇಕ್ ಹಾಕಿದ್ದಾರೆ.

ಬೀದರ್ ಸಂಸದೀಯ ಮತಕ್ಷೇತ್ರವನ್ನು ದಿ. ರಾಮಚಂದ್ರ ವೀರಪ್ಪ ಎಂಬ ಆಸಾಮಿ ಸತತ ಐದುಬಾರಿ ಗೆಲ್ಲುವ ಮೂಲಕ ಬಿಜೆಪಿಯ ಭದ್ರಕೋಟೆಯನ್ನಾಗಿ ಮಾಡಿಕೊಂಡಿದ್ದರು. ಆದರೆ ಅವರ ನಿಧನದ ನಂತರ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದು ಬಂದಿತ್ತು. ಆಗ ಮಾಜಿ ಸಚಿವ, ಶೋಕಿಲಾಲ ಗುರುಪಾದಪ್ಪ ನಾಗಮಾರಪಲ್ಲಿ ಕಾಂಗ್ರೆಸ್ಸಿನಲ್ಲಿದ್ದರು. ರಾಜ್ಯದಲ್ಲಿ ಬಿಜೆಪಿ ಸರಕಾರ ಬರುತ್ತಲೆ ಎಲ್ಲಿ ತನ್ನ ಡಿಸಿಸಿ ಬ್ಯಾಂಕ್ ಹಾಗೂ ನಾರಂಜಾ ಶುಗರ್ ಫ್ಯಾಕ್ಟರಿಯ ಹಗರಣಗಳೆಲ್ಲ ಬಯಲಿಗೆ ಬಂದು ತಾನು ಬೆತ್ತಲೆಯಾಗುತ್ತೇನೆ ಎಂದು ಹೆದರಿದ ನಾಗಮಾರಪಲ್ಲಿ ಬಿಜೆಪಿಯನ್ನು ಅಪ್ಪಿಕೊಂಡರು. ಕೆಲವೇ ತಿಂಗಳುಗಳ ಹಿಂದೆ ಗೆದ್ದಿದ್ದ ಬೀದರ ವಿಧಾನಸಭಾ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಬೀದರ ಸಂಸದೀಯ ಕ್ಷೇತ್ರದಿಂದ ಸ್ಪರ್ಧಿಸುವ ಮೂಲಕ ತನ್ನ ಹಾಗು ತನ್ನ ಮಗ ಉಮಾಕಾಂತ ನಾಗಮಾರಪಲ್ಲಿಯ ರಾಜಕೀಯ ಜೀವನಕ್ಕೆ ಹೊಸ ಖದರನ್ನು ತಂದುಕೊಳ್ಳಲು ಯತ್ನಿಸಿ ಇದೀಗ ತಮ್ಮ ಪ್ರಯತ್ನದಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ.


ಖರ್ಗೆ


ಧರಂ

ಬೀದರ ಡಿಸಿಸಿ ಬ್ಯಾಂಕ್ ಹಾಗೂ ನಾರಂಜಾ ಶುಗರ್ ಫ್ಯಾಕ್ಟರಿಗಳಲ್ಲಿ ನಾಗಮಾರಪಲ್ಲಿ ನಡೆಸಿರುವ ಅವ್ಯವಹಾರಗಳನ್ನು ಇಲ್ಲಿನ ಜನ ಗಮನಿಸಿದ್ದಾರೆ. ಈ ಚುನಾವಣೆಯಲ್ಲಿ ಅದು ಆತನ ವಿರುದ್ಧ ಕೆಲಸ ಮಾಡಿತು. ಇದೆಲ್ಲಕ್ಕಿಂತ ಮುಖ್ಯವಾಗಿ ಈತನ ಆಡಂಬರದ ಜೀವನ ಶೈಲಿ ಕೂಡ ಮತದಾರರನ್ನು ಕೆರಳಿಸಿತ್ತು. ಡಿಸಿಸಿ ಬ್ಯಾಂಕ್‌ನ ಶಾಖೆಗಳು ಬೀದರಿನ ಪ್ರತಿ ಹಳ್ಳಿಗಳಲ್ಲೂ ಇವೆ; ಅಲ್ಲದೆ ಈ ಬ್ಯಾಂಕನ್ನು ನೆಚ್ಚಿಕೊಂಡಿರುವ ಸ್ವಸಹಾಯ ಗುಂಪುಗಳ ಜನರೂ ಬಹಳಷ್ಟು ಸಂಖ್ಯೆಯಲ್ಲಿ ಇದ್ದಾರೆ. ಹೀಗಾಗಿ ತನ್ನ ನೆಟ್‌ವರ್ಕ್ ಎಲ್ಲಾ ಕಡೆ ಹಬ್ಬಿಬಿಟ್ಟಿದೆ. ಅದರ ಜೊತೆಗೆ ಬಿಜೆಪಿಯ ಕಾರ್ಯಕರ್ತರು, ನಾಯಕರಿದ್ದರೆ ಸಾಕು ತಾನು ಗೆಲ್ಲುವುದು ಸುಲಭ ಎಂದು ನಾಗಮಾರಪಲ್ಲಿ ತರ್ಕಿಸಿದ್ದ.

ಇದಲ್ಲದೆ ಭಾಲ್ಕಿಯ ಮಾಜಿ ಶಾಸಕ ಪ್ರಕಾಶ ಖಂಡ್ರೆ ಬೀದರ ವಿಧಾನ ಸಭಾ ಕ್ಷೇತ್ರದ ಮೇಲೆ ಕಣ್ಣಿಟ್ಟು ಕುಳಿತುಕೊಂಡಿದ್ದರು. ಅವರ ಆಸೆಗೆ ನೀರು ಎರಚಿ ಅಲ್ಲಿ ತನ್ನ ಮಗ ಉಮಾಕಾಂತ ನಾಗಮಾರಪಲ್ಲಿಯನ್ನು ಹೇರಿದ್ದು ಖಂಡ್ರೆಯ ವಿಕೋಪಕ್ಕೆ ಕಾರಣವಾಗಿತ್ತು. ಆದ್ದರಿಂದ ಅವರು ಕೈಚೆಲ್ಲಿ ಕೂತರು. ಹುಮ್ನಾಬಾದನ ಬಸವರಾಜ ಪಾಟೀಲ ಶಡ್ಡನೆ ಆಗಿದ್ದರೂ ಬಹುಕಾಲದಿಂದ ಅವರಿಬ್ಬರ ನಡುವಿನ ವೈಮನಸು ರಾಜಕೀಯ ಜಂಗಿ ಕುಸ್ತಿಗೆ ಕಸುವನ್ನು ನೀಡಿತು. ಬಸವಕಲ್ಯಾಣದ ಶಾಸಕ ಬಸವರಾಜ ಪಾಟೀಲ ಅಟ್ಟೂರನಿಗಂತೂ ನಾಗಮಾರಪಲ್ಲಿಯನ್ನು ಕಂಡರೆ ಕೆಂಡದಂಥ ಕೋಪ. ಚಿಂಚೋಳಿಯ ಮತಕ್ಷೇತ್ರದಿಂದ ಬಿಜೆಪಿಯ ಸುನೀಲ ವಲ್ಯಾಪುರೆ ಗೆದ್ದು ಬಂದಿದ್ದರೂ, ವೈಜನಾಥ ಪಾಟೀಲ ಎಂಬ ನಾಯಕನೆ ಅಲ್ಲಿದ್ದರೂ ಇವರೆಲ್ಲ ಮಕಾಡೆ ಮಲಗಿಬಿಟ್ಟರು. ಹೀಗಾಗಿ ಧರ್ಮಸಿಂಗ್ ವಿರುದ್ಧದ ಹೋರಾಟದಲ್ಲಿ ನಾಗಮಾರಪಲ್ಲಿಗೆ ಗೆಲ್ಲುವ ಎಲ್ಲಾ ಅವಕಾಶಗಳಿದ್ದಾಗ್ಯೂ ತಾನೇ ತೋಡಿಕೊಂಡ ಗಟಾರದಲ್ಲಿ ತಾನೇ ಬಿದ್ದ. ಆದರೀಗ ಕೈಲಾಗದವನು ಮೈಯೆಲ್ಲ ಪರಚಿಕೊಂಡ ಎಂಬಂತೆ ತನ್ನ ಸೋಲಿಗೆ ಬೀದರ ಜಿಲ್ಲಾಧಿಕಾರಿ ಹರ್ಷ ಗುಪ್ತನೆ ಕಾರಣ ಎಂದು ಹೇಳುತ್ತಿದ್ದಾನೆ ನಾಗಮಾರಪಲ್ಲಿ!

ಕಲಬುರ್ಗಿಯ ಸಂಸದೀಯ ಮತಕ್ಷೇತ್ರದ ಮೇಲೆ ಹಠಾತ್ತನೆ ಕಾಣಿಸಿಕೊಂಡವರು ಖರ್ಗೆ. ಇದನ್ನೆ ಬಂಡವಾಳವನ್ನಾಗಿ ಮಾಡಿಕೊಂಡ ಚಡ್ಡಿಗಳು ಖರ್ಗೆಯನ್ನು ಹಣಿಯಲು ನಾನಾ ರೀತಿಯ ಕಸರತ್ತುಗಳನ್ನು ಶುರುಮಾಡಿದರು. ಖರ್ಗೆಯವರು ಗೆದ್ದು ಬಂದರೆ ಮತಕ್ಷೇತ್ರದ ತುಂಬೆಲ್ಲ ಅಟ್ರಾಸಿಟಿ ಕೇಸ್‌ಗಳು ಹೆಚ್ಚಾಗುತ್ತವೆ ಎಂಬ ಕೀಳು ರಾಜಕೀಯ ದಾಳಗಳನ್ನು ಹರಿಬಿಟ್ಟರು. ಜೊತೆಗೆ ಖರ್ಗೆ ಲಿಂಗಾಯತ ವಿರೋಧಿ ಎಂಬ ಪುಕಾರನ್ನೂ ಮತಕ್ಷೇತ್ರದ ತುಂಬೆಲ್ಲ ಹಬ್ಬಿಸಲು ಪ್ರಯತ್ನಿಸಿದರು.

ಆದರೆ ಬಿಜೆಪಿಯ ಅಮರನಾಥ ಪಾಟೀಲ, ಶಶೀಲ ನಮೋಶಿ, ರೇವೂನಾಯಕ ಬೆಳಮಗಿ ಒಂದು ದಿಕ್ಕಾದರೆ ವೈಜನಾಥ ಪಾಟೀಲ ಮತ್ತೊಂದು ದಿಕ್ಕಾದರು. ಎಂಎಸ್‌ಐಎಲ್ ಅಧ್ಯಕ್ಷಗಿರಿ ತಮ್ಮ ಮಗನಿಗೆ ಗಿಟ್ಟುವವರೆಗೆ ವೈಜನಾಥ ಪಾಟೀಲ ಬಿಜೆಪಿಯೊಂದಿಗೆ ಟೂ ಬಿಟ್ಟು, ಅಧ್ಯಕ್ಷಗಿರಿ ಸಿಗುತ್ತಲೆ ಬಿಜೆಪಿಯ ಕಡೆ ತಿರುಗಿ ನೋಡಿದ್ದು ಜನಸಾಮಾನ್ಯರಲ್ಲಿ ಅಸಹ್ಯ ಹುಟ್ಟಿಸಿತ್ತು. ಬಿಜೆಪಿಯ ಒಳಜಗಳ ಹಾಗೂ ಕಲಬುರ್ಗಿ ಜಿಲ್ಲೆಯ ಉಸ್ತುವಾರಿ ಸಚಿವ ಸವದಿಯವರು ಇತ್ತ ಸುಳಿಯದೆ ದೂರ ಉಳಿದದ್ದೂ ಖರ್ಗೆಗೆ ನೆರವಾಯಿತು. ಈಗ ರೇವೂನಾಯಕ ಬೆಳಮಗಿ ಎಂಬ ಸೋಲಿಲ್ಲದ ಸರದಾರನಿಗೆ ಸೋಲು ತಂದುಕೊಟ್ಟ ಖುಷಿಯಲ್ಲಿ ಚಡ್ಡಿಗಳು ಒಳಗೊಳಗೆ ಬೀಗುತ್ತಿವೆ. ಒಟ್ಟಿನಲ್ಲಿ ಕೋಮುವಾದಿ ಶಕ್ತಿಗಳ ಅಟ್ಟಹಾಸಕ್ಕೆ ಕಲಬುರ್ಗಿ ಕ್ಷೇತ್ರದ ಮತದಾರ ಬ್ರೇಕ್ ಹಾಕಿ ಖರ್ಗೆಯವನ್ನು ಗೆಲ್ಲಿಸಿದ್ದು ಒಳ್ಳೆಯ ಮುನ್ಸೂಚನೆ ಎಂಬಂತೆ ಇದೆ.

■ ವಿಶ್ವಾರಾಧ್ಯ ಸತ್ಯಂಪೇಟೆ

ರತದ ಮತದಾರರು ಮಾತ್ರ ತಮಗೆ ಸ್ವತಂತ್ರ ಬುದ್ಧಿ, ವಿವೇಕ ಮತ್ತು ಸಂಭಾವಿತತೆಗಳು ಇನ್ನೂ ಉಳಿದಿವೆಯೆಂಬುದನ್ನು ದಿನಂತೆ ಲೋಕಕ್ಕೇ ಜಾಹೀರು ಮಾಡಿದ್ದಾರೆ; ಮತದಾರರ ಈ ರಸವಿದ್ಯೆಯಿಂದಾಗಿ (alchemy) ಉಕ್ಕು ಎಂದು ರೆಯಲ್ಪಟ್ಟ ಲೋಹ ನಿಜವಾಗಿ ಬರೀ ಬಡಬಡ ಶಬ್ದ ಮಾಡುವ ಕೆಲಸಕ್ಕೆ ಬಾರದ ತಗಡು ಎಂಬುದು ಸಾಬೀತಾಗಿದೆ. ರ್ನಾಟಕದಲ್ಲಿ ಭಾಜಪ ಈ ಬಾರಿ 19 ಲೋಕಸಭಾ ಸ್ಥಾನಗಳನ್ನು ಗೆದ್ದಿದೆ. ಆದರೆ ಗೆದ್ದ, ಗೆಲ್ಲದ ಎಲ್ಲ ಕಡೆಗಳಲ್ಲೂ ಗಣಿ ಹಣ ಾಗೂ ಹಿಂದೂತ್ವವಾದಿ ದ್ವೇಷ ಸಿದ್ಧಾಂತಗಳೇ ವಿಜೃಂಭಿಸಿವೆ.

ೆದ್ದ ಭಾರತ ಸೋತ ಕರ್ನಾಟಕ

1. ಭಾರತೀಯ ಮತದಾರರ ಗೌರವಾನ್ವಿತ ಹೆದ್ದಾರಿಯೇ ಒಂದು

ಆತ್ಮಹತ್ಯೆಯ ಕಡೆಗೆ ಬಲಾತ್ಕಾರವಾಗಿ ದೂಡಲ್ಪಟ್ಟ ರತ 'ಪ್ರಕಾಶಿಸುತ್ತಿದೆ' ಎಂಬ ಬೇಷರಮಿಯ ಆಧಾರದ ಲೆ ಅಧಿಕಾರ ಕಬಳಿಸಲು ಹವಣಿಸಿ ಭಾರತೀಯ ತಾ ಪಕ್ಷ, ಕಳೆದ ಲೋಕಸಭಾ ಚುನಾವಣೆಯಲ್ಲಿ ು ಪ್ರೀತಿಸುತ್ತೇನೆ ಎಂದು ಮಾತಿಗಷ್ಟೇ ಹೇಳಿಕೊಳ್ಳುವ ನೆಲದ ಮಣ್ಣು ಮುಕ್ಕಿದ್ದು ಈಗ ಇತಿಹಾಸ. ಹಾಗಾಗಿ ಬಾರಿ, ಭಾರತದ ಸುದ್ದಿಯೇ ತಮಗೆ ಬೇಡ, ಮ್ಮ ಸ್ವಂತ ಹಿತ ಮಾತ್ರ ಸಾಕು ಎಂದು ತೀರ್ಮಾನಿಸಿ ್.ಕೆ. ಅಡ್ವಾಣಿಯನ್ನು ಇನ್ನೇನು ಪ್ರಧಾನಿ ಆಗಿಯೇ ತ್ತಿದ್ದರು ಎಂಬಂತೆ ಭಾಜಪ ಹರಾಜಿಗಿಟ್ಟಿತು. ಅದಕ್ಕಾಗಿ, ಕ್ಕಿನ ಮನುಷ್ಯ ಎಂದು ಎಲ್ಲರೂ ತಿಳಿದಿದ್ದ ಡ್ವಾಣಿಯನ್ನು ಉಕ್ಕಿನ ಮನುಷ್ಯ ಎಂದು ಪ್ರಚಾರ ಡಲಾಯಿತು. ಸಂಘ ಪರಿವಾರದ ಮಂದಿ ಮನುಷ್ಯತ್ವ ದುಕೊಂಡ ಯಂತ್ರಗಳೋ ಲೋಹಗಳೋ ರುವುದು ನಮಗೆ ತಿಳಿಯದಿರುವ ಸಂಗತಿಯೇನಲ್ಲ. ದ್ದೆ, ತ್ರಿಶೂಲ ಹಂಚುವ ಪ್ರಮುಖ ಅಜೆಂಡಾ ುವ ಪಕ್ಷದ ನಾಯಕರು ಉಕ್ಕಿನವರಾಗಿರಲೇಬೇಕು ುಬುದೂ ಲೋಹ ನಿಯಮವೇ ಸರಿ. ಆದರೆ ಭಾರತದ ತದಾರರು ಮಾತ್ರ ತಮಗೆ ಸ್ವತಂತ್ರ ಬುದ್ಧಿ, ವಿವೇಕ ತ್ತು ಸಂಭಾವಿತತೆಗಳು ಇನ್ನೂ ಉಳಿದಿವೆಯೆಂಬುದನ್ನು ದಿನಂತೆ ಲೋಕಕ್ಕೇ ಜಾಹೀರು ಮಾಡಿದ್ದಾರೆ; ತ್ರವಲ್ಲ, ಕಾಂಗ್ರೆಸ್ ಪಕ್ಷಕ್ಕೆ ಇದೆಲ್ಲಾ ಹೇಗಾಯಿತು ು ದಿಗ್ಭ್ರಮೆಯಾಗುವುದನ್ನೂ ಮತದಾರರು ಸಲಿಲ್ಲ. ಮತದಾರರ ಈ ರಸವಿದ್ಯೆಯಿಂದಾಗಿ chemy) ಉಕ್ಕು ಎಂದು ಕರೆಯಲ್ಪಟ್ಟ ಲೋಹ ವಾಗಿ ಬರೀ ಬಡಬಡ ಶಬ್ದ ಮಾಡುವ ಕೆಲಸಕ್ಕೆ ರದ ತಗಡು ಎಂಬುದು ಸಾಬೀತಾಗಿದೆ.

ಭಾಜಪದ ಈ ಬಾರಿಯ ಲೋಕಸಭಾ ಾವಣೆಯ ರಣತಂತ್ರದಲ್ಲಿ ಎಷ್ಟೊಂದು ಕುತಂತ್ರಗಳು, ್ಟೊಂದು ಅವಹೇಳನಗಳು ತುಂಬಿ ತುಳುಕುತ್ತಿದ್ದ ದರೆ, ಅಡ್ವಾಣಿಯವರಿಗೆ ಈ ಬಾರಿ ಮರ್ಯಾದೆ ಂದ ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕನಾಗಿ ುವುದಕ್ಕೂ ತೀವ್ರ ಮುಜುಗರವಾಗಿ, ಮಾಡಿದ್ದುಣ್ಣೋ ಾರಾಯ ಎಂಬಂತೆ ಮುಖ ಮರೆಸಿಕೊಳ್ಳುವಂತಾಗಿದೆ. ದೆ ಮುಖಕ್ಕೆ ಮಡಕೆ ಮುಚ್ಚಿಕೊಂಡಾದರೂ ತಾನು ಸ್ಥಾನ ಪ್ರವೇಶಿಸಿಯೇ ಸಿದ್ಧ ಎಂದು ಅವರೀಗ ತೀರ್ಮಾನಿಸಿದ್ದಾರೆ. ತಗಡಿಗೆ ನಾಚಿಕೆ ಮಾನ ಮರ್ಯಾದೆಗಳಿರುವುದು ಹೇಗೆ ಸಾಧ್ಯ?

ರಾಮಮಂದಿರ ನಿರ್ಮಾಣ ಯೋಜನೆಯ ಹೆಸರಿನ ರಥಯಾತ್ರೆ, ಬಾಬರೀ ಮಸೀದಿ ಧ್ವಂಸಗಳಿಂದ ಆರಂಭಿಸಿ ಈ ದಿನದ ತನಕವೂ ಅಡ್ವಾಣಿ ನಾಯಕತ್ವದಲ್ಲಿ ಈ ದೇಶದಲ್ಲಿ ಬೇರೂರಲಾದ ಹಿಂದೂತ್ವವಾದಿ ದ್ವೇಷ ಮತ್ತು ಪೈಶಾಚಿಕ ಹಿಂಸಾಚಾರಗಳನ್ನು ನಡೆಸಲಾಗಿದೆ. ರೂವಾರಿ ಅಡ್ವಾಣಿ ಅವುಗಳ ಫಲವನ್ನು ಕೊನೆಗಾಲದ ಕೈತುತ್ತಾಗಿ ಉಣ್ಣಲಿ ಎಂದು ಭಾರತೀಯ ಮತದಾರರು ತೀರ್ಮಾನಿಸಿದ್ದಾರೆ. ಸಂಘ ಪರಿವಾರದ ಭಾಷೆಯನ್ನು ಅವರ ಮೇಲೆಯೇ ಪ್ರಯೋಗಿಸುವುದಾದರೆ, ಈ ದೇಶದಲ್ಲಿ ಹಿಂದೂತ್ವವಾದಿ ತಯಾರು ಮಾಡಿದ ಭೀಕರ ಸಾವು ಮತ್ತು ನೋವುಗಳಿಗೆ ಈಡಾದ ಮುಸ್ಲಿಮರು ಮತ್ತು ಮುಸ್ಲಿಮೇತರರ ಶಾಪ ಅಡ್ವಾಣಿಗೂ, ಭಾಜಪಕ್ಕೂ ತಟ್ಟಿದೆ. ಅವರೂ ಭಾರತೀಯರು ಎಂಬುದನ್ನು ಸಂಘ ಪರಿವಾರಕ್ಕೆ ದೃಢವಾಗಿ ಹೇಳಲಾಗಿದೆ. ಉಪ್ಪು ತಿಂದು ಮನೆಗೆ ದ್ರೋಹ ಬಗೆಯುವ ಸಂಘ ಪರಿವಾರದವರು, ಉಪ್ಪು ಹುಳಿ ಖಾರಗಳನ್ನು ತಿನ್ನುವ ಮತದಾರರಿಂದ ಎಂತಿದ್ದರೂ ನೀರು ಕುಡಿಯಲೇಬೇಕಲ್ಲ!

2. ಕರ್ನಾಟಕದ ಭಾಜಪದ ಸೀಳು/ಕೀಳು ದಾರಿಯೇ ಇನ್ನೊಂದು

ಕನ್ನಡದಲ್ಲಿ ಒಂದು ಜನಜನಿತ ಗಾದೆಯಿದೆ: ಅಜ್ಜಿಗೆ ಅರಿವೆ ಚಿಂತೆ, ಮಗನಿಗೆ ಕಜ್ಜಾಯದ ಚಿಂತೆ, ಸೊಸೆಗೆ ಮಿಂಡರ ಚಿಂತೆ–ಅಂತ. ಅಜ್ಜ ಅಡ್ವಾಣಿಗೆ ಸಿಂಹಾಸನದಲ್ಲಿ ಕೂರುವ ಚಿಂತೆಯಾದರೆ, ಭಾರತದ ಮತದಾರರಿಗೆ ಶಾಂತಿ ನೆಮ್ಮದಿಗಳ ಚಿಂತೆ. ಆದರೆ ನಮ್ಮ ಯಡ್ಯೂರಪ್ಪನವರದ್ದು ಬೇರೆಯದೇ ಚಿಂತೆ. ಯಾರ್‍ಯಾರನ್ನು ಹಾರಿಸಿಕೊಂಡು ಬಂದು ರಾಕ್ಷಸೀ ಅಥವಾ ಪೈಶಾಚಿಕ ವಿವಾಹಗಳನ್ನು ಎಷ್ಟೊಂದು ನಡೆಸಬಹುದು ಎಂಬುದೇ ಅವರ ಶಾಶ್ವತ ಕನವರಿಕೆ. ಆದಕ್ಕಾಗಿ ಅವರು ಗೌರವ ಡಾಕ್ಟರೇಟನ್ನೇ ಪಡೆದಿದ್ದಾರೆ. ಅದೂ ಒಳ್ಳೆಯ ರೇಟಿಗೇ. ಅಥರ್ವಣವೇದ ಪ್ರಯೋಗದ ಸಂಘ ಪರಿವಾರದ ಈ ವಾಮವಿದ್ಯೆಯ ಫಲವಾಗಿ, ಕರ್ನಾಟಕವನ್ನು ಈ ದೇಶದ ಮುಖ್ಯವಾಹಿನಿಯಿಂದ ಬಲಾತ್ಕಾರವಾಗಿ ಹೊರಗೆಳೆಯುವುದರಲ್ಲಿ ಯಡ್ಯೂರಪ್ಪ ಯಶಸ್ವಿಯೂ ಆಗಿರುವುದು ಕರ್ನಾಟಕದ ಘೋರ ದುರಂತ. ಅಡ್ವಾಣಿಯವರ ವಾನಪ್ರಸ್ಥಾಶ್ರಮಕ್ಕಾಗಿ, ಸರ್ವಜನಾಂಗದ ಶಾಂತಿಯ ತೋಟ ಎಂದು ಕರೆಯಲಾಗುತ್ತಿದ್ದ ಕರ್ನಾಟಕವನ್ನು ಹಿಂದೂತ್ವವಾದಿ ಪಾಶವೀಯತೆಯ (ಗುಜರಾತಿನ ನಂತರದ) ಕೊನೆಯ ಕೋಟೆಯಾಗಿ ಪರಿವರ್ತಿಸಲಾಗುತ್ತಿದೆ.

ಕರ್ನಾಟಕದಲ್ಲಿ ಭಾಜಪ ಈ ಬಾರಿ 19 ಲೋಕಸಭಾ ಸ್ಥಾನಗಳನ್ನು ಗೆದ್ದಿದೆ. ಬಳ್ಳಾರಿಯೂ ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ಕೆಲವಾರು ಮತಗಳ ಅಂತರದಿಂದ, ಅದು ಗೆದ್ದಿರುವುದು ಕೂಡ ಹೀನಾಯವಾಗಿ. ಆದರೆ ಗೆದ್ದ ಗೆಲ್ಲದ ಎಲ್ಲ ಕಡೆಗಳಲ್ಲೂ ಗಣಿ ಹಣ ಹಾಗೂ ಹಿಂದೂತ್ವವಾದಿ ದ್ವೇಷ ಸಿದ್ಧಾಂತಗಳೇ ವಿಜೃಂಭಿಸಿವೆ. ಕರ್ನಾಟಕದಲ್ಲಿ ನಡೆದ ಈ ಬಾರಿಯ ಲೋಕಸಭೆಯ ಚುನಾವಣೆಯ ನಿರ್ಣಾಯಕವಾಗಿ ಹಾಗೂ ಕರಾರುವಾಕ್ಕಾಗಿ ಸ್ಪಷ್ಟಪಡಿಸುವ ಒಂದು ಪ್ರಮುಖ ತೀರ್ಮಾನವೆಂದರೆ, ಭಾಜಪ ಪಕ್ಷ ತನ್ನ ಸಂಘ ಪರಿವಾರದ ಬೆಂಬಲದೊಂದಿಗೆ ಇಡೀ ಕರ್ನಾಟಕವನ್ನು ಧರ್ಮದ್ವೇಷದ ಆಧಾರದ ಮೇಲೆ, ಇನ್ನು ಸರಿಪಡಿಸಲಾಗದಂತೆ, ಇಬ್ಭಾಗವಾಗಿ ಒಡೆದಿದೆ. ಹಾಗೂ ಸಂಘ ಪರಿವಾರ ಪೋಷಿತ ಈ ದ್ವೇಷ ಮತ್ತು ನಿರ್ಲಜ್ಜ ರಾಜಕಾರಣಕ್ಕೆ ಕರ್ನಾಟಕದ ಬಹುಪಾಲು ಜನರ ಶಬ್ದಾಡಂಬರ ಪೂರ್ಣ ಸಮ್ಮತಿಯಿದೆ.

ಜನರ ವಿವೇಕ, ಬುದ್ಧಿ ಮತ್ತು ಸಂಭಾವಿತತೆಗಳನ್ನು ಹಾಗೆಲ್ಲಾ ಕಲುಷಿತಗೊಳಿಸುವುದು ಸಾಧ್ಯವಿಲ್ಲ ಎಂಬ ಭ್ರಮೆಯಲ್ಲಿ ಮುಳುಗಿರುವ ಬುದ್ಧಿಜೀವಿ/ಪ್ರಗತಿಪರರಿಗೆ, ಅಗತ್ಯವಿದ್ದರೆ, ಇದರಲ್ಲಿ ಕಟ್ಟಕಡೆಯ ಪಾಠವಿದೆ; ನೀರೊಳಗಿದ್ದೂ ಅವರು ಬೆವರಬಹುದು ಎಂದಾದರೆ ಕರ್ನಾಟಕದ ಉಳಿದ ಭಾಗಗಳ ಕತೆ ಹಾಗಿರಲಿ, ಕರಾವಳಿ ಪ್ರದೇಶದಲ್ಲಾದರೂ ಸಂಘ ಪರಿವಾರ ಹಲವಾರು ವರ್ಷಗಳಿಂದ ಎಡೆಬಿಡದೆ ನಡೆಸಿಕೊಂಡು ಬರುತ್ತಿರುವ ಹಗಲುರಾತ್ರಿಗಳ ಹಿಂಸಾಚಾರದ ಪೈಶಾಚಿಕತೆಯನ್ನು ಕಣ್ಣಾರೆ ಕಂಡ ಮತದಾರರಿಗಾದರೂ ಹಿಂದೂತ್ವವಾದದ ಭೂತ ಪೂರ್ತ ಬಿಟ್ಟೀತು ಎಂಬ ಸಕಾರಣವಾದ ನಂಬಿಕೆ ಹಲವರಿಗಿತ್ತು. ಆ ನಂಬಿಕೆಯೂ ವಿನಾಕಾರಣ ಎಂಬುದು ಈಗ ನಮ್ಮದೇ ಮುಖಗಳಿಗೆ ಪುನಃ ರಾಚಿದೆ. ಕರಾವಳಿಗಾಗಲೀ, ಕರ್ನಾಟಕಕ್ಕಾಗಲೀ, ಉಳಿಗಾಲವಿದೆಯೆಂದು ನನಗಂತೂ ಖಂಡಿತ ವಿಶ್ವಾಸವಿಲ್ಲ. ಬಸವ ಮುಂತಾದ ವಚನಕಾರರನ್ನೋ, ಕನಕ ಮುಂತಾದ ದಾಸರನ್ನೋ ಮರೆತು ಯಡ್ಡಿ ರೆಡ್ಡಿಗಳ ಸೇವೆಯೇ ಶ್ರೇಯಸ್ಕರ ಎಂದು ತಿಳಿದ ಬಹುಪಾಲು ಕನ್ನಡಿಗರಿಗೆ ಕರ್ನಾಟಕ ಎಂಬ ನೆಲಮಾತ್ರವೇ ಬೇಕಾಗಿದೆ ಹೊರತು ಈ ನೆಲದ ಯಾವ ಜೀವಸತ್ವವೂ ಅಲ್ಲ ಎಂಬುದು ಕಂಗಾಲುಗೊಳಿಸುವ ಕಟುವಾಸ್ತವವಾಗಿದೆ.

ಕರ್ನಾಟಕದ ಬಿಜೆಪಿಯೇತರ ಪಕ್ಷಗಳಾದರೋ ಕಿಕ್ಕಿರಿದು ತುಂಬಿರುವ ತಮ್ಮ ಮುದಿ ನಾಯಕರುಗಳ ಭಾರಕ್ಕೆ ಕುಸಿದು ಬಿದ್ದಿವೆ. ಯುವ ನಾಯಕರು ಅಥವಾ ಕಾರ್ಯಕರ್ತರು ಅವರಿಗೆ ಭಾಷಣ ಕೇಳುವುದಕ್ಕೆ ಕೂಡಾ ದೊರಕುತ್ತಿಲ್ಲ, ಅಲ್ಲದೇ ಅವರಿಗೆ ರಾಜಕಾರಣ ಎಂಬುದೇ ಎಂದೋ ಮರೆತುಹೋಗಿದೆ. ಜನರು ತಾವಾಗಿ ಕೊತಲ್ಲಿಗೇ ಮತಗಳನ್ನು ತಂದು ಕಾಲಬುಡದಲ್ಲಿ ಸದಾ ಸುರಿಯುತ್ತಾರೆ ಎಂದು ಅವರು ಈಗಲೂ ನಂಬಿದ್ದಾರೆ. ಯಾವುದೇ ಜನಪರ ಚಳವಳಿ ಚಿಂತನೆ, ಹೋರಾಟ ಕೂಡಾ ಅವರಿಗೆ ತಿಳಿಯದು. ಕಾಂಗ್ರೆಸ್ ಮುಂತಾದ ಪಕ್ಷಗಳಿಗೆ ತಮಗೊಂದು ಧನಾತ್ಮಕ ಚರಿತ್ರೆ ಇದೆಯೇ, ಸಂಘ ಪರಿವಾರದ ದ್ವೇಷ ಸಿದ್ಧಾಂತವನ್ನು ಕಟುವಾಗಿ ವಿರೋಧಿಸಿ ಹಿಮ್ಮೆಟ್ಟಿಸುವುದು ತಮ್ಮ ಧರ್ಮವಲ್ಲವೇ ಎಂಬುದೆಲ್ಲಾ ಮರೆತು ಯುಗಗಳೇ ಸಂದಿವೆ. ಹಾಗಾಗಿ ಇಲ್ಲಿ ಹುಚ್ಚು ಕಟ್ಟಿ ಓಡುತ್ತಿರುವ ಭಾಜಪ ಎಂಬ ಗೋಡಾ ಇದೆ, ಕರ್ನಾಟಕ ಎಂಬ ಮೈದಾನವೂ ಇದೆ. ಸೊಲ್ಲೆತ್ತಿದರೆ ಜೈಲು, ಜೀವ ಬೆದರಿಕೆ, ಅಜ್ಞಾತವಾಸಗಳಲ್ಲಿ ಕಾಲಯಾಚನೆ ಮಾಡುವ ಹೀನಾಯದ, ಬೆರಳೆಣಿಕೆಯ ಚಿಂತನಶೀಲರು ಎಲ್ಲರಿಗೂ ಬೇಡವಾಗುತ್ತಿದ್ದಾರೆ. ಹಾಗಾಗಿ ಕರ್ನಾಟಕದ ಎಲ್ಲ ಜಾಗಗಳೂ (spaces) ಸಂಘಪರಿವಾರಕ್ಕೆ ಎಗ್ಗಿಲ್ಲದ ಅವಕಾಶಗಳೇ (spaces) ಆಗಿವೆ.


ಮೊದಲೆಲ್ಲ ಚುನಾವಣೆಗಳು ಚುನಾವಣೆಗಳಂತೆಯೇ ನಡೆಯುತ್ತಿದ್ದವು. ರಾಜಕೀಯವು ಜನಜೀವನದ ಒಂದು ಭಾಗ ಮಾತ್ರ ಆಗಿತ್ತು. ಮತಗಳು ತಂತಾನೇ ಬಂದು ಬೀಳುತ್ತಿದ್ದವು. ಸಾಮಾನ್ಯ ಜನರೇ ಯಾಕೆ, ಪ್ರಗತಿಪರರು ಕೂಡಾ ರಾಜಕೀಯವನ್ನು ಅಸಡ್ಡೆ ಮಾಡುವುದು ಸಹ ಸಾಧ್ಯವಿತ್ತು. ಆದರೆ ಸಂಘಪರಿವಾರ ಮೇಲಿಂದ ಮೇಲೆ ತೋರಿಸಿಕೊಡುತ್ತಾ ಬಂದಿರುವಂತೆ, ಅವರಿಗೆ ಬೇಕಾಗಿರುವುದು ಕೇವಲ ಅಧಿಕಾರದ ಮೇಲೆ ಹತೋಟಿಯಲ್ಲ, ಬದಲಾಗಿ ಮನಸ್ಸುಗಳ ಮೇಲಿನ ಹತೋಟಿ. ಸಂಘ ಪರಿವಾರ, ಅದರಲ್ಲೂ ಪ್ರಮುಖವಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘ, ಈ ವಿಷಯದಲ್ಲಿ ಮಾತ್ರ ಎಂದೂ ಎರಡಾಡಿದ್ದಿಲ್ಲ; ಅವರಿಗೆ ಮುಖ್ಯವಾಗಿರುವುದು ಬರಿಯ ರಾಜಕೀಯವಲ್ಲ, ಸಂಸ್ಕೃತಿ; ಆದರೆ ಸಂಸ್ಕೃತಿ ಎಂಬುದು ರಾಜಕೀಯವಲ್ಲ ಎಂದೇ ಭ್ರಮಿಸಿರುವ ಮೂರ್ಖರು ಮಾತ್ರ ಸಂಘ ಪರಿವಾರವನ್ನು ಅಸಡ್ಡೆ ಮಾಡುತ್ತಲೇ ಬಂದರು. ಹಾಗಾಗಿ, ಕರ್ನಾಟಕದಲ್ಲಿ ಭಾಜಪ ಗೆದ್ದಿತೆಂದರೆ, ಭಾಜಪ ಗೆದ್ದಿತು ಎಂದು ಮಾತ್ರ ಅರ್ಥವಿಲ್ಲ, ಕರ್ನಾಟಕ ಸೋತಿತು ಎಂದೂ ಅರ್ಥ. ಕರ್ನಾಟಕಕ್ಕೆ ಸಾವಿರಾರು ವರ್ಷಗಳ ಅನೂಚಾನವಾದ ಸೌಹಾರ್ದದ ಚರಿತ್ರೆ ಇದೆ ಎಂಬುದು ಈಗ ಕೇವಲ ಕರ್ನಾಟಕದ ಚರಿತ್ರೆ ಮಾತ್ರ, ಕರ್ನಾಟಕದ ಚಾರಿತ್ರ್ಯವಲ್ಲ.

● ಎಚ್. ಪಟ್ಟಾಭಿರಾಮ ಸೋಮಯಾಜಿ



ಕಡಿದಾಳು ಶಾಮಣ್ಣ

ಕಾಡ ತೊರೆಯ ಜಾಡು 16




ಅಕ್ಷರ ರೂಪ: ಅಕ್ಷತಾ ಕೆ.

ಬಾಬಾಗೌಡ ಪಾಟೀಲರಿಂದ 'ಅಶಿಸ್ತಿನ ಕಾರಣಕ್ಕೆ ನಿಮ್ಮನ್ನು ರೈತ ಸಂಘ ರಾಜ್ಯಸಮಿತಿಯಿಂದ ಮೂರು ವರ್ಷ ಉಚ್ಚಾಟಿಸ ಲಾಗಿದೆ' ಎಂಬ ಪತ್ರ ಬಂತು. ರಾಮದಾಸ್, ತೇಜಸ್ವಿ ಎಲ್ಲರಿಗೂ ನಂಜುಂಡಸ್ವಾಮಿಯವರ ಈ ರೀತಿಯ ವರ್ತನೆ ಬೇಸರ ತಂದಿತ್ತು. ಆದರೆ ವೈಯಕ್ತಿಕವಾಗಿ ನನಗೇನೂ ಈ ವಿಷಯ ಅಂಥ ಬೇಸರ ತರಿಸಿರಲಿಲ್ಲ. ಯಾಕೆಂದರೆ ನಾನು ಸಾಮಾನ್ಯ ಕಾರ್ಯಕರ್ತನಾಗಿ ಸಂಘಟನೆಯಲ್ಲಿ ತೊಡಗಿಸಿಕೊಳ್ಳಲು ಯಾವ ಅಡ್ಡಿ ಆತಂಕಗಳೂ ಇರಲಿಲ್ಲ.

ರೈತ ಸಂಘ ರಾಜ್ಯ ಸಮಿತಿಯಿಂದ ಉಚ್ಚಾಟನೆ

ಬಹುಶಃ 1989ನೇ ಇಸ್ವಿ ಇರಬಹುದು. ಲೋಕಸಭೆಗೆ ಚುನಾವಣೆ ಘೋಷಣೆಯಾಗಿತ್ತು. ರಾಜ್ಯಾದ್ಯಂತ ರೈತ ಸಂಘದಿಂದ ಲೋಕಸಭೆ ಚುನಾವಣೆಗೆ ಉಮೇದುವಾರರನ್ನು ನಿಲ್ಲಿಸುತ್ತಾರೆಂಬ ಸುದ್ದಿ ಹೊರಟಿತು. ನಂಜುಂಡಸ್ವಾಮಿಯವರೇ ಈ ಬಗ್ಗೆ ಹೇಳಿಕೆ ನೀಡಿದ್ದಾರೆ ಎಂದು ಪತ್ರಿಕೆಗಳು ವರದಿ ಮಾಡಿದವು. ಆದರೆ ಪಾರ್ಲಿಮೆಂಟ್‌ಗೆ ರೈತ ಸಂಘದಿಂದ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಬಗ್ಗೆ ಸಂಘದ ರಾಜ್ಯ ಸಮಿತಿಯಲ್ಲಾಗಲಿ ಅಥವಾ ಜಿಲ್ಲಾ ಸಮಿತಿ ಸಭೆಯಲ್ಲಾಗಲಿ ಚರ್ಚೆ ನಡೆದಿರಲಿಲ್ಲ. ಆದ್ದರಿಂದ ರೈತ ಸಂಘದ ಯಾರೊಂದಿಗೂ ಈ ಬಗ್ಗೆ ಕೇಳದೆ ನಂಜುಂಡ



ಸ್ವಾಮಿಯವರು ಏಕಾಏಕಿ ಇಂಥ ನಿರ್ಧಾರ ಏಕೆ ಕೈಗೊಂಡರು ಎಂಬ ಪ್ರಶ್ನೆ ನಮ್ಮೆಲ್ಲರನ್ನು ಕಾಡುತ್ತಿತ್ತು. ಪತ್ರಿಕೆಗಳಲ್ಲಿ ವರದಿಯಾದ ಕೂಡಲೇ ಅದೇ ಸತ್ಯ ಎಂದು ನಂಬುವ ಅಗತ್ಯವಿಲ್ಲದ್ದರಿಂದ ಮತ್ತು ನಂಜುಂಡಸ್ವಾಮಿಯವರು ಇದರ ಬಗ್ಗೆ ನಮ್ಮ ಜೊತೆ ಯಾವ ಚರ್ಚೆಯನ್ನು ನಡೆಸದ ಕಾರಣ ನಾನಂತೂ ಪಾರ್ಲಿಮೆಂಟ್‌ಗೆ ರೈತ ಸಂಘದಿಂದ ಅಭ್ಯರ್ಥಿಗಳನ್ನು ನಿಲ್ಲಿಸುವ ವಿಷಯವಾಗಿ ಗಾಳಿ ಸುದ್ದಿ ಹಬ್ಬಿಸಿದ್ದಾರೆ ಎಂದುಕೊಂಡು ಆ ಬಗ್ಗೆ ಮೌನವಾಗಿದ್ದೆ.

ಇದೇ ಸಂದರ್ಭ ಲೇಖಕ ಡಿ.ಎಸ್. ನಾಗಭೂಷಣ್ ಅವರು 'ಸುದ್ದಿ ಸಂಗಾತಿ' ಪತ್ರಿಕೆಗಾಗಿ ನನ್ನದೊಂದು ಸಂದರ್ಶನ ಮಾಡಿದರು. ಆ ಸಂದರ್ಶನದಲ್ಲಿ ಅವರು ಪಾರ್ಲಿಮೆಂಟ್‌ಗೆ ರೈತಸಂಘದಿಂದ ಉಮೇದುವಾರರನ್ನು ನಿಲ್ಲಿಸುವ ಬಗ್ಗೆ ನನ್ನ ಅಭಿಪ್ರಾಯ ಕೇಳಿದರು. ನಾನಿದ್ದೋನು "ಏಕಾಏಕಿ ಪಾರ್ಲಿಮೆಂಟ್ ಚುನಾವಣೆಗೆ ರೈತ ಸಂಘದಿಂದ ಅಭ್ಯರ್ಥಿಗಳನ್ನು ನಿಲ್ಲಿಸೋದು ಸರಿಯಲ್ಲ. ಮೊದಲು ಗ್ರಾಮ ಮತ್ತು ತಾಲ್ಲೂಕ್ ಮಟ್ಟದ ಚುನಾವಣೆಯಲ್ಲಿ ಅಭ್ಯರ್ಥಿಗಳನ್ನು ನಿಲ್ಲಿಸಿ ಗೆಲ್ಲಿಸಿ ಆಮೇಲೆ ಪಾರ್ಲಿಮೆಂಟ್‌ಗೆ ಹೋಗೋ ಬಗ್ಗೆ ನಿರ್ಧಾರ ಮಾಡಬೇಕು'' ಎಂದೆ. ಈ ಬಗ್ಗೆ ನಂಜುಂಡಸ್ವಾಮಿ ನಿರ್ಧಾರ ತೆಗೆದುಕೊಂಡು ಆಗಿದೆಯಲ್ಲ ಎಂದು ನಾಗಭೂಷಣ್ ಕೇಳಿದಾಗ ನಾನಿದ್ದೋನು "ಹಾಗೆ ರೈತ ಸಂಘದ ಕಾರ್ಯಕಾರಿ ಸಮಿತಿಯನ್ನು ಕೇಳದೆ ನಂಜುಂಡಸ್ವಾಮಿಯವರು ಈ ಬಗ್ಗೆ ಸರ್ವಾಧಿಕಾರಿಯ ರೀತಿಯಲ್ಲಿ ವರ್ತನೆ ಮಾಡಲ್ಲ ಎಂದು ನಾನು ನಂಬಿದ್ದೇನೆ. ಒಂದು ವೇಳೆ ಅವರು ಪಾರ್ಲಿಮೆಂಟ್‌ಗೆ ಹೀಗೆ ಏಕಾಏಕಿ ಉಮೇದುವಾರರನ್ನು ಕಣಕ್ಕಿಳಿಸಲು ಹೊರಟರೆ ಅದಕ್ಕೆ ನನ್ನ ಒಪ್ಪಿಗೆ ಇಲ್ಲ. ಇಂಥ ನಿರ್ಧಾರದಿಂದ ಸಮಾಜವಾದಿ ಯುವಜನಸಭಾಕ್ಕೆ ಆದ ಗತಿಯೇ ರೈತಸಂಘಕ್ಕೂ ಆಗತ್ತೆ. ಯುವಜನಸಭಾದ ಕೊನೆಯ ದಿನಗಳಲ್ಲಿ ಸಂಘಟನೆಯ ಸಭೆ ಕರೆದರೆ ಮಧು ನಂಜುಂಡಸ್ವಾಮಿ, ಸುತ್ತ ನಾವೊಂದು ಮೂರ್ನಾಲ್ಕು ಜನ ಬಿಟ್ಟು ಮತ್ತೊಬ್ಬರಿರುತ್ತಿರಲಿಲ್ಲ. ಅಂಥದ್ದೆ ಸ್ಥಿತಿ ರೈತ ಸಂಘಕ್ಕೂ ಬರೋದರಲ್ಲಿ ಯಾವ ಸಂಶಯವೂ ಇಲ್ಲ'' ಎಂದು ಹೇಳಿದೆ. ಈ ಸಂದರ್ಶನ 'ಸುದ್ದಿ ಸಂಗಾತಿ' ಯಲ್ಲಿ ಪ್ರಕಟವೂ ಆಯಿತು.


ಸಂದರ್ಶನ ಪ್ರಕಟವಾಗಿ ಸ್ವಲ್ಪ ದಿನದಲ್ಲೆ ಧಾರವಾಡದಲ್ಲಿ ರೈತ ಸಂಘದ ರಾಜ್ಯ ಸಮಿತಿ ಸಭೆ ಇತ್ತು. ಸಂದರ್ಶನದಲ್ಲಿ ನಾನು ಆಡಿದ್ದ ಮಾತುಗಳು ನಂಜುಂಡಸ್ವಾಮಿಯವರನ್ನು ಕೆರಳಿಸಿತ್ತು. ಅವರನ್ನು ನಾನು ಸರ್ವಾಧಿಕಾರಿ ಎಂದು ಕರೆದಿದ್ದೇನೆ ಎಂದು ಸಿಟ್ಟಾಗಿದ್ದರು. ನಾನು ಸರ್ವಾಧಿಕಾರಿ ಧೋರಣೆ ಕೈಬಿಡಬೇಕು ಎಂದಿದ್ದನೆ ವಿನಃ ಸರ್ವಾಧಿಕಾರಿ ಎಂದು ಅವರನ್ನು ಎಲ್ಲೂ ಕರೆದಿರಲಿಲ್ಲ. ನನಗೆ ಅವರು ಧಾರವಾಡದ ಸಭೆಯಲ್ಲಿ 'ಸುದ್ದಿ ಸಂಗಾತಿ' ಪತ್ರಿಕೆ ತೋರಿಸಿ ತಮ್ಮ ಸಿಟ್ಟನ್ನು ವ್ಯಕ್ತಪಡಿಸಿದಾಗಲೇ ನನಗೆ ಅವರಿಗೆ ನನ್ನ ಮಾತುಗಳು ಸಿಟ್ಟು ತರಿಸಿವೆ ಎಂದು ತಿಳಿದಿದ್ದು. ಅಲ್ಲಿವರೆಗೂ ನಾನು ಆ ಬಗ್ಗೆ ಯೋಚನೆಯನ್ನೇ ಮಾಡಿರಲಿಲ್ಲ. ನಂತರವಾದರೂ ಆ ಸಂದರ್ಶನದಲ್ಲಿ ನಂಜುಂಡಸ್ವಾಮಿಯವರು ಸಿಟ್ಟಾಗುವಂತ ಅಥವಾ ಅವರಿಗೆ ನೋವಾಗುವಂತ ಮಾತುಗಳನ್ನು ನಾನು ಆಡಿದ್ದೇನೆಂದು ನನಗೆ ಅನ್ನಿಸಿಯೇ ಇಲ್ಲ. ನನಗನ್ನಿಸಿದ್ದನ್ನು, ನನ್ನ ಅಭಿಪ್ರಾಯವನ್ನು ಹೇಳಿದ್ದೇನೆ ಅಷ್ಟೆ. ಆದ್ದರಿಂದಲೇ ಏನೋ, ರೈತ ಸಂಘದ ರಾಜ್ಯ ಸಮಿತಿಯಿಂದ ಇದೇ ಕಾರಣಕ್ಕೆ ನನ್ನನ್ನು ಹೊರಹಾಕಿದಾಗಲೂ ನನಗೆ ಚೂರೂ ಬೇಸರವಾಗಿರಲಿಲ್ಲ.

ಆ ದಿನ ಧಾರವಾಡದ ಸಭೆಯಲ್ಲಿ ನಂಜುಂಡಸ್ವಾಮಿಯವರು ಪತ್ರಿಕಾ ಸಂದರ್ಶನದಲ್ಲಿ ನಾನು ಆಡಿದ್ದ ಮಾತಿಗೆ ತೀವ್ರ ಪ್ರತಿರೋಧ ವ್ಯಕ್ತಪಡಿಸಿ "ನಿಮಗೆ ಈ ತರ ಹೇಳಿಕೆ ಕೊಡೋಕೆ ಯಾರು ಅಧಿಕಾರ ಕೊಟ್ಟೋರು? ನನ್ನನ್ನ ಸರ್ವಾಧಿಕಾರಿ ಎಂದು ಕರೆದಿದ್ದೀರಲ್ಲ ಅಂದ್ರೆ ನನಗೆ ರೈತ ಸಂಘದ ಬಗ್ಗೆ ಯಾವ ನಿರ್ಧಾರ ತೆಗೆದುಕೊಳ್ಳೋ ಅಧಿಕಾರಾನೂ ಇಲ್ವಾ. ಇಷ್ಟು ಬೇಜವಾಬ್ದಾರಿಯಿಂದ ಹೇಳಿಕೆ ಕೊಟ್ಟಿರುವ ಶಾಮಣ್ಣ ಅವರಿಗೆ ಶಿಕ್ಷೆಯಾಗಲೇಬೇಕು'' ಎಂದು ಮಂಡಿಸಿದರು. ನಾನು ಎದ್ದು ನಿಂತು "ನಿಮ್ಮ ಬಗ್ಗೆ ನಾನು ಏನು ಅವಹೇಳನ ಮಾಡೋ ಹಾಗೆ ಮಾತಾಡಿದ್ದೀನಿ ಎಂದು ನನಗೆ ಗೊತ್ತಾಗ್ತಿಲ್ಲ. ಒಂಚೂರು ಆ ಪತ್ರಿಕೆ ಕೊಡಿ. ಅಂಥದ್ದೇನಿದೆ ಅದರಲ್ಲಿ ನೋಡೋಣ'' ಎಂದು ಅವರಿಂದ ಪತ್ರಿಕೆ ಇಸಿದುಕೊಂಡು ಅವರು ಗುರುತು ಹಾಕಿದ್ದ ನನ್ನ ಸಂದರ್ಶನದ ಭಾಗಗಳನ್ನೆಲ್ಲ ಸಭೆಯಲ್ಲಿ ಓದಿದೆ. "ಸಂಘಟನೆಯಲ್ಲಿರುವ ವ್ಯಕ್ತಿ ತನ್ನ ಅಭಿವ್ಯಕ್ತಿ ಸ್ವಾತಂತ್ರವನ್ನು ಉಪಯೋಗಿಸಿಕೊಳ್ಳಬೇಕು ಅಂತಿದ್ದೋರೆ ನೀವು. ಇಲ್ಲಿ ಅಭಿವ್ಯಕ್ತಿ ಸ್ವಾತಂತ್ರದ ಆಚೆಗಿರುವ ಬೇಜವಾಬ್ದಾರಿಯ ಮಾತು ನನಗೇನೂ ಕಾಣ್ತಾ ಇಲ್ಲ. ಹಂಗೇನಾದ್ರೂ ನಿಮಗೆ ಕಂಡ್ರೆ ನೀವು ಕೊಡುವ ಶಿಕ್ಷೆ ಅನುಭವಿಸಲಿಕ್ಕೆ ನಾನು ಸಿದ್ಧ ಇದೀನಿ'' ಎಂದು ಹೇಳಿದೆ.

ಆ ಸಭೆಯ ಅಧ್ಯಕ್ಷತೆ ವಹಿಸಿದ್ದ ಬಾಬಾಗೌಡ ಪಾಟೀಲರು "ಈ ಬಗ್ಗೆ ಇಲ್ಲಿ ಚರ್ಚೆ ಬೇಡ. ಮುಂದೆ ಜಿಲ್ಲಾ ಸಮಿತಿಗಳ ಸಭೆ ನಡೆಸ್ತೀವಲ್ಲ ಅಲ್ಲಿ ಇದರ ಬಗ್ಗೆ ಯಾರದ್ದು ತಪ್ಪು ಒಪ್ಪು ಅಂತ ನೋಡಿ ನಿರ್ಣಯ ತೆಗೆದುಕೊಳ್ಳೋಣ'' ಎಂದು ಹೇಳಿದರೂ ನಂಜುಂಡಸ್ವಾಮಿಯವರು ಕೇಳದೆ "ಶಾಮಣ್ಣ ಬೇಜವಾಬ್ದಾರಿಯಿಂದ, ಅಶಿಸ್ತಿನಿಂದ ಹೇಳಿಕೆ ಕೊಟ್ಟದ್ದಾರೆ. ಆದಕ್ಕಾಗಿ ಅವರನ್ನು ರೈತ ಸಂಘದ ರಾಜ್ಯಸಮಿತಿಯಿಂದ 3 ವರ್ಷ ಕಾಲ ಹೊರಗಿಡಬೇಕು. ಇದಕ್ಕೆ ಒಪ್ಪಲಿಲ್ಲ ಅಂದ್ರೆ ನಾನೇ ರೈತ ಸಂಘದಿಂದ ಹೊರಗೆ ಹೋಗ್ತೀನಿ. ಒಂದೋ ಸಂಘಟನೆಯಲ್ಲಿ ನಾನಿರಬೇಕು, ಇಲ್ಲ ಶಾಮಣ್ಣ ಇರಬೇಕು. ಎರಡರಲ್ಲಿ ಒಂದು ಈ ಸಭೆಯಲ್ಲಿ ನಿರ್ಧಾರವಾಗಲೇ ಬೇಕು'' ಎಂದು ಖಡಾಖಂಡಿತವಾಗಿ ಠರಾವು ಮಂಡಿಸಿದರು. ಅವರ ಠರಾವಿಗೆ ಬೇರೆ ಸದಸ್ಯರು ಪ್ರತಿಕ್ರಿಯಿಸುವುದಕ್ಕೆ ಮುಂಚೆಯೇ ನಾನು ಎದ್ದು ನಿಂತು "ನಂಜುಂಡಸ್ವಾಮಿಯವರು ರೈತಸಂಘದಿಂದ ಹೊರ ನಡೆಯುವ ಮಾತುಗಳನ್ನು ಆಡಬಾರದು. ನನ್ನಂತೋರು ರೈತಸಂಘದಲ್ಲಿ ಸಾವಿರಾರು ಜನ ಇದೀವಿ. ನನ್ನೊಬ್ಬನನ್ನು ರೈತಸಂಘದಿಂದ ಹೊರಹಾಕಿದರೆ ಸಂಘಟನೆಗೆ ಯಾವ ನಷ್ಟವೂ ಇಲ್ಲ. ಆದೇ ನಂಜುಂಡಸ್ವಾಮಿಯವರು ಒಬ್ಬರೇ. ಅವರಿಲ್ಲದೆ ರೈತ ಸಂಘಕ್ಕೆ ಅಸ್ತಿತ್ವ ಇಲ್ಲ. ನಾನು ತಪ್ಪು ಮಾಡಿದೀನಿ ಅಂತಾದ್ರೆ ನನಗೆ ಶಿಕ್ಷೆ ಆಗಲಿ. ನೀವು ರಾಜ್ಯ ಸಮಿತಿಯಿಂದ ನನ್ನನ್ನು ಹೊರಹಾಕಿದ್ರೂ ನಾನು ಸಭೆಗೆ ಬಂದೆ ಬರ್ತೀನಿ. ಇಷ್ಟು ದಿನ ಒಳಗೆ ಸಭೆಯಲ್ಲಿ ಕೂರ್ತಿದ್ದೆ, ಇನ್ನು ಮುಂದೆ ಹಂಗೆ ಮಾಡಲ್ಲ. ಸಭೆ ನಡಿಬೇಕಿದ್ರೆ ಬಾಗಿಲ ಹೊರಗಿರ್ತೀನಿ. ರೈತ ಸಂಘದ ಸಭೆಗೆ, ಕಾರ್ಯಕ್ರಮಕ್ಕೆ ಬರೋದನ್ನಂತೂ ಬಿಡಲ್ಲ. ಇದು ನಾವೇ ಓಡಾಡಿ ಕಟ್ಟಿದ ಸಂಘಟನೆ. ಇದನ್ನು ಬಿಟ್ಟು ನಾವು ಎಲ್ಲಿಗೂ ಹೋಗಬೇಕಾದ್ದು ಇಲ್ಲ ಎಂದು ನಾನು ನಂಬಿದ್ದೀನಿ'' ಎಂದು ಹೇಳಿದೆ. ಆವತ್ತಿನ ಸಭೆ ಈ ಬಗ್ಗೆ ಯಾವುದೇ ನಿರ್ಣಯಕ್ಕೆ ಬರದೇ ಅಲ್ಲಿಗೆ ಮುಕ್ತಾಯ ಕಂಡಿತು.

(ಬಿ. ಚಂದ್ರೆಗೌಡರು ನನ್ನ ಬಗ್ಗೆ ಬರೆದ ನಾಟಕದಲ್ಲಿ ನಂಜುಂಡಸ್ವಾಮಿಯವರು ನನ್ನನ್ನ ರೈತಸಂಘ ರಾಜ್ಯ ಸಮಿತಿಯಿಂದ ಹೊರಹಾಕುವಾಗ ನನ್ನ ಹಸಿರು ಶಾಲನ್ನು ಕಸಿದುಕೊಂಡು ಕಳಿಸಿದರು ಎಂಬಂತೆ ಚಿತ್ರಿಸಿದ್ದಾರೆ. ಹಾಗೇನೂ ನಡೆದಿಲ್ಲ. ನಿಜವಾದ ಕಾರಣವಿಲ್ಲದೆ ಹಸಿರು ಶಾಲು ಕಸಿದು ಕಳಿಸುವಷ್ಟು ಕ್ರೌರ್ಯ ನಂಜುಂಡಸ್ವಾಮಿಯವರದ್ದಾಗಿರಲಿಲ್ಲ. ಅವರಲ್ಲಿ ತಮ್ಮ ಮಾತೇ ನಡೆಯಬೇಕು, ಅದಕ್ಕೆ ಯಾರೂ ಎದುರು ಹೇಳಬಾರದು ಎಂಬ ಹಠ ಇತ್ತು ಅಷ್ಟೆ.)

ಅದಾಗಿ ಮೂರನೇ ವಾರಕ್ಕೆ ಬಾಬಾಗೌಡ ಪಾಟೀಲರಿಂದ 'ಅಶಿಸ್ತಿನ ಕಾರಣಕ್ಕೆ ನಿಮ್ಮನ್ನು ರೈತ ಸಂಘ ರಾಜ್ಯಸಮಿತಿಯಿಂದ ಮೂರು ವರ್ಷ ಉಚ್ಚಾಟಿಸಲಾಗಿದೆ' ಎಂಬ ಪತ್ರ ಬಂತು. ರಾಮದಾಸ್, ತೇಜಸ್ವಿ ಎಲ್ಲರಿಗೂ ನಂಜುಂಡಸ್ವಾಮಿಯವರ ಈ ರೀತಿಯ ವರ್ತನೆ ಬೇಸರ ತಂದಿತ್ತು. ಆದರೆ ವೈಯಕ್ತಿಕವಾಗಿ ನನಗೇನೂ ಈ ವಿಷಯ ಅಂಥ ಬೇಸರ ತರಿಸಿರಲಿಲ್ಲ. ಯಾಕೆಂದರೆ ನಾನು ಸಾಮಾನ್ಯ ಕಾರ್ಯಕರ್ತನಾಗಿ ಸಂಘಟನೆಯಲ್ಲಿ ತೊಡಗಿಸಿಕೊಳ್ಳಲು ಯಾವ ಅಡ್ಡಿ ಆತಂಕಗಳೂ ಇರಲಿಲ್ಲ. ನನಗೆ ಬೇಕಾಗಿದ್ದದು ಅದೇ. ಈ ಘಟನೆಯ ನಂತರವೂ ನಾನು ಸಂಘಟನೆಯ ಗ್ರಾಮ, ತಾಲ್ಲೂಕು, ಜಿಲ್ಲಾ ಸಮಿತಿ ಸಭೆ, ಕಾರ್ಯಕ್ರಮ ಎಲ್ಲದಕ್ಕೂ ಮೊದಲಿನಂತೆ ಓಡಾಡುತ್ತಿದ್ದೆ. ಆದರೆ ರಾಜ್ಯ ಸಮಿತಿ ಸಭೆಗೆ ಮಾತ್ರ ಹೋಗುತ್ತಿರಲಿಲ್ಲ. ಎರಡ್ಮೂರು ತಿಂಗಳಲ್ಲೆ ನಂಜುಂಡಸ್ವಾಮಿಯವರದೊಂದು ಪತ್ರ ಬಂತು. ಅದರಲ್ಲಿ 'ಕಡಿದಾಳು ಶಾಮಣ್ಣ ರೈತ ಸಂಘದ ರಾಜ್ಯ ಸಮಿತಿಯ ಖಾಯಂ ಆಹ್ವಾನಿತರು, ಇವರಿಗೆ- ' ಎಂದು ಬರೆದು ರಾಜ್ಯ ಸಮಿತಿ ಸಭೆಯೊಂದಕ್ಕೆ ಆಹ್ವಾನ ನೀಡಿದ್ದರು. ■



ಹಾಗೇ ಆಗಿದೆ

ನೀನೇ ಯೋಚಿಸು
ಒಡೆಯದ ಕನ್ನಡಿಗಳೇ
ಇಲ್ಲದಿರುವಾಗ
ಜನ ಯಾವುದರಲ್ಲಿ
ತಮ್ಮ ಮುಖ ನೋಡಿಕೊಳ್ಳುತ್ತಾರೆ?
ಹಾಗಾಗಬಾರದು ನಿಜ
ಈಗ ಹಾಗೇ ಆಗಿದೆ

ನೀನೇ ಯೋಚಿಸು
ನುಡಿವ ಮಾತುಗಳೆಲ್ಲ
ಮಾರಾಟವಾಗಿಬಿಟ್ಟರೆ
ಮನಸು ಮೌನವನ್ನು
ಹೇಗೆ ಹೇಳಿಕೊಳ್ಳುತ್ತದೆ?
ಹಾಗಾಗಬಾರದು ನಿಜ
ಈಗ ಹಾಗೇ ಆಗಿದೆ

ನೀನೇ ಯೋಚಿಸು
ಎಲ್ಲರೂ ಕಳೆದುಹೋದ
ಜಾತ್ರೆಯ ಗದ್ದಲದಲಿ
ಯಾರು ಯಾರನ್ನು
ಹುಡುಕುತ್ತಾರೆ?
ಹಾಗಾಗಬಾರದು ನಿಜ
ಈಗ ಹಾಗೇ ಆಗಿದೆ

ನೋಡಿಕೊಳ್ಳದ ಮುಖ
ಹೇಳಿಕೊಳ್ಳದ ಮೌನ
ಹೊತ್ತು ಕಳೆದ ಜನ
ಬೀದಿ ತುಂಬ ಅಲೆಯುತಿದ್ದಾರೆ
ನೀನೇ ಯೋಚಿಸು, ಏಕೆಂದರೆ
ನಡುವೆ ನಾನೂ ಇದ್ದೇನೆ

● ಗಣೇಶ ಹೊಸ್ಮನೆ

...ಮನಮೋಹನ್ ಸಿಂಗ, ಲಾಲಬಾದ್ದೂರ್ ಶಾಸ್ತ್ರಿ ಇದ್ದಂಗವ್ರುನೆ ಕಂಡ್ಲ

ಚುನಾವಣೆಯಲ್ಲಿ ಸೋತವರ, ಗೆದ್ದವರ ಗುಣಗಾನ ...ಯುತ್ತಿತ್ತು. ಅಂಬರೀಶ್ ಸೋತು ಹೋಗಿದ್ದರಿಂದ ...ಮ್ಮಿ ಸುಮಲತಳಿಗಿಂತಲೂ ಬೇಸರಗೊಂಡು, ಮಾತಿನಲ್ಲಿ ...ತ್ಸಾಹ ಕಳೆದುಕೊಂಡಿದ್ದಳು. ಅಂಬಿ ಸಿಕ್ಕುವಂತಿದ್ದರೆ ...ಗೆ ಸಮಾಧಾನ ಹೇಳಿ ಕಣ್ಣೊರೆಸಿಕೊಂಡು ಬರುವ ...ನಸ್ಥಿತಿಯಲ್ಲಿದ್ದಳು. ಇನ್ನು ದೇವೇಗೌಡರು ಭಾರಿ ಮತ ...ಂದ ಆಯ್ಕೆಯಾದರೆಂಬ ಸುದ್ದಿ ಕೇಳಿದ್ದ ಕಾಳಮಾವ, ...ೋಗ್ಲಿ ಬುಡತ್ತಗೆ. ಪಾಪ ನಾಯಕದೆಸತಿ ಕ್ವರಗದು ...ತ್ರೆ" ಎಂದುಕೊಂಡು ನಿರಾಳವಾಗಿದ್ದ. ಇನ್ನು ಸೀರನಿಗೆ ...ೋಲು ಗೆಲುವು ತಮಾಶೆಯ ಸಂಗತಿಗಳಾಗಿದ್ದು ಕ್ವಕಾಶ್ ...ದು ನಗುತ್ತಲೇ,


"ಅಂತೂ ಅದ್ವಾನಿ ಕತೆ ಮುಗಿತು" ಎಂದ.

"ಮುಗಿತು ಅಂದ್ರೆ, ಬಿಜೆಪಿಗಳಿಗೆ ಅವುನು ...ಾನಿಯಾಗದು ಬ್ಯಾಡವಾಗಿತ್ತಂತೆ ಕಣೊ" ಎಂದ ಉಗ್ರಿ.

"ಅದ್ಯಾಕ್ ಬ್ಯಾಡವಾಗಿತ್ತ?"

"ಅದ್ವಾನಿ ಪಾಕಿಸ್ತಾನದಿಂದ ಓಡಿಬಂದೋನಂತೆ. ಅದೂ ...ತ್ಲೆ ಅವುನು ಬ್ರಾಮುಣಲವಂತೆ. ಅದ್ಕೆ ವಳಗಿಂದ್ವಳಗೆ ...ದ್ವಾನಿ ಗೂಡೂರ ಕೂದರಂತೆ."

"ಅಂಗರೆ ಬಿಜೆಪಿಲೂ ಅಂತ ಜನಿದ್ದರೆ?"



"ಇದ್ದರೆ ಅಂತ ಕೇಳ್ತಿಯಾ? ಬರಿ ಅವುರೆಯ. ಪಾಪ ಕಲ್ಯಾಣಸಿಂಗನ ಕೈಲಿ ಮಸೀದಿ ಕೆಡಿಸಿದ್ರು. ಮನಿಕ್ಕಳಿಸಿದ್ರು. ...ಗಾರು ಲಕ್ಷ್ಮಣನ ಕೈಲಿ ಕಾಸೀಸಗೊ ಅಂದ್ರು. ಅವುನು ...ಯ್ಕಂಡು ಮನಿಗೋದ. ಇನ್ನ ಉಮಾಭಾರತಿ ಅನ್ನೊ ...ೋಯೋ ಬುದ್ದಿ ಕುಣದು ಸುಸ್ತಾದ ಮ್ಯಾಲೆ ...ರ್ಟಿಯಿಂದ್ಲೆ ಹೋಗೋ ತರ ಮಾಡಿದ್ರು. ಪಾಪ ...ಗವುಳು ಎಲ್ಯವುಳೋ ಏನೊ. ಇಂತ ಜನಗಳು ಅದ್ವಾನಿ ...ಡತರೇನೊ?"

"ಓ ಸರಿ ಬುಡು, ಇವುರಿಗಾಗಿರದು ನೋಡಿದ್ರೆ ...ಬೇಕಾದ್ದೆಯ."

"ಊ ಕಣ ಮಾವ. ಇನ್ನೊಸಿದಿನ ಹೋಗಿದ್ರೆ ಬಾಬರಿ ...ಸೀದಿ ತಾನಾಗೇ ಬಿದ್ದೋಗದು. ಅಂತೆದ ಮುಂದೆ ...ತಗಂಡು ಕೆಡಗಿಸಿದ. ಬಿದ್ದಮ್ಯಾಲೆ ಸಾರಿ ಅಂದ. ಆದ್ರೆ ...ೇ ಅವುನನ್ನ ಕಾಡಿಬುಡ್ತು."

"ಯಾವತ್ತು ಮನ್ನ ಸಿಟ್ಟಿನಲ್ಲಿ ಬದುಕಬಾರ್ದು ಕಂಡ್ರ" ...ದ ಕಾಳಮಾವ.

"ನಿಜ ಕಣಮಾವ. ಬಿಜೆಪಿಗಳ ಆವೇಶ ಇಳುದು ಇವತ್ತು ದೇಶವೆ ತಣ್ಣಗದೆ. ಅದೇ ಅದ್ವಾನಿ ಏನಾರ ಗೆದ್ದಿದ್ರೆ ನೋಡಬೋಕಾಗಿತ್ತು ಅವುರ ಪಟಾಕಿಯ."

"ಅಂಗರದ್ವಾನಿ ಸೋತವ್ರುನೇನ್ನ?" ಎಂದಳು ಜುಮ್ಮಿ.

"ಅವುನು ಗೆದ್ದವುನೆ ಕಣೆ. ಅವುನ ಪಾರ್ಟಿ ಬೂಂದಿ ತಿನ್ನದರ ಬದ್ಲು ಬೂಸಾ ತಿಂತಾ ಅದೆ. ಆಹಹ ಪೇಪರ್‌ನನ ಮಕ್ಳು ಬರಿವಾಗ ಏನು ಬರಿತಿದ್ರು ಗೊತ್ತೆ? ಕಾಂಗ್ರೆಸ್ನು ಬಿಜೆಪಿಗಿಂತ ಐದು ಅಥವಾ ಏಳು ಸೀಟು ಜಾಸ್ತಿ ತಗತದೆ ಅಂತ ಬರಕಂಡು ಕುಂತಿದ್ರು. ಈಗ ನೋಡು ಐವತ್ತು ಸೀಟು ಜಾಸ್ತಿ ಬಂದವೆ. ಇದ್ಯೇನೇಳ್ತೀ?"

"ನೋಡು ಮತ್ತೆ ಇವುರು ಬರದಂಗೆ ಆಗಿದ್ರೆ ಇನ್ನೇಟು ಕುಣದಾಡೋರು."

"ಕುಣದಾಡದೇನು, ಈಟೊತ್ತಿಗೆ ಆ ಭಟ್ಟ, ನಾಣಿ, ಸೀನ ಯಲ್ಲ ಹೋಗಿ ಅದ್ವಾನಿ ಮನೆಲೆ ಕುಂತಿರೋರು ಕಣೊ. ಸದ್ಯ ದೇಸದ ಜನ ಅಂತದಕೆ ಅವುಕಾಸ ಕೊಡಲಿಲ್ಲ. ಮನಮೋಹನ ಸಿಂಗನ ಕೈಹಿಡದೆತ್ತಿದ್ರು."

"ಅವುನ ಕೈಹಿಡದೆತ್ತಿದೋರು ಅವ್ವ ಮಕ್ಕಳು ಕಂಡ್ರ" ಎಂದ ಕಾಳಮಾವ.

"ನಿಜ ಕಣಮಾವ. ಈ ಅವ್ವ ಮಕ್ಕಳಿಲ್ಲದೆ ಯಿದ್ರೆ ಮನಮೋಹನ ಸಿಂಗ ತಿರಗ ಪ್ರಧಾನಿಯಾಯ್ತಿರಲಿಲ್ಲ" ಎಂದ ಉಗ್ರಿ.

"ಅವುನ್ನ ನೋಡಿದ್ರೆ ಲಾಲ್ ಬಾದ್ದೂರ್ ಶಾಸ್ತ್ರಿ ನೋಡಿದಂಗಾಯ್ತದೆ ಕಂಡ್ರ."

"ನೀನೇಳಿದ್ದು ನಿಜ ಕಣಮಾವ. ಸಿಂಗ ಇವತ್ತು ನಿಜವಾಗ್ಲು ಕಿಂಗು. ಅಂಥ ಮನುಸುನ್ನ ಅದ್ವಾನಿ ದುರ್ಬಲ ಮನ್ಸ, ಕೈಲಾಗದೋನು, ಸೋನಿಯಾಗಾಂಧಿ ಹೇಳಿದಂಗೆ ಕೇಳ್ತನೆ ಅಂತ ಬೈತಿದ್ದ. ಬೋದೋನು ಹಾಳಾದ, ಬೈಸಿಗಂಡೋನು ಉದ್ದಾರಾದ ಅಂತ ಇವತ್ತು ತಿರಗ ಪ್ರಧಾನಿಯಾದ ನೋಡು."

"ಯಂಗೊ ದೇಸ ನ್ಯಡಿಸಗಂಡೋಯ್ತನೆ ಬುಡು. ಯಾರಿಗೂ ಭಯಿಲ್ಲ."

"ನಿಜ ಕಣಮಾವ. ದೇಸ ಆಳೋ ಮನುಸುನ್ನ ನೋಡಿದ್ರೆ ಯಾರೂ ಹೆದರಬಾರ್ದು, ಬ್ಯಲೆಕೊಡುಂಗಿರಬೇಕು. ಅದೇ ಈ ಅದ್ವಾನಿ ಪ್ರಧಾನಿಯಾಗಿದ್ರೆ, ಸಾಬರು ಹೆದರೋರು, ಹೆದ್ರಿಕಂಡು ಬಾಂಬು ತಯಾರುಸೋರು, ಆಗಾಗ್ಗೆ ಯಾರ ಮ್ಯಾಲಾರ ಯಸಿಯವ್ರು. ಇನ್ನು ಮ್ಯಾಲೆ ಸುಮ್ಮನಿರತರೆ."

"ಅವೆಲ್ಲಿ ಸುಮ್ಮನಿದ್ದವುಲ? ತಲೆಕೆಟ್ಟ ನನ್ನ ಮಗನವ್ರು."

"ಅದೂ ನಿಜವೆ ಬುಡು. ಬಂಬಾಯಿ ಮ್ಯಾಲೆ ದಾಳಿ ಮಾಡಿ ನೂರಾರು ಜನ ಸಾಯಿಸಿದರಲ್ಲಾ, ಅವುರ್‍ಯಾರು ಹಿಡುಕೊಡಿ ಅಂದ್ರೆ, ಅದಕ್ಕೆ ಪುರುಸೊತ್ತು ಕೊಡದಂಗೆ ಪಾಕೀಸ್ತಾನದಲ್ಲಿ ವಡದಾಡ್ತ ಅವೆ. ಅವುರದೇ ದೇಸದಲ್ಲೂ ನ್ಯಟ್ಟಗಿಲ್ಲ, ಬ್ಯಾರೇ ದೇಸನೂ ನ್ಯಟ್ಟಗಿರಕ್ಕೆ ಬುಡದಿಲ್ಲ ಅಂತ ಸಾಬ್ರು ಕಣೊ ಅವುರು. ಅವುರ ತಿದ್ದಕ್ಕೆ ಅಲ್ಲನ ಕೈಲೂ ಆಗದಿಲ್ಲ ಬುಡು."

"ಯಾರನ್ನ ತಿದ್ದಕ್ಕಾಗದಿಲ್ಲವಪ್ಪ" ಎಂದುಕೊಂಡು ವಾಟಿಸ್ಸೆ ಬಂದ.

"ಪಾಕೀಸ್ತಾನದ ಸಾಬ್ರು ಕಂಡ್ರ" ಎಂದ ಸೀರ.

"ಥೂ, ನೀನೇನು ಚಿಗಪ್ಪ ಹಿಂಗಾಗಿದ್ದೀ. ನಿನಿಗಿರೊ ಮೂರು ಮಕ್ಕಳ ತಿದ್ದಕ್ಕಾಗದೆ? ಅವು ನಿನಿಗೇ ಪ್ರಾಬ್ಲಂ ಆಗ್ಯವೆ. ಅಂತದ್ರಲಿ ಪಾಕೀಸ್ತಾನದ ಸಾಬರು ಸರಿಯಾದರೆ?



ನಾನು ನಂ ಗುರು ಬಂಗಾರಪ್ಪನ್ನ ತಿದ್ದಕ್ಕಾಗದಿಲ್ಲ ಅಂತ ಮಾತಾಡ್ತ ಇದ್ದಿರಿ ಅನ್ನಕಂಡೆ" ಎಂದ.

"ಬಂಗಾರಪ್ಪ ಮದ್ದಿಂದ ಕ್ಯಾಚಲವೇನ್ನ?" ಎಂದ ಕಾಳಮಾವ.

"ನಿಜ ದ್ವಡಪ್ಪ, ನಾವು ತಿಳಕಳಕ್ಕೆ ಲೋಟಾಯ್ತು. ಅವುನು ಇದ್ದಕ್ಕಿದ್ದಂಗೆ ಕೈಲಿ ಕಮಲ ಇಡಕಂಡು ಬಿಜೆಪಿಗೋದ ನೋಡು, ಅವತ್ಲೆ ನಾನವುನ್ನ ಬುಟ್ಟೆ ದ್ವಡಪ್ಪ. ಆದ್ರಿಂದ ಇವತ್ತು ಅವುನು ಸೋತಿರದ್ರಿಂದ ನನಿಗ್ಯಾವ ಫೀಲಿಂಗು ಆಯ್ತಾ ಇಲ್ಲ. ಅವುನು ಮಾಡಿದ ತಪ್ಪು ನ್ಯನಿಸಿಗಂಡು ಫೀಲಿಂಗ್ ಕಡಿಮೆ ಮಾಡಿಕತ್ತಾಯಿದ್ದಿನಿ."

"ಅವುನು ನ್ಯಟ್ಟಗೆ ರಾಜಕಾರಣ ಮಾಡಿದ್ದಾ ಯತ್ತು? ಉದ್ದಕ್ಕೂ ತಪ್ಪು ದಾರೀಲೆ ಅಲವೆ ಅವುನು ನ್ಯಡದದ್ದು?"

"ನಿಜ ಕಣೊ ಉಗ್ರಿ. ಅವುನ್ಯಾವನೊ ಮೂರು ಕಾಸಿನ ಶಿವಪ್ಪ ಅಂತ ಇದ್ದ. ಅವುನ್ನ ಹಿಡಕಂಡು ಬಂದು ಎಂಪಿ ಮಾಡಿದ. ಅವುನು ಇವುನ್ನ ಎಂಟ ಮಾಡಿಬುಟ್ಟೊದ. ಆಮ್ಯಾಲೆ ಅಲ್ಲೆಲ್ಲೋ ಸರಾಪು ಮಾರ್‍ತ ಕುಂತಿದ್ದ ಬೇಳೂರು, ಹಾಲಪ್ಪ ಅನ್ನೊ ಲಿಕ್ಕರ್ ಜನ ಹಿಡಕಂಡು ಬಂದು ಚುನಾವಣೆಗೆ ನಿಲ್ಲಿಸಿ, ಕಾಗೋಡು ತಿಮ್ಮಪ್ಪನ ರಾಜಕಾರಣನೇ ಮುಗಿಸ್ದ. ಇವತ್ತು ಬೇಳೂರು, ಹರತಾಳ ಎಡೂರಪ್ಪ ಹೇಳಿದಂಗೆ ತಾಳ ಹಾಕ್ತ ಅವ್ರುರೆ. ಇಂತ ಕ್ಯಲಸ ಮಾಡಿದೋನಿಗೆ ಇನ್ನೇನಾಗಬೇಕು?"

"ಅವುನಿಗೂ ವಯಿಸ್ಸಾಯ್ತು ಬುಡು."

"ವಯಿಸಾದ ಮ್ಯಾಲೆ ತಲೆಕೆಟ್ಹೋಯ್ತದೆ ಅಂತರೆ. ಅದನ್ನ ಪ್ರಾಕ್ಟಿಕಲ್ಲಾಗೇ ನೋಡಿದವಪ್ಪ ಈಗ."

"ಅದರಲ್ಯಲ್ಲ ದ್ಯಾವೇಗೌಡ ಪಬ್ಲನೇ ತಲೆ ಸ್ಪಟ್ಟಗೆ ಮಡಿಕಂಡಿರನು" ಎಂದ ಕಾಳಮಾವ.

"ದ್ವಡಪ್ಪ, ನೀನಿನ್ನು ದ್ಯಾವೇಗೌಡನ ಅತ್ಯಕೋಗಿ ಮಾತಾಡಿಸಿಲ್ಲ, ನಾನು ಹೋಗಿ ಮಾತಾಡಿ ಆಡಿಕಂದಿದ್ದಿನಿ. ಅವುನ ತಲೆನೂ ಹೋಗ್ಯದೆ. ಅಂಗೆ ನಮ್ಮ ಬಂಗಾರಿ, ಜಾರ್ಜ್ ಫರ್ನಾಂಡಿಸ್ ಇವುರ ತಲೆ ಕೈಕೊಟ್ಟದೆ. ಅದ್ಕೆ ನಾನು ವಯಿಸಾದ ಮ್ಯಾಲೆ ಜನಕ್ಕೆ ತಲೆ ಕೆಡ್ತದೆ ಅಂತ ಹೇಳಿದ್ದು."

"ಯವಾರ ತಲಿಯವಾರ ಕೆಟ್ರು, ಕ್ಯರಹಿಡಿಲಿ. ಅಂಬುರೀಸ ಸೋತ ಅಂತ ಜುಮ್ಮಿ ತೀರ ತಲೆ ಕೆಡಿಸಿಗಂಡವುಳೆ. ಅವುಳಿಗೊಸಿ ಸಮಾಧಾನ ಮಾಡ್ರ."

"ಅಕ್ಕಾ, ಇಲ್ಲಿ ನೋಡಕ್ಕ, ಅಂಬುರೀಸ ನಿನಿಗೆ ರಾಜಕಾರಣ ಬ್ಯಾಡ, ರೇಸಾಡು ಅಂತ ಶ್ರೀರಂಗಪಟ್ಟಣದ ಜನ ಹೇಳಿದ್ರು. ಆ ಮಾತ ಕೇಳಿಸಿಗಳದೆ ತಿರಗ ಕಾವೇರಿ ಮಡಿಗೆ ಬಿದ್ರೆ ಅದು ನಮ್ಮ ತಪ್ಪಾ? ಆಮ್ಯಾಲೆ ಇವುನೆದ್ರಿಗೆ ನಿಂತಿದ್ದ ಚಲುವರಾಯ ಕೋಟ್ಯಾಂತರು ಪಾಯಿ ಖರ್ಚು ಮಾಡಿದ. ಇವುನು ಕೈಬೀಸಿಗಂಟ ಟಾಟಾ ಮಾಡಿಕಂಡೋದ, ಜನಗಳೂ ಟಾಟಾ ಮಾಡಿದ್ರು."


"ಅವುನು ದುಡ್ನು ಖರ್ಚು ಮಾಡಿದ ಕಂಡ್ರ, ಇಲ್ಲದ್ನೆ ಹೇಳಬ್ಯಾಡ" ಎಂದಳು ಜುಮ್ಮಿ.

"ಮಾಡಿದ ಸರಿಕಣಕ್ಕ. ಯಾವ ತರ ಮಾಡಿದ ಅಂದ್ರೇ ಅವುನ ಸಪ್ಪೋರ್ಟಿಗೆ ಇದ್ದದ್ದೇ ಇಬ್ರು ಎಮ್ಮೆಲ್ಲೆಗಳು. ಅವುರ ಕೈಲಿ ಒಂದಿಷ್ಟು ಕಾಸು ಕೊಟ್ಟ. ಅವು ಕಳ್ಳ ಕಾಕರ ಕೈಗೆ ಒಂದಿಷ್ಟಾಕಿ, ತಾವು ಒಂದಿಷ್ಟು ಮಡಿಕಂಡು ಮನಿಗೋದ್ರು. ಅದೇ ಚಲುವರಾಯನ ಕಡೆ ಇದ್ದ ಐದು ಎಮ್ಮೆಲ್ಲೆಗಳು ಚಲುವನತ್ರ ಈಸಗಂಡ ಹಣದಲ್ಲಿ ಮುಕ್ಕಾಲು ಭಾಗ ಖರ್ಚು ಮಾಡಿದ್ರು. ಆದ್ರಿಂದ ದ್ಯಾವೇಗೌಡನ್ನ ಉಪಾಯದಲ್ಲಿ ಹಿಡಕಂಡೋಗಕ್ಕೆ ಊರುಗೋಲು ತರ ಚಲುವ ಗೆದ್ದ. ಅತ್ತಗೆ ದ್ಯಾವೇಗೌಡ ಗೆದ್ದ. ಅವುನ ಮಗ ಕುಮಾರ ಗೆದ್ದ. ಅವುನ ಮಗನ ಸಮಾನವಾಗಿರೊ ಚಲುವ ಗೆದ್ದ. ಅಕ್ಚುಯಲಿ ದ್ಯಾವೇಗೌಡನಿಗೆ ಈ ಟೈಮಲ್ಲಿ ನಾಕು ಜನ ಬೇಕಿತ್ತು. ಆದ್ರೆ ಈಗ ಆ ಕಡಿಕ್ವಬ್ಬ, ಈ ಕಡಿಕ್ವಬ್ಬ ಅಂತ ಇಬ್ರು ಗೆದ್ರು. ನಾನು ತೃತೀಯರಂಗದಲ್ಲಿರತಿನಿ, ನೀನು ಸೋನಿಯಾ ರಂಗದಲ್ಲಿರು ಅಂದ್ರು ಯರಡನೇ ಆಟ ನ್ಯಡಿಲಿಲ್ಲ. ಆದ್ರು ಯತ್ತಮುಂದಾಗಿ ನೋಡಿದ್ರು ಎಡೂರ ಸೇಪಾದಂಗೆ ಕಾಣ್ತನೆ" ಎಂದು ವಾಟಿಸ್ಸೆ ಹೊರಟ. ■

ಪುಸ್ತಕ ಬರೆಯುವವರು-ವಿಮರ್ಶಕರು

ಈ ಪುಸ್ತಕ ವಿಮರ್ಶೆಯ ಬಗ್ಗೆ ಈ ಸಲ ಒಂದು ಟಿಪ್ಪಣಿ ಬರೆಯಲೇಬೇಕು. ...ಮಾರು ಹತ್ತು ವರ್ಷ ಕಾವ್ಯ ಸಾಹಿತ್ಯದತ್ತ ಗಂಭೀರ ನೋಟ ಬೀರದೆ ಇದ್ದ ...ನು ಎರಡು ವರ್ಷದಿಂದ ಕತೆ, ನಾಟಕ ಬರೆಯಲು ಯತ್ನಿಸುತ್ತಿರುವುದನ್ನು ...ವು ಗಮನಿಸಿರಬಹುದು. ನನ್ನ ಪುಸ್ತಕಗಳ ಬಗ್ಗೆ ಸಾಕಷ್ಟು ವಿಮರ್ಶೆ, ...ಶ್ಲೇಷಣೆ ಬಂದಿರುವುದರಿಂದ ಇದನ್ನು ನನಗೆ ಅನ್ವಯಿಸಬೇಡಿ. ಒಂದು ...ತ್ರಿಕೆ ನಡೆಸುತ್ತ ಜನರೊಂದಿಗೆ ಬೆರೆಯುವ ನನ್ನ ಬಗ್ಗೆ ವಿಮರ್ಶಕರಿಗೆ ಭಯ, ...ಶಂಕ ಇರಬಹುದು; ಅಥವಾ ನನ್ನ ಪುಸ್ತಕಗಳು ಅವರಿಗೆ ನಿಜಕ್ಕೂ ...ಡಿಸಿರಬಹುದು. ಅದೆಲ್ಲ ಇರಲಿ.

ವಿನಾಗಿದೆ ಅಂದರೆ, ನಮ್ಮ ...ಕಾಡೆಮಿಕ್ ವಿಮರ್ಶಕರು ...ಮ್ಮ ತಮ್ಮ ಕೆಲಸದಲ್ಲಿ ...ಗ್ನರಾಗಿದ್ದು ಒಂದು ಪುಸ್ತಕ ...ಂದರೆ ಅದನ್ನು ಗಮನಿ...ವುದಿಲ್ಲ; ಗಮನಿಸಬೇಕಾದ ...ಹಲೇಖಕರು ಅಸೂಯೆ...ಿಂದ ಸುಮ್ಮನಿದ್ದುಬಿಡು...ರೆ. ಪ್ರಖ್ಯಾತ ಲೇಖಕರಾದ ...ು ಸೆಮಿನಾರ್ ವಿಷವೃತ್ತದಲ್ಲಿ ...ಮ್ಮತ ಸೇವಿಸಿದವರಂತೆ ...ಮ್ಮದಿಯಾಗಿರುತ್ತಾರೆ. ನಮ್ಮ ...ಲೇಕ ನಾಟಕಕಾರರು, ದ್ವಿತೀಯ ...ರ್ಜೆಯ ನಟರು ದೂರದರ್ಶನದ ಸೀರಿಯಲ್‌ಗಳಿಗಾಗಿ ಪ್ರಯತ್ನಿಸುತ್ತ ...ಷ್ಟುರಿಗೆಟ್ಟುಲೆ ಹಣ ಗಳಿಸಿ "ಸ್ವರ್ಗಸ್ಥ"ರಾಗಿರುತ್ತಾರೆ.




ಒಬ್ಬ ತರುಣ ಸಾಹಿತಿ ಒಂದು ಕೃತಿ ಪ್ರಕಟಿಸಿದರೆ ಅವರಿಗೆ ಕೂಡಲೆ ...ಕಾದಷ್ಟು ಪ್ರತಿಕ್ರಿಯೆ; ಈ ಕೃತಿ ಜನರ ಮೇಲೆ ಯಾವ ಪರಿಣಾಮ ಬೀರದೆ ...ಂದು ಅವನಿಗೆ ಗೊತ್ತಾಗಬೇಕು. ನಮ್ಮ ವೃತ್ತಪತ್ರಿಕೆಗಳು ಎಂಥ ನಿರ್ಜೀವ ...ಯುಳ್ಳವೆ ಎಂದು ಬಲ್ಲಿರಿ; ಕನ್ನಡ ಪತ್ರಿಕೆಯೊಂದಕ್ಕೆ, ಯಾವ ಪುಸ್ತಕ ...ಮರ್ಶಿಸಬೇಕು, ಅದನ್ನು ಹೇಗೆ ಪ್ರಕಟಿಸಬೇಕು ಎಂಬುದು ಗೊತ್ತಿಲ್ಲ; ಆ ...ಕೆಗೆ ಕಳಿಸಿದ ಅನೇಕ ಪುಸ್ತಕಗಳು ಹಾಳುಬಾವಿಗೆ ಬಿದ್ದಂತೆ ತಣ್ಣಗಾಗುತ್ತವೆ.

ಇನ್ನೊಂದು ವೃತ್ತಪತ್ರಿಕೆಯವರು ಸಾಹಿತಿಯಿಂದ ಪುಸ್ತಕ ಪಡೆದು ಹೇಳುತ್ತಾರೆ, "ನೀವೇ ದಯವಿಟ್ಟು ಯಾರಿಂದಲಾದರೂ ವಿಮರ್ಶಿಸಿ ಕಳಿಸಿದರೆ ಪ್ರಕಟಿಸುತ್ತೇವೆ!" ಲೇಖಕನಿಗೆ ಇದಕ್ಕಿಂತ ದೊಡ್ಡ ಅವಮಾನವಿರಲಾರದು.

ಕನ್ನಡದಲ್ಲಿ ಪುಸ್ತಕ ಬರೆದವರಿಗೆ ಹಣವಂತೂ ದೊರಕುವುದಿಲ್ಲ. ಇಂಗ್ಲೆಂಡ್, ಅಮೆರಿಕಾ, ಫ್ರಾನ್ಸ್‌ನಲ್ಲಿ ಒಂದು ಯಶಸ್ವಿ ನಾಟಕ ಬರೆದರೆ, ಒಂದು ಜನಪ್ರಿಯ ಕಾದಂಬರಿ ಬರೆದರೆ ಹೊಟ್ಟೆಪಾಡಿಗೆ ಮತ್ತೇನೂ ಮಾಡಬೇಕಿಲ್ಲ; ಇಲ್ಲಿ ಬರೆಯುತ್ತಲೇ ಇದ್ದರೂ ಜೀವನ ಸಾಗುವುದಿಲ್ಲ. ನನ್ನದೊಂದು ಕಥಾ ಸಂಕಲನ ವರ್ಷದಲ್ಲಿ (ಮೂರು ಸಾವಿರ ಪ್ರತಿ) ಖರ್ಚಾಯಿತು. ಅದು ನನ್ನ ಪಾಲಿಗೆ ದಾಖಲೆ. ಅದರಿಂದ ಈ ಪುಸ್ತಕದ ಪ್ರಕಟಣೆಗೆ ಹಾಕಿದ ಮೂವತ್ತು ಸಾವಿರ ಹಿಂತಿರುಗಿ ಅದರ ಮೇಲಿನ ಬಡ್ಡಿ, ಅಲ್ಪಸ್ವಲ್ಪ ಸಂಭಾವನೆ ಬಂತು. ಇದೆಲ್ಲದರಿಂದ ನನಗೆ ಖುಷಿ ಮಾತ್ರ ಆಗಿ ರುವುದನ್ನು ನೀವು ಬಲ್ಲಿರಿ.

ಇಂಥ ಪರಿಸ್ಥಿತಿಯಲ್ಲಿ ತಿಳಿದವರು, ವಿಮರ್ಶಕರು, ಪುಸ್ತಕಗಳ ಬಗ್ಗೆ ಗಾಢ ಆಸಕ್ತಿಯುಳ್ಳವರು ಉತ್ತಮ ಪುಸ್ತಕ ಬಂದಾಗ ಆಸಕ್ತಿ ತೋರಿ ಚರ್ಚಿಸುವಂತಾಗಬೇಕು, ವಿಮರ್ಶಿಸುವಂತಾಗಬೇಕು. ಯಾವುದೇ ಜಾತಿ, ಪಂಥ, ಹಿನ್ನೆಲೆಯ ಮರ್ಜಿ ಸಾಹಿತ್ಯ ವಾತಾವರಣವನ್ನು ಪ್ರವೇಶಿಸಕೂಡದು. ಎಲ್ಲ ವೃತ್ತಿಗಳೂ ಮೀಸಲಾತಿ, ರಿಯಾಯಿತಿಯನ್ನು ತಿರಸ್ಕರಿಸಿ ಈ ರಂಗದಲ್ಲಿ ಪೂರ್ಣ ಎಚ್ಚರ, ಪೂರ್ಣ ಕಾತರ ಮೂಡುವಂತಾಗಬೇಕು.


'ಪತ್ರಿಕೆ'ಯು ವಿಮರ್ಶೆ ಈ ನಿಟ್ಟಿನಲ್ಲಿ ಪ್ರಯತ್ನಿಸುತ್ತದೆ.



ದಲೈ ಲಾಮಾ, ಹೆಂಗಸರು

ನನ್ನ ಮತ್ತು ದಲೈ ಲಾಮಾ ವಯಸ್ಸು ಒಂದೇ ಎಂಬುದು ನನ್ನ ಪಾಲಿಗೆ ವಿಚಿತ್ರ; ನಾವಿಬ್ಬರೂ ಒಂದೇ ವರ್ಷದಲ್ಲಿ ಹುಟ್ಟಿದವರು. ದಲೈ ಲಾಮಾ ಎಷ್ಟು ಪ್ರಾಮಾಣಿಕ, ಪ್ರಜ್ಞಾವಂತ, ತಮಾಷೆಯ ವ್ಯಕ್ತಿ ಎಂಬುದು ಸುಪ್ರಸಿದ್ಧ. ಚೈನಾ ಎಂಬ ದೈತ್ಯನ ಪ್ರಚೋದನೆಯ ಎದುರು ತಣ್ಣಗೆ, ಧೈರ್ಯವಾಗಿ ಇರಬಲ್ಲ ದಲೈ ಲಾಮಾ ಚೈನಾದಲ್ಲಿ ಕಂಡುಬರದಿರುವ ಮಾನವೀಯತೆ ಮತ್ತು ವೈಚಾರಿಕತೆ ತೋರುವವರು. ಧರ್ಮದ ಅರ್ಥಪೂರ್ಣತೆ ಬಲ್ಲ ದಲೈ ಲಾಮಾ ಈ ಧರ್ಮದ ವೈಚಿತ್ರ್ಯ ಮತ್ತು ಜನವಿರೋಧಿ ಗುಣವನ್ನು ಕೂಡ ಅರಿತವರು. ಇವರು ಮೊನ್ನೆ ಹೇಳಿದರು: "ನನಗೆ ಕೆಲವೊಮ್ಮೆ ಕನಸಿನಲ್ಲಿ ಸುಂದರ ಸ್ತ್ರೀಯರು ಬರುತ್ತಾರೆ. ನಾನು ಅವರಿಗೆ 'ನಾನೊಬ್ಬ ಸನ್ಯಾಸಿ' ಎಂದು ಹೇಳುತ್ತೇನೆ."

ಕನಸುಗಳು ಕೂಡ ಅಷ್ಟೇ ಕುತೂಹಲಕರ. ಎಂದೂ ಅಮೆರಿಕಾ ನೋಡದ ಮನಿಗೆ ಅಮೆರಿಕಾದಲ್ಲಿ ಇದ್ದಂತೆ ಕನಸು ಬೀಳುವುದಿಲ್ಲ. ಹಾಗೆಯೇ ಎಂದೂ ಸಂಭೋಗಿಸದೆ ಇರುವವನಿಗೆ ಸಂಭೋಗದ ಕನಸು ಬೀಳುವುದಿಲ್ಲ. ಇದನ್ನು ಕೂಡ ನಾನು ನನ್ನ ಚಿಕ್ಕಂದಿನ ಅನುಭವದಿಂದ ಹೇಳುತ್ತಿದ್ದೇನೆ. ದಲೈ ಲಾಮಾ ತರತರವೇ! ತಪ್ಪಾಗಿದ್ದರೆ ತಿಳಿಸಿ.



—ಆಗಸ್ಟ್ 4, 1991

▸▸▸2 BJP ಭಯೋತ್ಪಾದನೆ

ಡೈನಮೈಟ್ ಅಥವಾ ಇತರ ಸ್ಫೋಟಕ ಸಾಮಗ್ರಿಗಳ ಮೂಲಕ ವ್ಯಕ್ತಿಗಳಿಗೆ ಸಾವು ಅಥವಾ ಗಾಯವನ್ನುಂಟು ಮಾಡುವ ಅಥವಾ ಆಸ್ತಿಪಾಸ್ತಿಗಳಿಗೆ ಹಾನಿ ಅಥವಾ ನಷ್ಟವುಂಟುಮಾಡುವ *ಉದ್ದೇಶ ಹೊಂದಿರುವ"* ಚಟುವಟಿಕೆಗಳೆಲ್ಲಾ ಭಯೋತ್ಪಾದನಾ ಚಟುವಟಿಕೆಗಳೇ.

ಈ ಕಾಯಿದೆಯ ಮಾನವ ಹಕ್ಕು ವಿರೋಧೀ ಅಂಶಗಳು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಾಣುತ್ತವೆ. ಮೊದಲನೆಯದಾಗಿ ಈ ತಿದ್ದುಪಡಿಯು **(act committed with the intent to disturb law and order or public order)** *"ಕಾನೂನು ಮತ್ತು ಸುವ್ಯವಸ್ಥೆಯನ್ನು ಭಂಗಗೊಳಿಸುವ"* ಎಲ್ಲಾ ಚಟುವಟಿಕೆಗಳನ್ನೂ *"ಭಯೋತ್ಪಾದನೆ"* ಎಂದೇ ಪರಿಗಣಿಸುತ್ತದೆ. ಹೀಗಾಗಿ ಸರ್ಕಾರದ ವಿರುದ್ಧ ರೈತರು, ಕಾರ್ಮಿಕರು ಮತ್ತು ನೌಕರರು ನಡೆಸುವ ಹೋರಾಟಗಳಲ್ಲಿ ಅನಿವಾರ್ಯವಾಗಿ ಸಂಭವಿಸುವ ಎಲ್ಲಾ ಕಾನೂನುಭಂಗಗಳನ್ನೂ ಸರ್ಕಾರ *"ಕಾನೂನು ಮತ್ತು ಸುವ್ಯವಸ್ಥೆಯನ್ನು ಭಂಗಗೊಳಿಸುವ ಉದ್ದೇಶದಿಂದ"* ನಡೆಸಿದ ಭಯೋತ್ಪಾದನಾ ಚಟುವಟಿಕೆಯೆಂದೇ ಪರಿಗಣಿಸಬಹುದು. ಅಷ್ಟು ಮಾತ್ರವಲ್ಲ ಸರ್ಕಾರದಿಂದ ತೀರಾ ಅನ್ಯಾಯಕ್ಕೆ ಗುರಿಯಾದ ವರ್ಗ ಅಥವಾ ಸಮುದಾಯ ಪ್ರತಿಭಟನೆ ನಡೆಸುತ್ತಿರುವಾಗ ಅದನ್ನು ದಮನ ಮಾಡುವ ಪೊಲೀಸರ ವಿರುದ್ಧ ಹಲವಾರು ಬಾರಿ ತೀವ್ರತರದ ಪ್ರತಿಭಟನೆಗಳು ನಡೆಯಬಹುದು. ಅವೆಲ್ಲವೂ ಆಗ ಭಯೋತ್ಪಾದನಾ ಚಟುವಟಿಕೆಗಳೆಂದೇ ಪರಿಗಣಿಸಲ್ಪಡುತ್ತವೆ.



ಇವೆಲ್ಲಕ್ಕಿಂತ ಹೆಚ್ಚಾಗಿ ಯಾವುದು ಭಯೋತ್ಪಾದನಾ ಕೃತ್ಯವೆಂದು ವಿವರಿಸುವಾಗ ಕೇವಲ ಬಾಂಬುಗಳನ್ನು ಎಸೆಯುವುದು ಮಾತ್ರ ಭಯೋತ್ಪಾದನಾ ಕೃತ್ಯವೆಂದು ಈ ಕಾಯಿದೆ ಹೇಳುವುದಿಲ್ಲ, ಬದಲಿಗೆ **(as to cause or likely to cause death or injury to any person or loss of damage or destruction to property)** *"ವ್ಯಕ್ತಿಗಳಿಗೆ ಅಥವಾ ಆಸ್ತಿಗೆ ಹಾನಿಯುಂಟುಮಾಡುವ ಉದ್ದೇಶದಿಂದ"* ಎಸಗುವ *"ಯಾವುದೇ ಚಟುವಟಿಕೆಗಳನ್ನು"* ಭಯೋತ್ಪಾದನಾ ಚಟುವಟಿಕೆಯೆಂದು ಈ ಕಾಯಿದೆ ಬಣ್ಣಿಸುತ್ತದೆ. ಆದರೆ ಕಣ್ಣಿಗೆ ಗೋಚರಿಸುವುದು ಚಟುವಟಿಕೆಯೇ ಹೊರತು ಉದ್ದೇಶವಲ್ಲ, ಒಬ್ಬ ವ್ಯಕ್ತಿಯ ಚಟುವಟಿಕೆಯ ಹಿಂದಿನ ಉದ್ದೇಶ ಸಾವು ಅಥವಾ ಹಾನಿಯುಂಟುಮಾಡುವುದಾಗಿತ್ತೇ ಇಲ್ಲವೇ ಎಂಬುದು ನ್ಯಾಯಾಲಯದಲ್ಲಿ ವಾದವಿವಾದಗಳ ಮೂಲಕ ಸಾಬೀತಾಗುವ ಅಂಶ. ಹೀಗಾಗಿ ಪೊಲೀಸರು ಬಂಧಿಸುವ ಮುನ್ನ ಆರೋಪಿಯ ಉದ್ದೇಶ ಸಾಬೀತಾಗಿರುವುದಿಲ್ಲ, ಬದಲಿಗೆ ಕಣ್ಣಿಗೆ ಕಾಣುವುದು ಕೃತ್ಯ. ಈ ಕಾಯಿದೆಯ ಪ್ರಕಾರ *"ಯಾವುದೇ ಚಟುವಟಿಕೆಗಳು"* ಭಯೋತ್ಪಾದನಾ ಚಟುವಟಿಕೆಗಳಾಗಿರಲು ಸಾಧ್ಯ, ಇದು ಪೊಲೀಸರಿಗೆ ಕೇವಲ ಸಂಶಯದ ಮೇಲೆಯೇ ಯಾರನ್ನು ಬೇಕಾದರೂ ಬಂಧಿಸುವ ಅಧಿಕಾರ ಕೊಡುತ್ತದೆ. ಅದರಲ್ಲೂ ಅಧಿಕಾರಸ್ಥ ಸರ್ಕಾರ ಯಾವುದಾದರೂ ಸಮುದಾಯ ಅಥವಾ ವರ್ಗಗಳನ್ನು ಬಲಿಹಾಕಬೇಕೆಂದು ತೀರ್ಮಾನಿಸಿದ್ದರೆ ಈ ಕಾಯಿದೆ ಅದಕ್ಕೆ ಎಲ್ಲಿಲ್ಲದ ಅಧಿಕಾರವನ್ನು ಕೊಡುತ್ತದೆ.

ಇದಲ್ಲದೆ ಬಂಧಿಸಿದ ವ್ಯಕ್ತಿಗಳನ್ನು ಸಾಕಷ್ಟು ಹಿಂಸಿಸಲೂ ಬಿಜೆಪಿ ಸರ್ಕಾರ ತಂದಿರುವ ತಿದ್ದುಪಡಿಗಳು ಸಹಾಯ ಮಾಡುತ್ತವೆ. ಉದಾಹರಣೆಗೆ ಕಾಯಿದೆಗೆ ಸೂಚಿಸಲಾಗಿರುವ ಒಂದು ತಿದ್ದುಪಡಿಯ ಪ್ರಕಾರ ಬಂಧಿಸಲಾದ ವ್ಯಕ್ತಿಗಳ ವಿರುದ್ಧ ಚಾರ್ಜ್‌ಶೀಟ್ ಹಾಕದೆ ಒಂದು ವರ್ಷದ ಕಾಲ ಅವರನ್ನು ಬಂಧನದಲ್ಲೇ ಉಳಿಸಿಕೊಳ್ಳಬಹುದು. ಅಂದರೆ ಸರ್ಕಾರದ ಅಥವಾ ಪೊಲೀಸರ ಕೆಂಗಣ್ಣಿಗೆ ಗುರಿಯಾದ ಯಾವುದೇ ವ್ಯಕ್ತಿಯನ್ನು ಪೊಲೀಸರು ವಿನಾಕಾರಣ ಬಂಧಿಸಿದರೂ ಅವರು ನ್ಯಾಯಾಲಯದ ಮುಂದೆ ತಮ್ಮ ನಿರಪರಾಧಿತ್ವವನ್ನು ಸಾಬೀತುಪಡಿಸಿಕೊಂಡು ಕನಿಷ್ಠ ಪಕ್ಷ ಜಾಮೀನಿನ ಮೇಲೆ ಹೊರಬರಲು ಕೂಡಾ ಒಂದು ವರ್ಷದ ಕಾಲದವರೆಗೆ ಸಾಧ್ಯವಾಗುವುದೇ ಇಲ್ಲ.

ಮತ್ತೊಂದು ತಿದ್ದುಪಡಿಯ ಪ್ರಕಾರ ಭಯೋತ್ಪಾದನಾ ಚಟುವಟಿಕೆಗಳಿಂದ ಒಬ್ಬ ವ್ಯಕ್ತಿ ಆಸ್ತಿ ಮಾಡಿಕೊಂಡಿದ್ದಾನೆಂದು ಪೊಲೀಸರಿಗೆ ಅನುಮಾನ ಬಂದಲ್ಲಿ ಎಡಿಜಿಪಿ ಮಟ್ಟದ ಅಧಿಕಾರಿಯೊಬ್ಬರ ಗಮನಕ್ಕೆ ತಂದು ಆ ಆಸ್ತಿಯನ್ನು ವಶಪಡಿಸಿಕೊಳ್ಳಬಹುದು. ಅದನ್ನು ಮತ್ತೆ ಪಡೆದುಕೊಳ್ಳಲು ಆ ವ್ಯಕ್ತಿ ವಿಶೇಷ ನ್ಯಾಯಾಲಯಕ್ಕೆ ಮನವಿ ಮಾಡಿಕೊಳ್ಳಬೇಕು. ಇದಲ್ಲದೆ ಭಯೋತ್ಪಾದನಾ ಚಟುವಟಿಕೆಗಳಲ್ಲಿ ಭಾಗವಹಿಸಿದ್ದಕ್ಕೆ ವಿಧಿಸಬಹುದಾಗಿದ್ದ ದಂಡವನ್ನು 1 ಲಕ್ಷದಿಂದ 10 ಲಕ್ಷಕ್ಕೆ ಏರಿಸಲಾಗಿದೆ. ಅಲ್ಲದೆ ಆರೋಪಿಯ ಕೃತ್ಯದಿಂದ ಪ್ರಾಣಹಾನಿ ಸಂಭವಿಸದಿದ್ದರೂ ನೀಡಬಹುದಾದ ಶಿಕ್ಷೆಯನ್ನು ಮರಣ ದಂಡನೆಗೆ ಏರಿಸಲಾಗಿದೆ. ಅಂದರೆ ಸಾರಾಂಶದಲ್ಲಿ ಈ ಕಾಯಿದೆ ಅತ್ಯಂತ ಕಠಿಣವಾಗಿದೆ.

ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಾಣುವಂತೆ ಇಂತಹ ಕಠಿಣ ಕಾಯಿದೆಯೊಂದರ ದುರ್ಬಳಕೆಯನ್ನು ತಡೆಯುವಂತಹ ಯಾವುದೇ ರಕ್ಷಣಾತ್ಮಕ ಅಂಶವನ್ನು ಇದರಲ್ಲಿ ಅಳವಡಿಸಲಾಗಿಲ್ಲ. ಅದರಲ್ಲೂ ಸಮಾಜದಲ್ಲಿನ ಅಲ್ಪಸಂಖ್ಯಾತರ ಬಗ್ಗೆ, ಇತರ ಧರ್ಮೀಯರ ಬಗ್ಗೆ ಅಪಾರ ಅಸಹನೆಯಿಟ್ಟುಕೊಂಡಿರುವ ಮತ್ತು ರಾಜಕೀಯ ಭಿನ್ನಮತವನ್ನು, ಪ್ರಜಾತಾಂತ್ರಿಕ ಹೋರಾಟಗಳನ್ನು ಹತ್ತಿಕ್ಕಬೇಕೆಂಬ ಮನೋಧರ್ಮವಿರುವ ಬಿಜೆಪಿಯಂಥ ಪಕ್ಷ ಅಧಿಕಾರದಲ್ಲಿರುವಾಗ ಈ ಕಾಯಿದೆಯ ದುರುಪಯೋಗ ಯಾವ ರೀತಿ ಆಗಬಹುದೆಂಬುದು ಊಹೆಗೆ ನಿಲುಕದ್ದೇನಲ್ಲ. ಕೇವಲ ಕಾನೂನು ಸುವ್ಯವಸ್ಥೆಯನ್ನು ಭಂಗಗೊಳಿಸುವುದೇ ಭಯೋತ್ಪಾದನೆ ಚಟುವಟಿಕೆಯಾಗುವುದಾದರೆ ಭಜರಂಗ ದಳವನ್ನೂ ಮತ್ತು ಶ್ರೀರಾಮ ಸೇನೆಯನ್ನೂ ಇದರಡಿ ಬಂಧಿಸುವುದೇ ಎಂದು ಪತ್ರಕರ್ತರು ಇತ್ತೀಚೆಗೆ ಕೇಳಿದ ಪ್ರಶ್ನೆಗೆ ಬಿಜೆಪಿಯ ವಕ್ತಾರರು "ಖಂಡಿತಾ ಇಲ್ಲ" ಎಂದು ಉತ್ತರಿಸಿದ್ದಾರೆ. ಇದರಿಂದ ಈ ಕಾಯಿದೆಯನ್ನು ನಿರ್ದಿಷ್ಟ ಸಮುದಾಯಗಳನ್ನು ಮತ್ತು ಹೋರಾಟಗಳನ್ನು ದಮನಿಸಲು ಬಳಸುವುದು ಸ್ಪಷ್ಟ.


ಆದರೆ ಈ ಕಾಯಿದೆಯಿಂದ ಭಯೋತ್ಪಾದನೆಯನ್ನಾದರೂ ಹತ್ತಿಕ್ಕಲು ಸಾಧ್ಯವೇ? ಭಾರತದ ಇತಿಹಾಸ ಮಾತ್ರವಲ್ಲ, ಅಮೆರಿಕ ಮತ್ತು ಯೂರೋಪ್ ದೇಶಗಳ ಇತಿಹಾಸವೂ ಸಹ ಕಾಯಿದೆಗಳ ಮೂಲಕ ಯಾವುದೇ "ಭಯೋತ್ಪಾದನೆಯನ್ನು" ಹತ್ತಿಕ್ಕಲು ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸುತ್ತವೆ. ಪೋಟಾ, ಟಾಡಾದಂತಹ ಭಯೋತ್ಪಾದನಾ ವಿರೋಧಿ ಕಾಯಿದೆಗಳು ಇದ್ದ ಕಾಲದಲ್ಲೇ ಪಾರ್ಲಿಮೆಂಟ್ ದಾಳಿ, ಅಕ್ಷರಧಾಮ ದಾಳಿಯಂತಹ ಭಯೋತ್ಪಾದಕ ಕೃತ್ಯಗಳನ್ನು ತಡೆಯಲು ಸಾಧ್ಯವಾಗಲಿಲ್ಲ. ಬ್ರೈನ್‌ವಾಶ್‌ಗೆ ಒಳಗಾಗಿ ಜೀವದ ಆಸೆ ತೊರೆದು ಇಂತಹ ಚಟುವಟಿಕೆಗಳಲ್ಲಿ ನಿರತರಾಗುವವರನ್ನು ಎಂಥಾ ಭಯೋತ್ಪಾದನಾ ಕಾಯಿದೆಗಳೂ ಹಿಮ್ಮೆಟ್ಟಿಸಲು ಸಾಧ್ಯವಾಗುವುದಿಲ್ಲ.

ಹೀಗಾಗಿ ಈ ಕಾಯಿದೆ ಮತ್ತು ಅದಕ್ಕೆ ಬಿಜೆಪಿ ತಂದಿರುವ ತಿದ್ದುಪಡಿಗಳು ಭಯೋತ್ಪಾದನೆಯನ್ನಂತೂ ನಿಗ್ರಹಿಸುವುದಿಲ್ಲ, ಬದಲಿಗೆ ಭಯೋತ್ಪಾದನೆ ನಿಗ್ರಹದ ಹೆಸರಲ್ಲಿ ಬಿಜೆಪಿ ಸರ್ಕಾರದೊಂದಿಗೆ ಮತ್ತು ಅದರ ಸಿದ್ಧಾಂತದೊಂದಿಗೆ ಭಿನ್ನಮತ ಹೊಂದಿರುವ ವ್ಯಕ್ತಿಗಳನ್ನು ಮತ್ತು ಪ್ರಜಾತಾಂತ್ರಿಕ ಹೋರಾಟಗಳನ್ನು ದಮನ ಮಾಡಲು ಈ ಕಾಯಿದೆ ಬಳಕೆಯಾಗುತ್ತದಷ್ಟೆ. ಇದೇ ಬಿಜೆಪಿಯ ಹಿಡನ್ ಅಜೆಂಡಾ! ಅದಕ್ಕೆ ಬಿಜೆಪಿ ಸರ್ಕಾರ ಈ ತಿದ್ದುಪಡಿಗಳನ್ನು ಸಾರ್ವಜನಿಕರ ಗಮನಕ್ಕಿರಲಿ ಶಾಸನಸಭೆಯ ಗಮನಕ್ಕೂ ತರದಂತೆ ಸುಗ್ರೀವಾಜ್ಞೆಯ ಮೂಲಕ ತರಲು ಹೊರಟಿದೆ. ಈ ತಿದ್ದುಪಡಿಗಳ ಪ್ರತಿಯನ್ನೂ ಸಹ ಸಾರ್ವಜನಿಕರಿಗೆ ನೀಡಲು ನಿರಾಕರಿಸುತ್ತಿದೆ.

ಚುನಾವಣೆಗೆ ಮುಂಚೆ ಬೆಂಗಳೂರಿನಲ್ಲಿ ಇನ್ನು ಮುಂದೆ ಸರ್ಕಾರಕ್ಕೆ ಬೇಡವಾದ ಧರಣಿ ಪ್ರತಿಭಟನೆಗಳನ್ನು ಅಕ್ಷರಶಃ ನಿಷೇಧಿಸುವಂತಹ ಕಾನೂನನ್ನು ಬೆಂಗಳೂರು ಪೊಲೀಸರು ಜಾರಿ ಮಾಡಲು ಹೊರಟಿದ್ದರು. ಈಗ ಕೋಕಾ ತಿದ್ದುಪಡಿಗಳನ್ನು ಹಿಂದಿನ ಬಾಗಿಲಿನಿಂದ ಜಾರಿಗೆ ತರಲಿದೆ.

ಕೂಡಲೇ ಪ್ರಜಾತಾಂತ್ರಿಕ ಶಕ್ತಿಗಳು ಮತ್ತು ಬಿಜೆಪಿಯೇತರ ರಾಜಕೀಯ ಪಕ್ಷಗಳು ಈ ಪ್ರಯತ್ನಗಳನ್ನು ಹಿಮ್ಮೆಟ್ಟಿಸುವಂತಹ ಹೋರಾಟ ಕಟ್ಟದಿದ್ದರೆ ಕರ್ನಾಟಕದ ಅಲ್ಪಸಂಖ್ಯಾತರಿಗೆ, ದಲಿತ, ರೈತ-ಕಾರ್ಮಿಕರಿಗೆ, ಮಾನವ ಹಕ್ಕು ಹೋರಾಟಗಾರರಿಗೆ, ಒಟ್ಟನಲ್ಲಿ ಸೌಹಾರ್ದ ಬದುಕನ್ನು ಬಯಸುವ ಎಲ್ಲರಿಗೂ ದುರ್ಭರ ದಿನಗಳು ಕಾದಿವೆ. ಫ್ಯಾಸಿಸಂ ಎಂದರೆ, ಬಿಜೆಪಿ ಆಡಳಿತ ಎಂದರೆ ಇದೇ ಅಲ್ಲವೇ! ■

ಯಡ್ಡಿಗೆ ಕೇಂದ್ರದಲ್ಲಿ ಎಂಟು ಮಂದಿ ನಂಟರಂತಲ್ಲ!



ಕರ್ನಾಟಕದ ಪ್ರಸ್ತುತ ರಾಜಕಾರಣವನ್ನ ಸಾಮಾನ್ಯ ಜನರು "ಬಿಜೆಪಿ ಎಂದರೆ ಲಿಂಗಾಯ್ತರ ಪಾರ್ಟಿ" "ಜೆಡಿಎಸ್ ಒಕ್ಕಲಿಗರ ಪಾರ್ಟಿ" "ಕಾಂಗ್ರೆಸ್ ಅಹಿಂದರ ಪಾರ್ಟಿ" ಎಂದು ಆಡಿಕೊಳ್ಳುತ್ತಿರುವಾಗಲೇ ಪ್ರಕಟಗೊಂಡ ಫಲಿತಾಂಶದಿಂದ ಅದು ಸಾಬೀತಾಗಿ ಹೋಗಿದೆಯಲ್ಲಾ, ಒಂದು ಕಾಲದಲ್ಲಿ ಜಾತಿಗಳ ಕಲಸು ಮೆಲೋಗರದ ರಾಜಕಾರಣ ಮಾಡುತ್ತಿದ್ದ ಕಾಂಗ್ರೆಸ್, ಮೇಲ್ಜಾತಿ ಜನರ ಕೈಯಿಂದ ಅಧಿಕಾರ ಕಸಿದುಕೊಂಡು ಕೆಳಜಾತಿಗಳಿಗೆ ಹಂಚಿದ್ದೇ ಪ್ರಮಾದವಾಯಿತಂತಲ್ಲಾ, ಇದರಿಂದ ಅಸೂಯೆಗೊಂಡ ಜಾತಿಗಳು ಬಿಜೆಪಿ, ಜೆಡಿಎಸ್ ಸೇರಿಕೊಂಡವಂತಲ್ಲಾ, "ರಾಜಕಾರಣ ಹಂಚಿ ತಿನ್ನುವ ಜಾಗ. ಶತಮಾನಗಳಿಂದ ಹಂಚಿ ತಿಂದ ಅಭ್ಯಾಸವೇ ಇಲ್ಲದ ಮೇಲ್ಜಾತಿಗಳು ಮತಾಂಧ ಪಾರ್ಟಿ ಮಾಡಿಕೊಂಡು ಹೋದರೆ ನಾವೇನು ಮಾಡಬೇಕು" ಎಂಬುದು ಅಹಿಂದಗಳ ಅಹವಾಲಾಗಿರುವಾಗಲೇ ಮಾನ್ಯ ಎಡೂರಿ ದಿಲ್ಲಿಯಲ್ಲಿದ್ದ ದಲಿತ ಪ್ಯಾದೆ ಸುಭಾಷ್ ಭರಣಿಯನ್ನು ಎತ್ತಂಗಡಿ ಮಾಡಿದ್ದಾರಂತಲ್ಲಾ, ಇದಲ್ಲವೆ ಮೇಲ್ಜಾತಿ ರಾಜಕಾರಣ? ಥೂತ್ತೇರಿ!

* * * *

ದುರ್ಬಲ ಪ್ರಧಾನಿ ನೇತೃತ್ವದಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಗಳಿಸಲಾರದು. ಅತ್ತ ಅಡ್ವಾನಿ ಆರಕ್ಕೇರಲಾರ; ಇನ್ನು ಉತ್ತರ ಪ್ರದೇಶ ಮತ್ತು ಬಿಹಾರದ ರಕ್ಕಸ ಪಡೆಯಾದ ಮುಲಾಯಂ, ಲಲ್ಲು, ಪಾಸ್ವಾನ್ ಎಷ್ಟೇ ತಿಣುಕಿದರೂ ದಿಲ್ಲಿ ಗದ್ದುಗೆ ಏರಲಾರರು; ಇದ್ದವ್ವರಲ್ಲಿ ಹನಿಗೂಡಿದರೆ ಹಳ್ಳವೆಂದು ತೃತೀಯ ರಂಗವೇ ಏನಾದರೂ ಮಾಡಲಿದೆ ಎಂದು ಭಾವಿಸಿದ ಮಾಜಿ ಪ್ರಧಾನಿ ದೇವೇಗೌಡರು "ನಾನಂತೂ ಪ್ರಧಾನಿ ಸ್ಪರ್ಧಿಯಲ್ಲ" ಎನ್ನುತ್ತಲೇ ಹೋಮಗಳಲ್ಲಿ ನಿರತರಾಗಿ ಹೋಗಿದ್ದರಂತಲ್ಲಾ, ಯಾವಾಗ ಯುಪಿಎ ಏಳತೊಡಗಿತೊ ಆ ಕೂಡಲೇ ಮಗನನ್ನು ಸೋನಿಯಾ ಬಳಿ ಕಳುಹಿಸಿ ಮಂತ್ರಿ ಪದವಿಗೆ ಮಣೆ ರೆಡಿ ಮಾಡಿಕೊಳ್ಳತೊಡಗಿದರಂತಲ್ಲಾ, ಆಗ ಕುಮಾರಣ್ಣ "ನನಗೆ ಇಂಗ್ಲಿಷ್ ಸರಿಯಾಗಿ ಬರಲ್ಲ, ಏನು ಮಾಡಲಿ?" ಎಂದಾಗ, ಗೌಡರು ರೇಗಿ "ನನಗೆ ಇಂಗ್ಲಿಷ್, ಹಿಂದಿ ಬರುತ್ತಿರಲಿಲ್ಲ, ಆದರೂ ನಿಭಾಯಿಸಲಿಲ್ಲವೆ? ಮಂಡ್ಯದ ಇಂಜನಿಯರಿಂಗ್ ಕಾಲೇಜಿನ ನಿವೃತ್ತ ವಿ.ಸಿ. ಇದ್ದಾನೆ, ಅವನಿಂದ ಇಂಗ್ಲಿಷ್ ಕಲಿತು ಕೇಂದ್ರ ಸರ್ಕಾರದಲ್ಲಿ ಸಚಿವನಾಗು" ಎಂದು ಧೈರ್ಯ ತುಂಬಿ ಕಳುಹಿಸಿದರೂ ಯಾವ ಪ್ರಯೋಜನವೂ ಆಗಲಿಲ್ಲವಂತಲ್ಲಾ, ಥೂತ್ತೇರಿ!

ಥೂತ್ತೇರಿ

▸ ಯಾಹೂ


* * * *

ಕರ್ನಾಟಕದಲ್ಲಿ ಬಿಜೆಪಿ ಕನಿಷ್ಠ ಐದಾರು ಸ್ಥಾನಗಳನ್ನು ಕಳೆದುಕೊಳ್ಳಲಿದೆ. ಆಗ ಎಡೂರಪ್ಪನ ಜುಟ್ಟು ಹಿಡಿದುಕೊಂಡು ಆಟ ಆಡಿಸಬೇಕೆಂದು ಹಗಲುಗನಸು ಕಂಡಿದ್ದ ಅನಂತಕುಮಾರನಿಗೆ ಆಘಾತವಾಗುವ ರೀತಿಯಲ್ಲಿ ಎಡೂರಪ್ಪನ ಜಾತಿ ಜನ ಗೆದ್ದು ಬಂದಿದ್ದಾರಲ್ಲಾ, "ಎಡೂರಪ್ಪನ ವಿರುದ್ಧ ಏನಾದರೂ ಅನಂತಕುಮಾರ ಆಟ ಆಡಲು ಬಂದರೆ; ಬಿಜೆಪಿಯ ಎಂಟು ಮಂದಿ ಶರಣ ನಂಟರು ಅನಂತರ ವಿರುದ್ಧ ಶೆಡ್ಡು ಹೊಡೆಯಲಿದ್ದಾರೆ" ಎಂದು ಶರಣರು ತೊಡೆ ತಟ್ಟುತ್ತಿರುವಾಗಲೇ ಈಶ್ವರಪ್ಪನೇ ಎಡೂರಿ ಎದುರು ಹೊಟ್ಟೆ ತಟ್ಟಿದ್ದಾರಂತಲ್ಲಾ, ಮೊದಲಿಂದಲೂ ಈಶ್ವರಿಯ ಆಲಾಪನೆ ಬೇರೆ ದಾರಿಯನ್ನೆ ಹಿಡಿದಿತ್ತು, ಆ ಕಾರಣಕ್ಕೆ ಶಿವಮೊಗ್ಗದಲ್ಲಿ ಬರಬೇಕಾದಷ್ಟು ಓಟು ಬಿಜೆಪಿಗೆ ಬಂದಿಲ್ಲ, ಇದಕ್ಕೆ ಈಶ್ವರಿಯೇ ಕಾರಣವೆಂದು ಬಿಜೆಪಿಯ ವಲಸಿಗರು ಎಡೂರಿಯ ಕಿವಿ ಊದಲಾಗಿ ಸಹಜವಾಗಿ ಕಂಚಿನ ಕಿವಿಯ ಎಡೂರಿ "ಈಶ್ವರಿ ಖಾತೆಗೆ ಕತ್ತರಿ ಹಾಕುವೆ" ಎಂದು ಬೆದರಿಕೆಯೊಡ್ಡಿದ್ದಾರಂತಲ್ಲಾ, ಥೂತ್ತೇರಿ!!

* * * *

ಲೋಕಸಭೆ ಚುನಾವಣೆ ಮುಗಿದು ಕೇಂದ್ರದಲ್ಲಿ ಯುಪಿಎ ಸರ್ಕಾರವನ್ನು ತಾಯಿ ಮಕ್ಕಳು ತಂದು ಕೂರಿಸುವ ವೇಳೆಗೆ ಸರಿಯಾಗಿ, ಇತ್ತ ರಾಜೀವ ಗಾಂಧಿಯನ್ನು ಕೊಂದ ಎಲ್‌ಟಿಟಿಇ ಲೀಡರ್ ಪ್ರಭಾಕರನ್ ಹೆಂಡತಿ ಮಕ್ಕಳ ಸಮೇತ ಹತನಾದನಂತಲ್ಲಾ, ಅನ್ಯಾಯಕ್ಕೆ ಇತಿಹಾಸ ಕೊಡುವ ಉತ್ತರ ತಡವಾಗಬಹುದು ಅಥವಾ ಕೊಡದೇ ಹೋಗಬಹುದು. ಆದರೆ ಶ್ರೀಲಂಕಾದ ಟೈಗರ್‌ಗಳ ಆಕ್ರಂದನಕ್ಕೆ ಭಾರತ ಕಿವಿಗೊಡದೆ ಚುನಾವಣೆ ಮಾಡುತ್ತಿರುವಾಗಲೇ ನರಹಂತಕ ಟೈಗರ್‌ಗಳು ಹತವಾಗಿ ಹೋದವಲ್ಲಾ, "ಇದಲ್ಲವೆ ರಾಜೀವನ ನಿಜವಾದ ಶ್ರದ್ಧಾಂಜಲಿ" ಎಂದು ರಾಜೀವಾಭಿಮಾನಿಗಳು ವ್ಯಾಖ್ಯಾನಿಸುತ್ತಿರುವಾಗಲೇ ಕೇಂದ್ರದ ಬಿಜೆಪಿ ಕಾರ್ಯಾಲಯಗಳು ಶ್ರದ್ಧಾಂಜಲಿ ಕೇಂದ್ರಗಳಂತೆ ಕಂಗೊಳಿಸುತ್ತಿವೆಯಂತಲ್ಲಾ, ಕಾರಣ ಕೇಳಿದರೆ "ಮುಂದೆ ಈ ರಾಹುಲ ಗಾಂಧಿ, ಪ್ರಿಯಾಂಕ ಗಾಂಧಿ ದೇಶ ಸುತ್ತಿದರೆ ನಮ್ಮಗತಿಯೇನ್ರಿ? ಮತ್ತೆ ಇಂದಿರಾ ಗಾಂಧಿ ಕಾಲದಲ್ಲಿದ್ದ ಸ್ಥಿತಿ ಮರುಕಳಿಸಿದರೆ ಕತೆಯೇನು?" ಎಂದು ಆತಂಕಗೊಂಡವಂತಲ್ಲಾ, ಆದರೆ ಚಿಡ್ಡಿಗಳು ಮುಂದಿನ ಶತಮಾನದಲ್ಲೂ ಲಾಠಿ ಬೀಸುವಷ್ಟು ಧನ ಸಂಗ್ರಹಿಸಿಕೊಂಡು ಅಡ್ವಾಣಿ ಇಲ್ಲ ಅವನಪ್ಪ ಎನ್ನುವಂತಿವೆಯಂತಲ್ಲಾ, ಥೂತ್ತೇರಿ!!

ವೆಬ್‌ಸೈಟ್ ಮೇನಿಯಾ






ಮೊನ್ನೆ ಉಪ್ಪಿಯ ವೆಬ್‌ಸೈಟ್ ಪ್ರಾರಂಭವಾದ ಬಗ್ಗೆ ಸುದ್ದಿಗಳನ್ನು ಕೇಳಿರುತ್ತೀರಿ. ಹಾಗೆಯೇ ಇತ್ತೀಚೆಗೆ 'ಮುಂಗಾರು ಮಳೆ' ಖ್ಯಾತಿಯ ಪೂಜಾ ಗಾಂಧಿ ಕೂಡಾ ತನ್ನ ವೆಬ್‌ಸೈಟನ್ನು ಆರಂಭಿಸಿದರು. ನಾಯಕ-ನಾಯಕಿಯರು ಹೀಗೆ 'ಸೈಟ್' ಖರೀದಿಸುವುದರಲ್ಲಿ ಪೈಪೋಟಿ ನಡೆಸುತ್ತಿದ್ದಾರೆ.


ಆದರೆ ಈ ವೆಬ್‌ಸೈಟ್ ಆರಂಭಕ್ಕೆ ಅವರು ನೀಡುತ್ತಿರುವ ಕಾರಣಗಳು ಮಾತ್ರ ಹಾಸ್ಯಾಸ್ಪದವಾಗಿವೆ. "ವಿಶ್ವಾದ್ಯಂತ ಹರಡಿರುವ ಅಭಿಮಾನಿಗಳನ್ನು ನನ್ನ ಬಗ್ಗೆ ಅಪ್‌ಡೇಟ್ ...ಡುವುದು ಇದರ ಉದ್ದೇಶ" ಎಂದು ಉಪ್ಪಿ ಹೇಳಿದ್ದಾರೆ. ಪೂಜಾ ಗಾಂಧಿ ಕೂಡ ಡಿಟೋ ಡೈಲಾಗ್ ...ದೆದಿದ್ದಾಳೆ. ತಮಾಷೆಯೆಂದರೆ ಈ ಉಪ್ಪಿ ಈಗ ಕನ್ನಡ ಚಿತ್ರರಂಗದಲ್ಲೇ ಔಟ್ ಡೇಟ್ ಆಗಿದ್ದಾರೆ. ಇಲ್ಲೇ ಆತನ ಅಭಿಮಾನಿಗಳು ...ಂತರ ಮಾಡಿ ಬೇಡಿಕೆ ಇರುವ ಇತರೆ ನಟರ ಕಡೆಗೆ ವಾಲಿದ್ದಾರೆ. ಇನ್ನು ವಿಶ್ವಾದ್ಯಂತ ಅಭಿಮಾನಿಗಳಿರಲು ಹೇಗೆ ತಾನೆ ಸಾಧ್ಯ? ...ಇದು ಆತ್ಮರತಿಯಲ್ಲದೇ ಮತ್ತೇನು? ಆದರೂ ಇನ್ನೂ ಹಲವಾರು ಚಿಕ್ಕಪುಟ್ಟ ನಾಯಕನಾಯಕಿಯರು ಇಂತಹ ವೆಬ್ ಸೈಟ್‌ಗಳನ್ನು ...ೀದಿಸಲು ತಯಾರಿ ನಡೆಸುತ್ತಿದ್ದಾರಂತೆ!


...ಂಚತಾರೆಯರ ಕೋಟಿಗಾಗಿ ಪೈಪೋಟಿ











...ದೊಂದು ಕಾಲವಿತ್ತು. ಆಗ ಭಾರತಿ, ಆರತಿ, ಲೀಲಾವತಿ, ಕಲ್ಪನಾ ... ಜಯಂತಿ ಎಂಬ ಪಂಚತಾರೆಯರು ಕನ್ನಡ ಚಿತ್ರೋದ್ಯಮವನ್ನು ...ತ್ತಿದ್ದರು. ಅಷ್ಟೇ ಅಲ್ಲ ಅವರೆಲ್ಲ ನಾಯಕರುಗಳಿಗಿಂತಲೂ ಹೆಚ್ಚು ...ಜಿಸುತ್ತಿದ್ದರು. ಆ ನಾಯಕಮಣಿಯರ ಕಾಲ್‌ಶೀಟ್ ಪಡೆಯಲು ...ರ್ಮಾಪಕರು ಹೆಣಗುತ್ತಿದ್ದರು. ಆದರೆ ಈಗ ಕಾಲ ಬದಲಾಗಿದೆ. ಸದ್ಯಕ್ಕೆ ... ಚಿತ್ರರಂಗದಲ್ಲಿ ಪಂಚಕನ್ಯೆಯರ ಬದಲು 'ಪಂಚಕೋಟಿ'ಗಳು ...ಜಿಸುತ್ತಿದ್ದಾರೆ.

...ಮಿಳಿನ ಸೂಪರ್ ಸ್ಟಾರ್ ರಜನೀಕಾಂತ್, ತೆಲುಗಿನ ಮೆಗಾ ಸ್ಟಾರ್ ...ಜೀವಿ ಮತ್ತು ಹಿಂದಿ ಚಿತ್ರರಂಗದ ಬಾದ್‌ಷಾ ಅಮಿತಾಬ್ ಬಚ್ಚನ್ ...ಟಿ ಕೋಟಿ ಸಂಭಾವನೆ ಪಡೆಯುತ್ತಿದ್ದಾಗ ನಮ್ಮ ಕನ್ನಡ ಚಿತ್ರರಂಗದ ...ಕನಟರು ಪಡೆಯುತ್ತಿದ್ದದ್ದು ಕೆಲವೇ ಕೆಲವು ಲಕ್ಷಗಳು ಮಾತ್ರ.

...ಆದರೀಗ ಪರಿಸ್ಥಿತಿ ಇಲ್ಲೂ ಬದಲಾಗಿದೆ. ಗಾಂಧಿನಗರದಲ್ಲಿ ಸದ್ಯಕ್ಕೆ ...ಟಿ ರೂಪಾಯಿ ಸಂಭಾವನೆ ಪಡೆಯುವ "ಪಂಚಕೋಟಿ' ನಾಯಕರುಗಳು ...ದ್ದಾರೆ. ಆರಂಭದಲ್ಲಿ ಒಂದು ಕೋಟಿ ರೂ. ಸಂಭಾವನೆ ಪಡೆದ ಕೀರ್ತಿ ...ರ್‌ಸ್ಟಾರ್ ಪುನೀತ್ ರಾಜ್‌ಕುಮಾರ್‌ಗೆ ಸಲ್ಲುತ್ತದೆ. ಇದಾದ ಕೆಲ ...ಸ ನಂತರ 'ಮುಂಗಾರು ಮಳೆ' ಚಿತ್ರದ ಮುಖಾಂತರ ಕನ್ನಡ ...ರಂಗದ ದಿಗಂತದಲ್ಲಿ ಕಾಣಿಸಿಕೊಂಡ ಹೊಸ ತಾರೆ ಕಾಮಿಡಿ ಟೈಮ್ಸ್ ...ಶ್ ಕೂಡಾ ಕರೋಡಪತಿಯಾದ ಸುದ್ದಿ ಕೇಳಿ ಬಂತು. ಇವರಿಬ್ಬರ ...ವೆ ಅದ್ಯಾವಾಗಲೋ ಉಪೇಂದ್ರ ಕೂಡ ಗಿಮಿಕ್ ಮಾಡಿ ತನ್ನ ...ಭಾವನೆಯನ್ನು ಏರಿಸಿಕೊಂಡು ತಾನು ಕೂಡಾ ಕರೋಡಪತಿ ಎಂದು ...ರ್ಮಾಪಕರಿಗೆ ಹೇಳಲಾರಂಭಿಸಿದರು. ಈ ಮಧ್ಯೆ ತನ್ನ ಹೊಡಿ-ಬಡಿ-ಕಡಿ ...ಗಳಿಂದಲೇ ಬಾಕ್ಸಾಫೀಸ್ ಕಿಂಗ್ ಎಂಬ ಬಿರುದು ಗಳಿಸಿದ ಚಾಲೆಂಜಿಂಗ್ ... ದರ್ಶನ್ ಕೂಡ ಚಿತ್ರದಿಂದ ಚಿತ್ರಕ್ಕೆ ತನ್ನ ಸಂಭಾವನೆ ಏರಿಸುತ್ತಾ ...ಟಿ ಸನಿಹ ತಲುಪಿದ್ದಾರೆ.

...ಇಂತಹ ಸಂದರ್ಭದಲ್ಲೇ ಶಿವರಾಜ್‌ಕುಮಾರ್ ಕೂಡಾ ಸಂಭಾವನೆ ...ಯುದಲ್ಲಿ ಆತ್ಮ ವಿಮರ್ಶೆ ಮಾಡಿಕೊಂಡು "ನಾನ್ಯಾಕೆ ಇಷ್ಟು ಕಡಿಮೆಗೆ ಮಾಡಬೇಕು? ನಾನು ಅವರಿಗಿಂತ ಏನು ಕಡಿಮೆ?" ಎಂದು ...ರಿಸಿ ತಮ್ಮ ಸಂಭಾವನೆಯನ್ನು ಏಕ್‌ದಮ್ ಏರಿಸಿಕೊಂಡಿದ್ದಾರೆ. ...ಗೆ ಕನ್ನಡ ಚಿತ್ರರಂಗದಲ್ಲಿ ಕೋಟಿ ಸಂಭಾವನೆ ಪಡೆಯುವ ನಾಯಕರುಗಳ ... ಐದಕ್ಕೇರಿದೆ. ಇಂತಹ ಪೈಪೋಟಿಗೆ ಇನ್ನೂ ಸುದೀಪ್, ರವಿಚಂದ್ರನ್, ...ವರ್ಧನ್ ಇಳಿದಿಲ್ಲವೆಂಬುದೇ ಸದ್ಯಕ್ಕೆ ಸಮಾಧಾನದ ವಿಷಯ.

...ಸಂಭಾವನೆ ವಿಷಯದಲ್ಲಿ ಇಂತಹ ವಿಚಿತ್ರ ಪೈಪೋಟಿ ಕನ್ನಡ ...ರಂಗದಲ್ಲಿ ಆರಂಭವಾಗಿರುವ ಕೆಟ್ಟ ಚಾಳಿಯೆನ್ನಬಹುದು. ಈ ಕೋಟಿ ... ಸಂಭಾವನೆಯ ಪೈಪೋಟಿ ಈಗ ಯಾವ ಹಂತ ತಲುಪಿದೆಯೆಂದರೆ 99 ಲಕ್ಷ ರೂ. ಸಂಭಾವನೆಯನ್ನು ಪಡೆಯುತ್ತಿದ್ದ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಒಂದೇ ಸಮನೆ ತನ್ನ ಸಂಭಾವನೆಯನ್ನು ಎರಡು ಕೋಟಿಗೆ ಏರಿಸಿದ್ದಾರೆ. ಅದರಂತೆ 'ರಾಮ್' ಚಿತ್ರದ ನಿರ್ಮಾಪಕ ತೆಲುಗಿನ ಆದಿತ್ಯ ಬಾಬು ಈ ಚಿತ್ರಕ್ಕಾಗಿ ಪುನೀತ್‌ಗೆ ಎರಡು ಕೋಟಿಯನ್ನು ನೀಡಿದ್ದಾರಂತೆ.

ಇನ್ನು ಗಣೇಶ್ ಈಗ ಸಂಭಾವನೆ ವಿಷಯದಲ್ಲಿ ರಾಜಿಯಾಗುವುದೇ ಇಲ್ಲ. ಇತ್ತೀಚೆಗೆ 'ಮಿಲನ' ಚಿತ್ರದ ನಿರ್ದೇಶಕ ಪ್ರಕಾಶ್ ಅವರ ಕತೆಯೊಂದು ಗಣೇಶ್ ತುಂಬಾ ಇಷ್ಟವಾದರೂ, ತನಗೆ ಬೇಕಾದಷ್ಟು ಸಂಭಾವನೆ ಸಿಗದ ಕಾರಣಕ್ಕಾಗಿ ಅದನ್ನು ತಿರಸ್ಕರಿಸಿದ್ದಾರೆ. ಆದ್ದರಿಂದ ಗಣೇಶ್ ಬದಲಿಗೆ ವಿಜಯರಾಘವೇಂದ್ರನನ್ನು ಪ್ರಕಾಶ್ ಹಾಕಿಕೊಂಡು ಚಿತ್ರ ನಿರ್ಮಿಸಲು ನಿರ್ಧರಿಸಿದ್ದಾರೆ. ಒಂದು ಮೂಲದ ಪ್ರಕಾರ ಗಣೇಶ್ ಸುಮಾರು ಮೂರ್‍ನಾಲ್ಕು ಚಿತ್ರಗಳನ್ನು 'ಕೋಟಿ' ಕಾರಣಕ್ಕಾಗಿಯೇ ಕಳೆದುಕೊಂಡಿದ್ದಾರೆ.


ಜಗತ್ತಿನಾದ್ಯಂತ ಆರ್ಥಿಕ ಕುಸಿತದಿಂದಾಗಿ ಎಲ್ಲಾ ಕಡೆ ಬೆಲೆ ಕಡಿಮೆಯಾಗುತ್ತಿದೆ. ಈ ಆರ್ಥಿಕ ಬಿಕ್ಕಟ್ಟು ಚಿತ್ರರಂಗವನ್ನೂ ತಟ್ಟಿದೆ. ಹಿಂದಿ ಚಿತ್ರರಂಗದಲ್ಲಿ ಶಾರೂಕ್ ಖಾನ್ ಜನಪ್ರಿಯ ಮತ್ತು ಯಶಸ್ವಿ ನಾಯಕ ನಟನಾಗಿದ್ದರೂ, ಅವರ ಚಿತ್ರಗಳು ಬಾಕ್ಸಾಫೀಸಿನಲ್ಲಿ ಜಯಭೇರಿ ಬಾರಿಸಿದರೂ ಅವರು ಆರ್ಥಿಕ ಬಿಕ್ಕಟ್ಟಿನಿಂದಾಗಿ ತನ್ನ ಸಂಭಾವನೆಯನ್ನು ಕಡಿತಗೊಳಿಸಲು ಒಪ್ಪಿಕೊಂಡಿದ್ದಾರೆ.

ಆದರೆ ಇಡೀ ಜಗತ್ತೇ ಒಂದು ದಿಕ್ಕಿನಲ್ಲಿ ಚಲಿಸುತ್ತಿದ್ದರೆ, ಕನ್ನಡ ಚಿತ್ರರಂಗ ಮಾತ್ರ ಇನ್ನೊಂದು ದಿಕ್ಕಿನಲ್ಲಿ ಚಲಿಸುತ್ತಿದೆ. ಇಲ್ಲಿ ಕಳೆದ ಒಂದು ವರ್ಷದಿಂದ ಯಾವುದೇ ಚಿತ್ರ ಬಾಕ್ಸಾಫೀಸ್‌ನಲ್ಲಿ ಸೂಪರ್ ಹಿಟ್ ಆಗಿಲ್ಲ. ತಮಿಳಿನ ಸೂಪರ್‌ಸ್ಟಾರ್ ರಜನೀಕಾಂತ್ ತರಹ ಇಲ್ಲಿ ಯಾವುದೇ ನಾಯಕ ನಟನ ಹೆಸರಿನ ಬಲದಲ್ಲೇ ಯಾವ ಚಿತ್ರವೂ ವ್ಯಾಪಾರವಾಗುತ್ತಿಲ್ಲ. ಅಷ್ಟೇ ಯಾಕೆ, ಯಾವೊಂದು ಚಿತ್ರವೂ ನಿರ್ಮಾಪಕನಿಗೆ ಹಾಕಿದ ಬಂಡವಾಳವನ್ನೇ ಗಳಿಸಿಕೊಡುತ್ತಿಲ್ಲ. ಇಷ್ಟೆಲ್ಲ ವೈಪರೀತ್ಯದ ವಾತಾವರಣವಿದ್ದರೂ ನಮ್ಮ ನಾಯಕ ನಟರು ತಮ್ಮ ಸಂಭಾವನೆಯನ್ನು ಮಾತ್ರ ಕೋಟಿ ಗಡಿಯನ್ನು ದಾಟಿಸುವ ಹುಮ್ಮಸ್ಸಿನಲ್ಲಿದ್ದಾರೆ!

ಅದು ಅವರ ತಪ್ಪಲ್ಲ. ಆದರೆ ಅವರು ಕೇಳಿದಷ್ಟು ಹಣ ನೀಡುವ ನಿರ್ಮಾಪಕರಾದರೂ ಸ್ವಲ್ಪ ಆಲೋಚಿಸಬೇಕು ತಾನೇ? ಚೇಂಬರ್ ಮತ್ತು ನಿರ್ಮಾಪಕರ ಸಂಘ ನಿರ್ಲಿಪ್ತವಾಗಿ ಕೂರುವ ಮೂಲಕ ಈ ಕೋಟಿ ತಮಾಷೆಯನ್ನು ಪರೋಕ್ಷವಾಗಿ ಬೆಂಬಲಿಸುತ್ತಿದ್ದಾರೆ.

● ಸದಾಶಿವ ಶೆಣೈ

ಸೆನ್ಸಾರ್ ಚಂದ್ರಶೇಖರ್‌ಗೆ ಗುಡ್‌ಬೈ!



ಜೂನ್ 9ರಂದು ಕನ್ನಡ ಚಿತ್ರರಂಗದವರೆಲ್ಲ ಸಂತೋಷದಿಂದ ಹಾಲು ಕುಡಿಯಬಹುದೇನೋ? ಯಾಕಂದರೆ ಅಂದು ಸೆನ್ಸಾರ್ ಮಂಡಳಿಯ ಅಧಿಕಾರಿ ಚಂದ್ರಶೇಖರ್ ನಿವೃತ್ತಿ ಹೊಂದುತ್ತಾರೆ. ಕಳೆದ ಮೂರ್‍ನಾಲ್ಕು ವರ್ಷಗಳಿಂದ ತಮ್ಮ ಚಿತ್ರಗಳು ಸೋಲಲು ಚಂದ್ರಶೇಖರ್ ಅವರೇ ಕಾರಣ ಎಂದು ಹಲವಾರು ನಿರ್ಮಾಪಕರು ಮತ್ತು ನಿರ್ದೇಶಕರು ಕೋರಸ್‌ನಲ್ಲಿ ರಾಗ ತೆಗೆಯುತ್ತಿದ್ದರು. ಈಗ ಅವರು ನಿವೃತ್ತಿ ಹೊಂದುವುದರಿಂದ ಇವರ ಕ್ರಿಯೇಟಿವಿಟಿಗೆ ಅಡ್ಡಿಬರುವವರು ಯಾರೂ ಇರುವುದಿಲ್ಲವಂತೆ. ಇದೇ ಹೊತ್ತಿಗೆ ಚುನಾವಣೆಗಳೂ ಮುಗಿದು ಐಪಿಎಲ್ ಕ್ರಿಕೆಟ್ ಟೂರ್ನಮೆಂಟ್ ಕೂಡ ಅಂತ್ಯಗೊಳ್ಳುತ್ತಿರುವುದರಿಂದ ಸಿನಿಮಾ ಉದ್ಯಮ ಚೇತರಿಸಿಕೊಳ್ಳಬಹುದು ಎಂಬುದು ಕೆಲವರ ಲೆಕ್ಕಾಚಾರ.

ಹೀಗಾಗಿ ವೀಕ್ಷಕ ಮಹಾ ಪ್ರಭುಗಳೇ, ಇನ್ನು ಮುಂದೆ ಸೂಪರ್ ಚಿತ್ರಗಳು ಬಿಡುಗಡೆಯಾಗುವುದು ಗ್ಯಾರಂಟಿ! ಹಾಗೆಯೇ ಬಿಡುಗಡೆಯಾದ ಚಿತ್ರಗಳೆಲ್ಲ ಸೂಪರ್ ಹಿಟ್ ಆಗುವುದೂ ಗ್ಯಾರಂಟಿ!! ಹೀಗಂತ ಉದ್ಯಮದವರು ಹೇಳುವುದನ್ನು ಸದ್ಯಕ್ಕೆ ನಾವು-ನೀವು ನಂಬಲೇ ಬೇಕು!

...ಅಂದಹಾಗೆ, ಒಂದು ವೇಳೆ ಚಿತ್ರಗಳು ಹಿಟ್ ಆಗದಿದ್ದರೆ? ...ಆಗ ಮಳೆ, ಪ್ರವಾಹ, ಪರೀಕ್ಷೆ ತರಹದ ಕಾರಣಗಳನ್ನು ನಮ್ಮ ಚಿತ್ರರಂಗದವರು ನೀಡುತ್ತಾರೆ ಬಿಡಿ. ಹೇಗಿದ್ದರೂ ಪಿಳ್ಳೆ ನೆಪ ...ಹುಡುಕುವುದರಲ್ಲಿ ನಮ್ಮ ಚಿತ್ರರಂಗದವರು ಎಕ್ಸ್‌ಪರ್ಟ್‌ಗಳಲ್ಲವೇ?

ಅರುಣ್ ಸಿನಿ Bits

ಕಾಮಿಡಿ ಸ್ಟಾರ್‌ಗಳ ಕಮರ್ಷಿಯಲ್ ಚಿತ್ರ




ಕನ್ನಡ ಚಿತ್ರರಂಗದಲ್ಲೊಂದು ಮಲ್ಟಿ ಸ್ಟಾರ್ ಚಿತ್ರ ನಿರ್ಮಾಣವಾಗುತ್ತಿದೆ. ಈ ಮಲ್ಟಿ ಸ್ಟಾರ್ ಚಿತ್ರದ ನಾಯಕ ಯಾರು ಎಂದು ತಿಳಿದಾಗ ನೀವು ಭಯಂಕರ ಗಾಬರಿಗೊಳಗಾದರೆ ಅದಕ್ಕೆ ನಾವು ಹೊಣೆಯಲ್ಲ.

ಆತ ಹಾಸ್ಯನಟ ಬುಲೆಟ್ ಪ್ರಕಾಶ್!

ಸಾಮಾನ್ಯವಾಗಿ ಒಂದು ಹಂತದ ಯಶಸ್ಸು ಮತ್ತು ಜನಪ್ರಿಯತೆಯನ್ನು ಕಂಡನಂತರ ಕಾಮಿಡಿ ನಟರಿಗೆ ತಾವೂ ಯಾಕೆ ಹೀರೋ ಆಗಿ ಒಂದು ಕೈ ನೋಡಬಾರದು ಎನಿಸುತ್ತದೆ. ಈ ಪ್ರವೃತ್ತಿಗೆ ದಕ್ಷಿಣ ಭಾರತದ ಹಲವಾರು ಹಾಸ್ಯನಟರು ಉದಾಹರಣೆಗಳಾಗಿದ್ದಾರೆ.

ತಮಿಳಿನ ವಡಿವೇಲು, ಕರುಣಾಸ್‌ರಂಥ ನಟರೂ ಈಗ ಕಾಮಿಡಿ ಚಿತ್ರಗಳ ನಾಯಕನಟರಾಗುತ್ತಿದ್ದಾರೆ. ಅಷ್ಟೇ ಅಲ್ಲ ಇವತ್ತು ನಾಯಕ ನಟರು ಚಿತ್ರವೊಂದಕ್ಕೆ ಇಂತಿಷ್ಟು ಸಂಭಾವನೆ ಅಂತ ಪಡೆದರೆ ವಡಿವೇಲುನಂಥ ಹಾಸ್ಯ ನಟರು ದಿನವೊಂದಕ್ಕೆ ಎಂಟು ಲಕ್ಷ ರೂಪಾಯಿಗಳ ದೊಡ್ಡ ಮೊತ್ತದ ಪಗಾರವನ್ನು ಎಣಿಸಿಕೊಳ್ಳುತ್ತಿದ್ದಾರೆ. ಇದರಿಂದ ಏನಾಗುತ್ತಿದೆ ಎಂದರೆ, ನಾಯಕ ನಟರು ಹೆಚ್ಚೆಂದರೆ ವರ್ಷಕ್ಕೆ ಒಂದು ಅಥವಾ ಎರಡು ಚಿತ್ರಗಳಲ್ಲಿ ನಟಿಸಬಹುದು. ಆದರೆ ಹಾಸ್ಯ ನಟರು ಒಂದು ವರ್ಷದಲ್ಲಿ ಹತ್ತಾರು ಸಿನಿಮಾಗಳಲ್ಲಿ ನಟಿಸಿ, ದಿನದ ಆಧಾರದ ಮೇಲೆ ಸಂಭಾವನೆ ಪಡೆಯುವುದರಿಂದ ಅವರಲ್ಲಿ ಬಹಳಷ್ಟು ಮಂದಿ ವರ್ಷಕ್ಕೆ ನಾಯಕ ನಟರಷ್ಟೇ ದುಡ್ಡು ದುಡಿಯುತ್ತಿದ್ದಾರೆ!



ನಮ್ಮ ಕನ್ನಡದ ಹಾಸ್ಯನಟರ ಸಂಭಾವನೆ ತಮಿಳು ನಟರಷ್ಟು ಹೆಚ್ಚಿಲ್ಲದಿದ್ದರೂ ಅವರ ಪರಿಸ್ಥಿತಿ ಅದಕ್ಕಿಂತ ಭಿನ್ನವಾಗಿಲ್ಲ. ರಂಗಾಯಣ ರಘು, ಸಾಧು ಕೋಕಿಲಾ, ದೊಡ್ಡಣ್ಣ, ಶರಣ್, ಬುಲೆಟ್ ಪ್ರಕಾಶ್‌ರಂತಹ ಕಾಮಿಡಿ ನಟರು ಇವತ್ತು ಒಂದು ದಿನದ ಕಾಲ್‌ಶೀಟ್‌ಗೆ ಪಡೆಯುವ ಸಂಭಾವನೆಯ ಮೊತ್ತ ಕೇವಲ ಒಂದರಿಂದ ಒಂದೂವರೆ ಲಕ್ಷ ಅಷ್ಟೇ!

ಈಗ ಕಾಮಿಡಿ ನಟ ಬುಲೆಟ್ ಪ್ರಕಾಶ್‌ನನ್ನೇ ಹೀರೋ ಮಾಡಿ ಆತನೊಂದಿಗೆ ರಂಗಾಯಣ ರಘು ಜೊತೆ ಇತರೆ ಕಾಮಿಡಿ ನಟರೆಲ್ಲರನ್ನೂ ಸೇರಿಸಿ ಚಿತ್ರವೊಂದನ್ನು ಮಾಡಲು ಮುಂದಾಗಿದ್ದಾರೆ ಛಾಯಾಗ್ರಾಹಕ ಕಂ ನಿರ್ದೇಶಕ ಜೆ.ಜೆ. ಕೃಷ್ಣ.

ಈ ಚಿತ್ರದಲ್ಲಿ ಬರೀ ಕಾಮಿಡಿ ಸ್ಟಾರ್‌ಗಳಲ್ಲದೆ ಶಿವರಾಜ್‌ಕುಮಾರ್, ಉಪೇಂದ್ರ ಮತ್ತಿತರ ನಾಯಕ ನಟರೂ ಗೆಸ್ಟ್ ಅಪಿಯರೆನ್ಸ್ ಹಾಕಲಿದ್ದಾರಂತೆ. 'ಧಿಮಾಕು' ಚಿತ್ರವನ್ನು ನಿರ್ದೇಶಿಸಿದ್ದ ಮಗೇಶ್ ಕುಮಾರ್ ಇದರ ಚಿತ್ರಕತೆಯನ್ನು ಹೆಣೆದಿದ್ದರೆ ತುಷಾರ್ ರಂಗನಾಥ್ ಸಂಭಾಷಣೆ ಬರೆಯುತ್ತಿದ್ದಾರೆ. ಸದ್ಯದಲ್ಲೇ ಈ ಚಿತ್ರ ಆರಂಭಗೊಳ್ಳಲಿದೆ.

ಕನ್ನಡ ಚಿತ್ರರಂಗದ ಮಟ್ಟಿಗೆ ಹೊಸ ಪ್ರಯತ್ನವಾಗಿರುವ ಈ ಮಲ್ಟಿ ಸ್ಟಾರ್ ಚಿತ್ರ ಬಾಕ್ಸ್ ಆಫೀಸಿನಲ್ಲಿ ಪಲ್ಟಿ ಹೊಡೆಯದಿರಲಿ.

ಸುರೇಶ್ 'ಸಾಧನೆ'!



ಕಿರುತೆರೆಯಲ್ಲಿ 'ಸಾಧನೆ', 'ನಾಕುತಂತಿ' ಮತ್ತು 'ಥಕಧಿಮಿತಾ' ತರಹದ ಯಶಸ್ವಿ ಧಾರಾವಾಹಿಗಳನ್ನು ನಿರ್ದೇಶಿಸಿರುವ ಬಿ.ಸುರೇಶ್ 'ಕಪ್ಪೋರಿ', 'ಗುಬ್ಬಚ್ಚಿಗಳು' ತರಹದ ಸಿನಿಮಾಗಳನ್ನೂ ನಿರ್ದೇಶಿಸಿ/ನಿರ್ಮಿಸಿ ಹೆಸರು ಮಾಡಿದ್ದಾರೆ. ಮೂಲಭೂತವಾಗಿ ನಟನಾ ರಂಗದಿಂದ ಬಂದ ಸುರೇಶ್ ಇತ್ತೀಚೆಗೆ ಸಿನಿಮಾಗಳಲ್ಲೂ ನಟಿಸಿ ಸೈ ಎನಿಸಿಕೊಂಡಿದ್ದಾರೆ. ಆದರೆ ಅದೇ ಅವರನ್ನು ಇವತ್ತು ಒಂದು ರೀತಿಯ ಬಿಕ್ಕಟ್ಟಿಗೆ ದೂಡಿದೆ ಎಂದರೆ ಅಚ್ಚರಿಯಾಗುತ್ತದೆ.

ಇವತ್ತು ಸುರೇಶ್ ಅವರನ್ನು ಹಲವಾರು ನಟನಾ ಅವಕಾಶಗಳು ಬೆನ್ನತ್ತಿ ಬರುತ್ತಿವೆ. ಅವರ ಜಾಗದಲ್ಲಿ ಬೇರೆ ಯಾರೇ ಇದ್ದರೂ ಬಂದ ಅವಕಾಶಗಳನ್ನೆಲ್ಲ ಒಪ್ಪಿಕೊಂಡಿರುತ್ತಿದ್ದರೇನೋ. ಆದರೆ ಸುರೇಶ್ ತಮ್ಮ ಸಿನಿಮಾ ಆಯ್ಕೆಯಲ್ಲಿ ಎಚ್ಚರಿಕೆ ವಹಿಸುತ್ತಿದ್ದಾರೆ. ಇದಕ್ಕೆ 'ಮುರಾರಿ' ಚಿತ್ರಕ್ಕೆ ಸಂಬಂಧಿಸಿದ ಪ್ರಕರಣವೇ ಉತ್ತಮ ಉದಾಹರಣೆ.

ಎಲ್ಲ ಅಂದುಕೊಂಡಂತೇ ಆಗಿದ್ದರೆ ಇಷ್ಟೊತ್ತಿಗೆ 'ಮುರಾರಿ'ಯಲ್ಲಿ ಸುರೇಶ್ ಪೊಲೀಸ್ ಪಾತ್ರದಲ್ಲಿ ನಟಿಸಬೇಕಿತ್ತು. ಈ ಹಿಂದೆಯೇ ಚಿತ್ರದ ಕಥೆ ಹೇಳುವುದಕ್ಕೆ ಮುಂಚೆಯೇ ಸುರೇಶ್ ಅದರಲ್ಲಿ ನಟಿಸುವುದಾಗಿ ಮೌಖಿಕವಾಗಿ ಒಪ್ಪಿಕೊಂಡಿದ್ದರಂತೆ. ಆದರೆ ಯಾವಾಗ ಚಿತ್ರದಲ್ಲಿನ ತಮ್ಮ ಪಾತ್ರದ ಬಗ್ಗೆ ಡಿಟೇಲುಗಳು ಗೊತ್ತಾದವೋ ಆಗ ಸುರೇಶ್‌ಗೆ ಅದರಲ್ಲಿ ನಟಿಸುವ ಮನಸ್ಸೇ ಬರಲಿಲ್ಲವಂತೆ.

ಅವರು ಎಷ್ಟು ಬಾರಿ "ನಾನು ಈ ಚಿತ್ರದಲ್ಲಿ ನಟಿಸುವುದಿಲ್ಲ" ಎಂದು ಹೇಳಿದರೂ 'ಮುರಾರಿ' ಕಡೆಯವರು "ನೀವೇ ನಟಿಸಬೇಕು" ಎಂದು ಪಟ್ಟು ಹಿಡಿದರಂತೆ. ಆಗ ಹೆಚ್ಚು ದುಡ್ಡು ಕೇಳಿದರೆ ತಮ್ಮನ್ನು ಬಿಟ್ಟುಬಿಡಬಹುದು ಎಂದು ತರ್ಕಿಸಿದ ಸುರೇಶ್ ದಿನಕ್ಕೆ ಎರಡು ಲಕ್ಷ ಸಂಭಾವನೆ ಕೊಡಬೇಕು ಎಂದು ಹೆದರಿಸಿದರಂತೆ. ಆದರೆ ಅವರ ಈ ಟ್ರಿಕ್ ವರ್ಕ್‌ಔಟ್ ಆಗದೆ 'ಮುರಾರಿ' ತಂಡದವರು ಸುರೇಶ್ ಕೇಳಿದ ಸಂಭಾವನೆಗೆ ಒಪ್ಪಿಕೊಂಡರಲ್ಲದೆ, ಅದಕ್ಕೊಂದು ಅಡ್ವಾನ್ಸ್ಆಗಿ ಚೆಕ್ ಕೂಡಾ ಸುರೇಶ್ ಕೈಗಿಟ್ಟರಂತೆ. ಇದೆಲ್ಲ ನಡೆಯುವುದಿಲ್ಲ ಎಂದು ಅರ್ಥಮಾಡಿಕೊಂಡ ಸುರೇಶ್ ಕೊನೆಗೆ "ನನಗೆ ನಟಿಸಲು ಸಮಯವಿಲ್ಲ" ಎಂದು ಸುಳ್ಳು ಹೇಳಿ ಜಾರಿಕೊಂಡರಂತೆ.

"ಹಣ, ಅವಕಾಶಕ್ಕಿಂತ ಪಾತ್ರದ ಗುಣಮಟ್ಟ ಮುಖ್ಯ. ಅಷ್ಟೇ ಅಲ್ಲ ಫುಲ್ ಟೈಂ ನಟನೆ ನನ್ನ ಪ್ರೊಫೆಷನ್ ಕೂಡ ಅಲ್ಲ" ಎನ್ನುವ ಸುರೇಶ್‌ರಂಥವರು ಚಿತ್ರರಂಗದಲ್ಲಿ ತುಂಬಾ ವಿರಳ! ■

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 03-06-2009 RNI No. KARKA



ಮಯೂರ ಆದರ್ಶ ದಂಪತಿ

ಕೇವಲ ಹತ್ತು ವರ್ಷಗಳ ದಾಂಪತ್ಯದ ಬಗ್ಗೆ ಸಾವಿರ ಆರೋಪಗಳನ್ನು ಮುಂದಿಟ್ಟು ನಟ ಶೃತಿ ತನ್ನ ಪತಿ ಮಹೇಂದರ್ ಜೊತೆಗಿನ ಸಂಬಂಧ ಕಳಚಿಕೊಂಡು ಹೊರಬಂದುದರ ಬೆನ್ನಿಗೇ 'ಆದರ್ಶ ದಂಪತಿ ಪ್ರಶಸ್ತಿ' ಪ್ರಧಾನಕ್ಕೆ ವೇದಿಕೆಯೊಂದು ಸಜ್ಜಾಗಿದೆ.

ನಟ ಸುದರ್ಶನ್ ಮತ್ತು ಶೈಲಶ್ರೀ ಎಂಬ ಕಲಾವಿದ ದಂಪತಿಗಳು ಕಳೆದ ನಲವತ್ತು ವರ್ಷಗಳಿಂದ ಕಷ್ಟ-ಸುಖಗಳನ್ನು ಸಮಾನವಾಗಿ ಹಂಚಿಕೊಂಡು ಬಾಳ್ವೆ ನಡೆಸುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಹಾಗೆಂದು ಇವರನ್ನು ಗೌರವಿಸಿ 'ಮಯೂರ ಆದರ್ಶ ದಂಪತಿ' ಪ್ರಶಸ್ತಿ ನೀಡಲು ಮುಂದಾಗಿರುವುದು ಸುರ್ವೆ ಪ್ರತಿಷ್ಠಾನ.

ಮೇ 26ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುವ ಅದ್ದೂರಿ ಸಮಾರಂಭದಲ್ಲಿ 'ಆದರ್ಶ ದಂಪತಿ'ಗಳಾಗುತ್ತಿರುವ ಸುದರ್ಶನ್-ಶೈಲಶ್ರೀ ದಂಪತಿಗಳಿಗೆ ನಮ್ಮ ಶುಭಾಷಯಗಳು.

ಬ್ರೇಕ್ ನಂತರ ಬಾಲರಾಜ್



ಶಿವರಾಜ್‌ಕುಮಾರ್ ಜೊತೆಯೇ ಚಿತ್ರರಂಗಕ್ಕೆ ಪರಿಚಯಿಸಲ್ಪಟ್ಟ ಅವರ ಸಂಬಂಧಿ ಬಾಲರಾಜ್ ತೆರೆಮರೆಗೆ ಸರಿದು ಅದೆಷ್ಟೋ ವರ್ಷಗಳೇ ಸಂದಿವೆ. ಶಿವಣ್ಣನ ಜೊತೆ ಆರಂಭದ ದಿನಗಳಲ್ಲಿ ಬಾಲರಾಜ್ ಚಿಕ್ಕಪುಟ್ಟ ಪಾತ್ರಗಳಲ್ಲಿ ಕಾಣಿಸಿದ್ದುಂಟು. ಈತನಲ್ಲಿ ಸ್ವಲ್ಪ ಪ್ರತಿಭೆಯೂ ಇದ್ದದ್ದರಿಂದ ಉದ್ಯಮದ ಗಮನವನ್ನು ಸೆಳೆದಿದ್ದರು. ಆದರೆ ನಾಯಕ ನಟನಾಗುವ ಹಾಳಾದ ಆಶೆ ಬಾಲರಾಜ್‌ನನ್ನು ಸೆಳೆಯಿತು. ಅನಂತರ ಅವರು ಪೋಷಕ ನಟನೆಗೆ ಸಲಾಂ ಎಂದರು. ಆದರೆ ಅತ್ತ ನಾಯಕನಾಗಿ ಯಶಸ್ವಿಯಾಗಲಿಲ್ಲ, ಇತ್ತ ಪೋಷಕ ನಟನಾಗಿಯೂ ಮುಂದುವರೆಯಲಿಲ್ಲ, ಹೀಗಾಗಿ ಆತನ ವೃತ್ತಿಜೀವನಕ್ಕೆ ಬಲವಂತದ 'ಬ್ರೇಕ್' ಬದ್ದಿತ್ತು, ಕೊನೆಗೆ ಬಾಲರಾಜ್ ಟಿವಿ ಧಾರಾವಾಹಿಗಳಲ್ಲಿ ಕಾಣಿಸಿಕೊಳ್ಳಲಾರಂಭಿಸಿದರು.

ಬ್ರೇಕ್‌ನ ನಂತರ ಬಾಲರಾಜ್ ಮತ್ತೆ ಈಗ ನಾಯಕನಟನಾಗಿ ಕಾಣಿಸಿಕೊಳ್ಳಲು ಮುಂದಾಗಿದ್ದಾರೆ. ಚಿತ್ರದ ಹೆಸರು 'ಮಣ್ಣಿನ ಮಡಿಲು'. ಆ ಕಾಲದಲ್ಲಿ ಸ್ವಲ್ಪ ಮಟ್ಟಿಗೆ ಸುರಸುಂದರನಾಗಿದ್ದ ಬಾಲರಾಜ್ ಮುಖದಲ್ಲಿ ಈಗ ವಯಸ್ಸಿನ ಕುರುಹುಗಳು ಕಾಣಿಸುತ್ತಿವೆ. ಆದರೂ ಬಾಲರಾಜ್ ಗೆದ್ದೇ ಗೆಲ್ಲುತ್ತೇನೆಂಬ ಅತ್ಯುತ್ಸಾಹದಲ್ಲಿ ಮಾತನಾಡುತ್ತಿದ್ದಾರೆ. ಯಾರಿಗೆ ಗೊತ್ತು? ಯಾವ ಹುತ್ತದಲ್ಲಿ ಯಾವ ಹಾವು ಇದೆ ಎಂದು, ಅಲ್ಲವೇ?

ಅವರ ಪ್ರಯತ್ನಕ್ಕೆ ಒಂದಿಷ್ಟು ಮೆಚ್ಚುಗೆ ಇರಲಿ.

ಇನ್ಮುಂದೆ ಕನ್ನಡ ಚಿತ್ರ ಗ್ಯಾರಂಟಿ ಹಿಟ್

ಚೇಂಬರ್ ಅಧ್ಯಕ್ಷೆ ಜಯಮಾಲಾ ಮತ್ತು ಕೆ.ಸಿ.ಎನ್.ಚಂದ್ರು ಪ್ರಕಾರ ಜೂನ್ ತಿಂಗಳ ನಂತರ ಬಿಡುಗಡೆಯಾಗುವ ಕನ್ನಡ ಚಿತ್ರಗಳೆಲ್ಲಾ ಸೂಪರ್ ಹಿಟ್ ಆಗುತ್ತವಂತೆ.

ಈ ತನಕ ಥಿಯೇಟರ್‌ಗಳಲ್ಲಿ ಚಿತ್ರ ಪ್ರದರ್ಶನದ ಸಮಯ ಸರಿಯಾಗಿಲ್ಲದ ಕಾರಣ ಕನ್ನಡ ಚಿತ್ರಗಳೆಲ್ಲ ಅಡ್ಡಡ್ಡ ಮಲಗುತ್ತಿದ್ದವು ಎಂಬ ಹೊಸ ತರ್ಕವನ್ನು ಜಯಮ್ಮ ಮತ್ತು ಚಂದ್ರು ಸಂಶೋಧಿಸಿದ್ದಾರೆ. ಆ ಕಾರಣಕ್ಕಾಗಿಯೇ ಅವರು ಹೊಸ ಟೈಂಟೇಬಲ್ ಅನ್ನು ಸಿದ್ಧಪಡಿಸಿ ಅದಕ್ಕೆ ಸರ್ಕಾರದ ಒಪ್ಪಿಗೆಯನ್ನೂ ಪಡೆದಿದ್ದಾರೆ.

ಹೀಗಾಗಿ ಹೊಸ ವೇಳೆಯಲ್ಲಿ ಮುಂದಿನ ವಾರದಿಂದ ಚಿತ್ರಮಂದಿರಗಳು ಚಿತ್ರ ಪ್ರದರ್ಶನ ಮಾಡಲಿವೆ. ಅದರ ಪ್ರಕಾರ 8-30 ಗಂಟೆಗೆ ದಿನದ ಕೊನೆಯ ದೇಖಾವೆ ಇರುತ್ತದೆ. ಅದು ಅತ್ತ ಊಟದ ಸಮಯವೂ ಅದಲ್ಲ, ಇತ್ತ ಊಟಮಾಡಿ ನಿದ್ರೆ ಮಾಡುವ ಸಮಯವೂ ಅದಲ್ಲ, ಹಾಗಾಗಿ ಆ ಸಮಯದಲ್ಲಿ ಯಾರು ಬಂದು ಸಿನಿಮಾ ನೋಡುತ್ತಾರೋ? ಆ ಪರಮಾತ್ಮನಿಗೆ ಗೊತ್ತು. ಆದರೂ ಸಿನಿಮಾದವರ ಈ ಹೊಸ ನೀತಿಯನ್ನು ಅಷ್ಟು ಸುಲಭವಾಗಿ ತಳ್ಳಿಹಾಕುವುದು ಬೇಡ. ಒಂದು ವೇಳೆ ಒಳ್ಳೆಯದಾದರೆ ಆಗಲಿ ಅಲ್ಲವೇ?



ರಘುವೀರ್: ವನವಾಸದಿಂದ ಮತ್ತೆ ಗಾಂಧಿನಗರಕ್ಕೆ



ಈ ವರ್ಷ ಇನ್ನೂ ಒಂದೇ ಒಂದು ಸಿನಿಮಾ ನೆಟ್ಟಗೆ ಬಾಕ್ಸಾಫೀಸ್‌ನಲ್ಲಿ ಜಯಭೇರಿ ಬಾರಿಸಿಲ್ಲ. ಈಗ ಎಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ ಪ್ರತಿ ಶುಕ್ರವಾರ ಸಿನಿಮಾದವರ ಪಾಲಿಗೆ ಅಶುಭವಾಗುತ್ತಿದ್ದು ವಾರಕ್ಕಿಬ್ಬರು ನಿರ್ಮಾಪಕರು ಮಕಾಡೆ ಮಲಗುತ್ತಿದ್ದಾರೆ. ಈ ಸೋಲುಗಳಿಂದಾಗಿ ಹೊಸಬರು ದಿಗ್ಭ್ರಾಂತರಾಗಿದ್ದರೆ; ಹಳಬರು ಕೈಕಟ್ಟಿಕುಳಿತುಕೊಂಡಿದ್ದಾರೆ. ಗಾಂಧಿನಗರ ಇಂತಹ ದುಸ್ಥಿತಿಯಲ್ಲಿರುವಾಗಲೇ ರಘುವೀರ್ ಎಂಬ ಮಾಜಿ ನಟ ಮತ್ತೆ ಚಿತ್ರರಂಗದತ್ತ ಹೆಜ್ಜೆಹಾಕಿದ್ದಾರೆ.

ಸುಮಾರು ಎರಡು ದಶಕಗಳ ಹಿಂದೆ 'ಚೈತ್ರದ ಪ್ರೇಮಾಂಜಲಿ' ಎಂಬ ಯಶಸ್ವೀ ಚಿತ್ರದ ಮುಖಾಂತರ ಈ ಕೃಷ್ಣವರ್ಣದ ಅಂದಿನ ಯುವಕ ಚಿತ್ರರಂಗಕ್ಕೆ ಪರಿಚಿತನಾಗಿದ್ದ, ಆದರೆ ಆ ನಂತರ ಆತ ಗಾಂಧಿನಗರದತ್ತ ತಿರುಗಿಯೂ ನೋಡಿರಲಿಲ್ಲ.

ರಘುವೀರ್ ಆಗರ್ಭ ಶ್ರೀಮಂತ ಕುಟುಂಬದಿಂದ ಬಂದವನು. ತನ್ನೊಂದಿಗೆ 'ಚೈತ್ರದ ಪ್ರೇಮಾಂಜಲಿ' ಚಿತ್ರದಲ್ಲಿ ನಟಿಸಿದ್ದ ಸಿಂಧುಳನ್ನು ಪ್ರೇಮಿಸಿದ. ಅದಕ್ಕೆ ಆತನನ್ನು ಹೆತ್ತವರು ವಿರೋಧ ವ್ಯಕ್ತಪಡಿಸಿದಾಗ ಅವರನ್ನು ತೊರೆದು ತನ್ನ ಪ್ರೇಯಸಿಯನ್ನೇ ಮದುವೆಯಾಗಿದ್ದ, ಆದರೆ ಅದ್ಯಾಕೋ, ಅವರ ದಾಂಪತ್ಯ ಜೀವನ ಸುಗಮವಾಗಿರಲಿಲ್ಲ. ಕೆಲ ವರ್ಷಗಳ ನಂತರ ಸಿಂಧು ಚೆನ್ನೈಗೆ ಹಾರಿಹೋಗಿ ಅಲ್ಲಿನ ಟಿವಿ ಧಾರಾವಾಹಿಗಳಲ್ಲಿ ನಟಿಸುವ ಮೂಲಕ ತನ್ನ ಜೀವನವನ್ನು ಏಕಾಂಗಿಯಾಗಿ ಸಾಗಿಸಲಾರಂಭಿಸಿದಳು. ಆದರೆ ರಘವೀರ್ ಮಾತ್ರ ಬೆಂಗಳೂರಿನಲ್ಲಿ ಅತ್ತ ತಂದೆ ತಾಯಿಯೂ ಇಲ್ಲದೆ, ಇತ್ತ ಕೈಹಿಡಿದವಳೂ ಇಲ್ಲದೆ ಕೇರಾಫ್ ಫುಟ್‌ಪಾತ್ ಆಗಿ ತಿಂಡಿ-ಕಾಫಿಗೂ ಒದ್ದಾಡುತ್ತಿದ್ದ.

ರಘುವೀರ್ ಮತ್ತು ಸಿಂಧುಳ ಜೀವನ ಹೀಗೇ ಮುಂದುವರೆಯುತ್ತಿದ್ದಾಗ ಒಂದು ದಿನ ಆಕೆ ಅಪಘಾತದಲ್ಲಿ ಅಸುನೀಗಿದಳು. ಆಗ ರಘುವೀರ್‌ನನ್ನು ಹೆತ್ತವರು ಆತನಿಗೆ ಮಾವನ ಮಗಳನ್ನೇ ನೀಡಿ ಮದುವೆ ಮಾಡಿದರು. ಇದು ಈತನ ವೈಯಕ್ತಿಕ ಜೀವನದ ದಾರುಣ ಕಥೆ.

ಈಗ ಇದನ್ನೇ ಚಿತ್ರದ ಕತೆಯನ್ನಾಗಿಸಿ ಸಿನಿಮಾ ಮಾಡಲು ರಘುವೀರ್ ಮುಂದಾಗಿದ್ದಾನೆ. ಚಿತ್ರದ ಹೆಸರು 'ಈ ಪ್ರೀತಿ ಯಾರಿಗೋಸ್ಕರ'. ಅಂದಹಾಗೆ, ಈ ಚಿತ್ರದ ನಿರ್ಮಾಪಕ, ನಿರ್ದೇಶಕ, ಸಂಗೀತ ನಿರ್ದೇಶಕ ಮತ್ತು ನಾಯಕ ನಟ ಎಲ್ಲವೂ ರಘುವೀರ್!

ಸಿನಿಮಾದವರ ವೈಯಕ್ತಿಕ ಜೀವನ ಬೆಳ್ಳಿ ಪರದೆಯ ಮೇಲೆ ಕಾಣಿಸಿಕೊಂಡು ಗೆದ್ದದು ಬಹಳ ಅಪರೂಪ. ಇದೆಲ್ಲ ಗೊತ್ತಿದ್ದರೂ ರಘುವೀರ್ ಈ ಸಾಹಸಕ್ಕೆ ಇಳಿದಿದ್ದಾರೆ.

ಹಂಚಿದರು ಮಜ್ಜಿಗೆಯಾ!



ಪರರ ಹೊಟ್ಟೆ ಮೇಲೆ ಹೊಡೆದು ತಮ್ಮ ಹೊಟ್ಟೆ ತುಂಬಿಸಿಕೊಳ್ಳುವವರೇ ಹೆಚ್ಚಾಗಿರುವ ಇಂದಿನ ಕಾಲದಲ್ಲಿ ಸೂಪರ್ ಸ್ಟಾರ್ ರಜನಿಕಾಂತ್ ಬಸವಳಿದವರ ಹೊಟ್ಟೆ ತಣ್ಣಗೆ ಮಾಡಿದ ಘಟನೆಯೊಂದು ಕೇಳಿಬಂದಿದೆ.

ಸದ್ಯ 'ಯಂದಿರಮ್' ಚಿತ್ರದ ಚಿತ್ರೀಕರಣದಲ್ಲಿ ಬ್ಯುಸಿಯಾಗಿರುವ ರಜನಿ ಅಂದು ವಿರಾಮಕ್ಕಾಗಿ ಚೆನ್ನೈ ಹತ್ತಿರವಿರುವ ಕೇಲಂಬಾಕ್ಕಂನ ತಮ್ಮ ಫಾರ್ಮ್ ಹೌಸ್‌ಗೆ ಹೋಗಿದ್ದರಂತೆ. ತಮ್ಮ ಫಾರ್ಮ್ ಹೌಸ್‌ನ ತಂಪು ಗಾಳಿಯಲ್ಲಿ ವಿರಮಿಸುತ್ತಿದ್ದ ರಜನಿಗೆ ರಸ್ತೆಯಲ್ಲಿ ರಣಬಿಸಿಲಿಗೆ ಮೈಯೊಡ್ಡಿ ನಿತ್ರಾಣರಾಗಿ ನಡೆದಾಡುತ್ತಿದ್ದ ದಾರಿಹೋಕರು ಕಾಣಿಸಿದ್ದಾರೆ.

ಮೈ ತೇವಗೊಳ್ಳುವಷ್ಟು ಬೆವರು ಸುರಿಸುತ್ತಾ ಜನ ಓಡಾಡುತ್ತಿದ್ದ ಚಿತ್ರಣವನ್ನು ಕಂಡ ರಜನಿಯ ಮನಸ್ಸು ಒದ್ದೆಯಾಗಿದೆ. ತಕ್ಷಣ ತಮ್ಮ ಸಹಾಯಕರನ್ನು ಕರೆದು ಒಂದು ಕೊಳಗದ ತುಂಬಾ ತಣ್ಣನೆಯ ಮಜ್ಜಿಗೆ ಮಾಡಿಸಿ ಸ್ವತಃ ತಾವೇ ಗೇಟಿನ ಬಳಿ ನಿಂತು ಬಿಸಿಲಲ್ಲಿ ಬೆಂದವರ ಹೊಟ್ಟೆ ತಣ್ಣಗಾಗಿಸಿದ್ದಾರೆ..

ಇದು ರಜನಿಯ ಮಾನವೀಯತೆಗೆ ಒಂದು ನಿದರ್ಶನ ಮಾತ್ರ

ಲತಾರ ಕ್ರಿಕೆಟ್ ಲವ್!



ಎಷ್ಟೋ ಜನ ಖ್ಯಾತನಾಮರು ತಮ್ಮ ವ್ಯಾಪ್ತಿಗೆ ಹೊರತಾದ ಮತ್ತು ಬಹು ದೂರವಿರುವ ಕ್ಷೇತ್ರದ ಬಗ್ಗೆ ಅಪಾರವಾದ ಉತ್ಸಾಹವನ್ನು ಇರಿಸಿಕೊಂಡಿರುತ್ತಾರೆ. ಅದಕ್ಕೆ ಉದಾಹರಣೆ ಕ್ರಿಕೆಟ್ ಬಗ್ಗೆ ಗಾನ ಕೋಗಿಲೆ ಲತಾ ಮಂಗೇಶ್ಕರ್ ಅವರಿಗೆ ಇರುವ ಆಸಕ್ತಿ.

ತಮ್ಮ ವಿಶಿಷ್ಟ ಕಂಠದಿಂದಲೇ ಸಂಗೀತ ಶ್ರೋತೃಗಳನ್ನು ಸೆಳೆದಿರುವ ಗಾಯಕಿ ಲತಾ ಮಂಗೇಶ್ಕರ್ ಅವರಿಗೆ ಕ್ರಿಕೆಟ್ ಬಗ್ಗೆ ಎಷ್ಟು ಕ್ರೇಜ್ ಅಂದರೆ ಅದು ಒನ್ ಡೇ ಕ್ರಿಕೆಟ್ ಇರಲಿ, ಐದು ದಿನಗಳ ಟೆಸ್ಟ್ ಮ್ಯಾಚ್ ಆಗಿರಲಿ ಎಲ್ಲವನ್ನೂ ಅತ್ಯಂತ ಖುಷಿಯಿಂದ ವೀಕ್ಷಿಸುತ್ತಾರಂತೆ. ಈಗ ನಡೆಯುತ್ತಿರುವ ಐಪಿಎಲ್ ಹಾಗೂ ಟ್ವೆಂಟಿ ಟ್ವೆಂಟಿ ಆಟವನ್ನು ಕೂಡ ತಪ್ಪದೇ ವೀಕ್ಷಿಸುವುದು ಲತಾ ಅವರ ದಿನಚರಿಯಂತೆ.

ಸಂಗೀತವನ್ನೇ ಉಸಿರಾಗಿಸಿಕೊಂಡಿರುವ ಲತಾ ಮಂಗೇಶ್ಕರ್‌ತರಹದ ಗಾಯಕಿಗೆ ಈ ಪರಿಯ 'ಕ್ರಿಕೆಟ್ ಹುಚ್ಚು' ಇದೆ ಎಂದರೆ ನಂಬಲಸಾಧ್ಯವಲ್ಲವೇ?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44